(*c*) number of persons on roll seeking employment;

(*d*) whether there is any special Employment Exchange for Physically Handicapped?

SRI A. B. JAKANUR (Minister for Labour).—

(*a*) 33 (as on 31-12-1981)

(*b*) 19,922

(c) 6,30,169 (as on 31-12-1981)

(d) Yes, there is a Special Employment Exchange for Physically Hanicapped at Bangalore.

Announcements

MR. SPEAKER.—The Business Advisory Committee which met on 9th June 1982 have recommended that the House may take up the following programme of business during the current sitting.

10th and 11th June 1982	(1) Legislative Business (Bills)
	(2) Official Resolution regarding Estate Duty
14th June 1982	Government business
15th June to 16th July 1982	Voting of Demands for Grants on Budget (exclusive as non-official days)

(2) I have received letters from Sri K. H. Srinivas and Sri Azeez Sait stating that they have joined Congress-(I) Legislature Party. I have also received a letter from the Leader of the Congress-(I) Legislature Party that Sri K. H. Srinivas and Sri Azeez Sait have been admitted to their party.

(3) I have received a letter from Sri C. Rudrappa that he will remain as an independent Member.

(4) The United Democratic Front has elected Sri M.C. Nanaiah as the Deputy Leader of the Opposition and I have received a letter to that effect.

MATTER UNDER RULE 312

Reg.—*Police Firing in Nagasamudra Village, Bhadravathi*

MR. SPEAKER.—Sri A. Lashmisagar and others to raise a matter regarding the Police firing on farmers in Nagasamudra village, Bhadravathi taluk on 25th May 1982, resulting in the death of three innocent persons. Hon'ble Members who have given notices of Calling Attention in this regard may also participate in the discussion.

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ೩೧೨ನೇ ನಿಯಮಾವಳಿ ಪ್ರಕಾರ ಈ ವಿಚಾರ ೨೫-೫-೧೯೭೨ ರಂದು, ನಾಗಸಮುದ್ರದಲ್ಲಿ ನಡೆದ ಹತ್ಯಾಕಾಂಡದ ಬಗ್ಗೆ, ಕರ್ಮಕಾಂಡದ ಬಗ್ಗೆ, ರೈತರ ಹತ್ಯಾಕಾಂಡದ ಬಗೆ, ಇರತಕ್ಕದ್ದು. ಈಗಾಗಲೇ ಬೇರೆ ರೂಪದಲ್ಲಿ ಇದರ ಬಗ್ಗೆ ವಿಚಾರಣೆ ನಡೆದಿದೆ ಎನ್ನುವ ಮಾತನ್ನು ನಾನು ಗಮನದಲ್ಲಿಟುಕೊಂಡು ಈ ದಿನ ನಾನು ಹೇಳಬೇಕಾದ ವಿಚಾರವನ್ನು ಹೇಳುವುದಕ್ಕೆ ಪ್ರಾರಂಭ ಮಾಡುತ್ತೇನೆ. ಈ ಘಟನೆ ಬಗ್ಗೆ ಸ್ಥಳೀಕರಲ್ಲಿಗೆ ಹೋಗಿ ಅಲ್ಲಿನ ವಿಚಾರವನ್ನು ಕಂಡು ಅವರೊಡನೆ ಮಾತನಾಡಿ ಘಟನೆ ನಡೆದ ಸ್ಥಳವನ್ನು ಅಜಮಾಯಿಷಿ ಮಾಡಿ ಮತ್ತು ಅದರ ಬಗ್ಗೆ ಈ ದಿನ ಸಾಧ್ಯವಾದಷ್ಟು ಅಲ್ಲಿನ ಜನರ ಮನಸ್ಸನ್ನು, ಅವರ ಇಂಗಿತವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ ನಂತರ, ಅವರು ಕೊಟ್ಟ ಹೇಳಿಕೆಗಳ ಆಧಾರದ ಮೇಲೆ ಮತ್ತು ಪತ್ರಿಕೆಗಳಲ್ಲಿ ಈ ಘಟನೆ ಬಗ್ಗೆ ಬಂದ ಪತ್ರಿಕಾ ಆಧಾರದ ಮೇಲೆ, ನಾನು ಹೇಳತಕ್ಕ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನಪಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರಾ ನದಿ ದಡದಲ್ಲಿ ಇರತಕ್ಕವು ಈ ಮೂರು ಗ್ರಾಮಗಳು ಸನ್ಯಾಸಿ, ಕೊಡಮಗ್ಗಿ ಮತ್ತು ನಾಗಸಮುದ್ರ. ಇವು ಹೊಳೆಹೊನ್ನೂರಿನಿಂದ ಮುಂದೆ ಹೋದರೆ ಸಿಗತಕ್ಕ ಮೂರು ಹಳ್ಳಿಗಳು. ಇವು ಪ್ರಶಾಂತವಾದ ಪ್ರದೇಶಗಳು. ರೈತಾಪಿ ಜನರು ಇರತಕ್ಕ ಪ್ರದೇಶ. ಖಂಡಸಾರಿ ಫ್ಯಾಕ್ಟರಿ ಬಿಟ್ಟರೆ ಇನ್ಯಾವ ಕೈಗಾರಿಕೆಯೂ ಅಲ್ಲಿ ಕಾಣಿಸಲಿಲ್ಲ; ಇನ್ಯಾವ ಕೈಗಾರಿಕೆಗಳೂ ಅಲ್ಲಿ ಇಲ್ಲವೆಂದು ಕೂಡಾ ಅಲ್ಲಿನ ಜನರು ಹೇಳಿದರು. ಇವು ಶಿವಮೊಗ್ಗ ಜಿಲ್ಲೆಗೆ ಸೇರಿರತಕ್ಕ ಪ್ರದೇಶ. ಶಿವಮೊಗ್ಗ ಜಿಲ್ಲೆಯಲ್ಲಿ ರೈತರ ಚಳುವಳಿ ವಿಫುಲವಾಗಿ ನಡೆದಿದೆ. ಮತ್ತು ಬಹಳ ದೀರ್ಘ ಕಾಲದಿಂದ ನಡೆದುಕೊಂಡು ಬಂದಿರತಕ್ಕ ಚಳುವಳಿ ಅಲ್ಲಿ ಇದೆ. ರೈತರ ಪ್ರಶ್ನೆ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಮಾಹಿತಿ ಕೊಡಲಾಗಿದೆ. ಮತ್ತು ಇದರ ಬಗ್ಗೆ ಸರ್ಕಾರದವರು ರೈತರ ನಾಯಕರುಗಳನ್ನು ಶೀಘ್ರವೇ ಜುಲೈ ೯ರಂದು ಮುಖ್ಯಮಂತ್ರಿಗಳು ಅವರ ಬೇಡಿಕೆಗಳ ಬಗ್ಗೆ ವಿಚಾರ ಮಾಡುತ್ತೇವೆನ್ನುವ ಮಾತನ್ನು ನಾನು ಇಲ್ಲಿ ಸ್ಮರಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ಸ್ಥಳಕ್ಕೆ ಹೋಗುವುದಕ್ಕೆ ಮೊದಲು ಜೆ. ಎಚ್. ಪಟೇಲರು ಮತ್ತು ಮೇಲ್ಮನೆ ಸದಸ್ಯರಾದ ಶ್ರೀ ಎಂ. ಸಿ. ಪೆರುಮಾಳ ಅವರು ನನ್ನ ಜೊತೆ ಇದ್ದರು. ನಾವು ಮೂರೂ ಜನರು ಕೆಲವು ರಾಜಕೀಯ ಪಕ್ಷಗಳ ಮುಂದಾಳುಗಳ ಜೊತೆ ಈ ಪ್ರದೇಶಕ್ಕೆ ಭೇಟಿ ಕೊಟ್ಟೆವು. ಆ ಹಳ್ಳಿಗಳಿಗೆ ನಾವು ಹೋಗತಕ್ಕ ವಿಚಾರವನ್ನು ಮೊದಲೇ ತಿಳಿಸಲಾಗಿದ್ದಿತು. ಅವರೆಲ್ಲರೂ ತಮ್ಮ ದುಃಖ ದುಮ್ಮಾನುಗಳನ್ನು, ತಾಪ ಇತ್ಯಾದಿಗಳನ್ನು ಹೇಳಿಕೊಳ್ಳುವುದಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಬಂದಿದ್ದರೆಂದು ಈ ಸಮಯದಲ್ಲಿ ಹೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ ಇದರ ಜೊತೆ ನಾವು ಈ ಸ್ಥಳಕ್ಕೆ ಭೇಟಿ ಕೊಡುವ ಮೊದಲು ರೈತರ ಸಂಘಟನೆಗೆ ಮುಖ್ಯಸ್ಥರಾದಂತಹ ರುದ್ರಪ್ಪನವರನ್ನು ಭದ್ರಾವತಿಯಲ್ಲಿ ಕಂಡು ನಂತರ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇವೆ. ಆದುದರಿಂದ ಸಾಕಷ್ಟು ಅಲ್ಲಿ ನಡೆದ ಘಟನೆ ಬಗ್ಗೆ ಸಾಕ್ಷೀಭೂತವಾಗಿ ವಿಚಾರವನ್ನು ಸಂಗ್ರಹಣೆ ಮಾಡಿದ್ದೇವೆಂಬ ಒಂದು ನಂಬಿಕೆ ನನಗಿದೆ. ಮತ್ತು ನಮ್ಮ ಜೊತೆ ಬಂದ ನಮ್ಮ ಸ್ನೇಹಿತರಿಗೂ ಇದೆ.

ಆ ದಿನ ನಡೆದಂತ ವಿದ್ಯಾಮಾನಗಳಬಗ್ಗೆ ಪ್ರತ್ಯಕ್ಷದರ್ಶಿಗಳ ವಾಕ್ ಅಂದರೆ ಮಾತಿನ ಟೇಪ್ ರೆಕಾರ್ಡ್ ಮಾಡಿಕೊಂಡು ಬಂದಿದ್ದೇವೆ ಅದನ್ನು ತಮ್ಮ ವಶಕ್ಕೆ ಕೊಡುವುದಕ್ಕೆ ನನಗೆ ಅಭ್ಯಂತರ ಏನೂ ಇಲ್ಲ. ನಾನು ಇಷ್ಟೆಲ್ಲಾ ಏತಕ್ಕೆ ವಿವರಣೆ ಕೊಡುತ್ತಿದ್ದೇನೆಂದರೆ ಕೇವಲ ಅವರಿಂದ ಇವರಿಂದ ಕೇಳಿ ಈ ವಿಚಾರಗಳನ್ನು ತಮ್ಮ ಮುಂದೆ ಮಂಡಿಸುತ್ತಿಲ್ಲ. ಸಾಕಷ್ಟು ತಿಳುವಳಿಕೆಯ ಆಧಾರ ಇದೆ, ಸಾಕ್ಷಿಭೂತವಾದಂತ ಆಧಾರ ಇದೆ. ಸ್ವಾಮಿ, ಸನ್ಯಾಸಿ, ಕೋಡಮಗ್ಗಿ, ಮುಂಗೋಟಿ ಮತ್ತು ನಾಗಸಮುದ್ರ ಗ್ರಾಮಗಳು ಅಕ್ಕಪಕ್ಕದಲ್ಲಿವೆ. ೨೫ನೇ ತಾರೀಖು ಸಚಿವ ಮಾನ್ಯ ಕಾಗೋಡು ತಿಮ್ಮಪ್ಪನವರು ಮುಂಗೋಟಿ ಗ್ರಾಮದಲ್ಲಿ ರೈತ ಮತ್ತು ರೈತ ಕಾರ್ಮಿಕರ ಸಭೆಯನ್ನು ಏರ್ಪಾಡು ಮಾಡಿದ್ದರು. ಅಂದಿನ ಸಭೆಯಲ್ಲಿ ಮಾನ್ಯ ತಿಮ್ಮಪ್ಪನವರು ಪಾಲ್ಗೊಳ್ಳುತ್ತಾರೆಂದು ಹಳ್ಳಿಗಳಲೆಲ್ಲಾ ಕರ ಪತ್ರವನ್ನು ಹಂಚಿದ್ದಾರೆ. ಕಾಗೋಡು ತಿಮ್ಮಪ್ಪನವರ ಬಗ್ಗೆ ಶಿವಮೊಗ್ಗ ಜಿಲ್ಲೆಯ ರೈತರು ಮತ್ತು ರೈತ ಕಾರ್ಮಿಕರು ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿಲ್ಲ ಎನ್ನುವಂತ ಮಾತನ್ನು ಅಲ್ಲಿನ ರೈತರು ಹೇಳಿದರು. ಸಭೆ ಮಾಡುವುದಕ್ಕೆ ಎರಡು ಕಾರಣಗಳನ್ನು ಹೇಳಿದ್ದಾರೆ. ಮೊದಲನೆಯದು ಶ್ರೀಮಾನ್ ತಿಮ್ಮಪ್ಪನವರು ರೈತರ ಸಂಘಟನೆಗೆ ರಾಜಕೀಯ ಬಣ್ಣವನ್ನು ಕೊಟ್ಟು ಅದನ್ನು ಮುರಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು. ಎರಡನೆಯದು ಈ ಸಭೆಗೆ ಜನ ಇಲ್ಲದೇ ಹೋದರು ತಿಮ್ಮಪ್ಪನವರು ತಮ್ಮ ಮಂತ್ರಿ ಪದವಿಯ ಅಧಿಕಾರವನ್ನು ಉಪಯೋಗಿಸಿಕೊಂಡು ಅಂದಿನ ಸಭೆ ನಡೆಸುವುದಕ್ಕೆ ಪ್ರಯತ್ನ ಪಟ್ಟಿರುವುದು

ಸರಿಯಾದುದಲ್ಲ ಎನ್ನುವ ಮಾತನ್ನು ಮೂರೂ ಗ್ರಾಮಗಳ ಜನರು ಹೇಳಿದ್ದಾರೆ. ಅಲ್ಲದೆ, ನಾಗಸಮುದ್ರದ ರೈತರು ಈ ಸಭೆಯನ್ನು ನಡೆಸುವುದಕ್ಕೆ ಬಿಡುವುದಿಲ್ಲ ಬಂದರೆ ಘೇರಾವೋ ಮಾಡುತ್ತೇವೆ; ಸಭೆಗೆ ಬಹಿಷ್ಕಾರ ಮಾಡುತ್ತೇವೆ ಎನ್ನುವ ಕರಪತ್ರವನ್ನು ಹೊರಡಿಸಿದ್ದಾರೆ, ಅವುಗಳನ್ನು ತಮಗೆ ತೋರಿಸುವುದಕ್ಕೆ ಪ್ರಯತ್ನಪಟ್ಟಿದ್ದೇನೆ. ಈ ಎರಡು ಕಾರಣಗಳಿಗೋಸ್ಕರ ಮೂರು ಹಳ್ಳಿಗರ ಜನರು ನಾಗಸಮುದ್ರದ ಹತ್ತಿರ ರಸ್ತೆಗೆ ಅಡ್ಡಲಾಗಿ ಗಾಡಿ, ಟಿಲ್ಲರುಗಳು ಮತ್ತು ಟ್ರ್ಯಾಕ್ಟರ್‌ಗಳು ಇತ್ಯಾದಿ ವಾಹನಗಳನ್ನು ಅಡ್ಡಲಾಗಿ ನಿಲ್ಲಿಸಿ, ಮಂತ್ರಿಗಳಿಗೆ ಸಭೆಗೆ ಹೋಗದಂತೆ ಮಾಡುವಂತ ಪೂರ್ವಯೋಜಿತ ಸಿದ್ಧತೆಯನ್ನು ಮಾಡಿದ್ದರು. ಮಧ್ಯಾಹ್ನದ ಹೊತ್ತಿಗೆ ಸರಿಯಾಗಿ ಎರಡು ವ್ಯಾನ್ ಮತ್ತು ಎರಡು ಜೀಪುಗಳಲ್ಲಿ ಶಸ್ತ್ರಸಜ್ಜಿತ ಪೋಲೀಸಿನವರು ಬಂದು, ರಸ್ತೆಗೆ ಅಡ್ಡಲಾಗಿಟ್ಟಿರುವ ಗಾಡಿ ಮತ್ತಿತರ ವಾಹನಗಳನ್ನು ತೆಗೆಯಿರಿ ಎಂದು ಹೇಳಿದರೂ ಜನ ತೆಗೆಯಲಿಲ್ಲ. ಅವರ ವಾಡಿಕೆಯಂತೆ ಅವರ ವಾಹನಗಳ ಮೂಲಕವೇ ಮತ್ತು ಕೈಗಳಿಂದ ವಾಹನಗಳನು ಚೆಲ್ಲಾಪಿಲ್ಲಿಯಾಗಿ ಕಿತ್ತುಹಾಕುವುದಕ್ಕೆ ಪ್ರಯತ್ನ ಪಟ್ಟರು. ಕೆಲವು ಗಾಡಿಗಳಿಗೆ ಜಖಂ ಕೂಡ ಆಯಿತು. ಗಾಡಿಗಳಿಗೆ ಜಖಂ ಆದಮೇಲೆ ಮಾತಿನ ವಾಗ್ವಾದ, ಮಾತಿನ ಯುದ್ಧ ನಡೆಯಿತು. ಸುಮಾರು ೨-೨ ಗಂಟೆಗಳಕಾಲ ನಡೆಯಿತು. ಅಲ್ಲಿ ಸೇರಿದಂತೆ ಜನ ಸುಮಾರು ೪೦೦೦ ದಿಂದ ೫೦೦೦ವರೆಗೆ ಇತ್ತು ಅದರಲ್ಲಿ ಸುಮಾರು ಒಂದು ಸಾವಿರ ಜನ ಮಹಿಳೆಯರೇ ಇದ್ದರು ಎಂದು ಅಲ್ಲಿ ಹೇಳಿದ್ದಾರೆ, ಮಹಿಳೆಯರು ಹೋಗುವುದಕ್ಕೆ ಮುಖ್ಯ ಕಾರಣ ಪೋಲೀಸ್ ಅಧಿಕಾರಿಗಳ ದುರ್ವರ್ತನೆ ಮತ್ತು ದುರ್ಭಾಷೆಗಳಿಗೆ ಛೀಮಾರಿ ಹಾಕುವುದಕ್ಕಾಗಿ ಹೋಗಿದ್ದಾರೆ. ಪೋಲೀಸಿನವರು ಏನೇನು ಮಾತುಗಳನ್ನು ಹೇಳಿದ್ದರು ಎಂಬುದನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಘಟನೆ ಆಗುವುದಕ್ಕೆ ಹಿಂದೆ ಅನೇಕ ಸಲ ಜೈಲಿಗೆ ಹೋದಂತವರು, ಬೇರೆರೀತಿಯಲ್ಲಿ ಪೋಲೀಸಿನವರ ವಶದಲ್ಲಿ ಇದ್ದು ಅನೇಕ ವಿಧವಾದ ಬೈಗುಗಳಿಗೆ ಗುರಿಯಾಗಿದ್ದಾರೆ. ಪೋಲೀಸಿನವರ ದುರ್ವರ್ತನೆ ಮತ್ತು ಅವರು ಬಳಸಿದಂತ ದುರ್ಭಾಷೆಗಳಿಗೆ ಬೇಸತ್ತಿದ್ದ ಹೆಂಗಸರು ನಿಮ್ಮ ಹೆಂಗಸರನ್ನು ಯಾರು ನೋಡಿಕೊಳ್ಳುತ್ತಾರೆಂದು ಹೇಳಿದ್ದಾರೆ. ನಾಗಸಮುದ್ರದಲ್ಲಿ ನೀವು ಇಲ್ಲಿಗೆ ಬಂದಿದ್ದೀರಿ ನಿಮ್ಮ ಹೆಂಗಸರನ್ನು ಯಾರು ನೋಡಿಕೊಳ್ಳುತ್ತಾರೆಂದು ಕೇಳಿದ್ದಾರೆ. ನಾನು ಗಂಭೀರವಾದ ಭಾಷೆಯಲ್ಲಿ ಹೇಳುತ್ತಿದ್ದೇನೆ, ಅವರು ಹೇಳಿದಂತ ಭಾಷೆಯಲ್ಲಿ ಹೇಳುವುದಿಲ್ಲ. ಈ ರೀತಿಯಾಗಿ ಮೂರು ಗಂಟೆಗಳ ಕಾಲ ಮಾತಿನ ಚಕಮುಖಿ ನಡೆದು ಹೋದ ಮೇಲೆ, ಇಂದಿನ ಸಭೆಗೆ ಮಾನ್ಯ ಮಂತ್ರಿಗಳು ಬರುವುದಿಲ್ಲ, ರದ್ದಾಗಿದೆಯೆಂದು ಗೊತ್ತಾದ ಮೇಲೆ, ಸೇರಿದ್ದಂತ ಜನರೆಲ್ಲಾ ವಾಪಸ್ಸು ಹೋಗುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಕೊನೆಗೆ ೩೦-೪೦ ಜನ ಸ್ಥಳದಲ್ಲಿರುವಾಗಲೇ ೨-೩ ಗಾಡಿಗಳಿಗೆ ಜಖಂ ಆಗಿದೆ, ಇದರ ನಷ್ಟವನ್ನು ಬರಿಸಿಕೊಡಬೇಕೆಂದು ಮಾತಿಗೆ ಮಾತು ಬೆಳೆದಾಗ ಪೋಲಿಸಿನವರು ಲಾಠಿ ಪ್ರಯೋಗ ಮಾಡಿದ್ದಾರೆ. ಯಾವ ಮುನ್ನೆಚ್ಚರಿಕೆಯೂ ಇಲ್ಲದೇ ತಕ್ಷಣವೇ ಅಶ್ರುವಾಯು ಉಪಯೋಗಿಸಿದ್ದಾರೆ. ಮೂರನೇ ಹಂತದಲ್ಲಿ ಮತ್ತೆ ಯಾವ ಮುನ್ನೆಚ್ಚರಿಕೆಯೂ ಇಲ್ಲದೇ ಗೋಲೀಬಾರು ಮಾಡಿದ್ದಾರೆ. ಇದು ಅವರ ಹೇಳಿಕೆಯಿಂದ ವ್ಯಕ್ತಪಟ್ಟಿದೆ. ಗೋಲಿಬಾರ್‌ನಿಂದ ಒಬ್ಬ ಸನ್ಯಾಸಿಕೊಡ ಮುಗ್ಗಿ ಗ್ರಾಮದ ಬಸವನ ಗೌಡ ಸ್ಥಳದಲ್ಲಿಯೇ ಮೃತಪಟ್ಟ. ಇವನಿಗೆ ಕಾಲಕ್ಕೆ ಸರಿಯಾಗಿ ಶೈತ್ಯೋಪಚಾರ ನೀಡಲಿಲ್ಲ. ನಾಗಸಮುದ್ರದ ಮಲ್ಲಣ್ಣ ಎನ್ನುವ ವ್ಯಕ್ತಿ ಪಕ್ಕದಲ್ಲಿ ಇದ್ದಂತ ಗದ್ದೆಯಲ್ಲಿದ್ದವನಿಗೆ ಗುಂಡಿನೇಟು ಬಡಿದು ಮೃತಪಟ್ಟ. ಈ ಎರಡು ಜನ ಸ್ಥಳದಲ್ಲಿಯೇ ಮೃತಪಟ್ಟರು. ಸುಮಾರು ೩೦೦-೪೦೦ ಗಜ ದೂರದಲ್ಲಿ ಜೋಳದ ಹೊಲದಲ್ಲಿ ಗುಬ್ಬಿ ಓಡಿಸುತ್ತಿದ್ದ ನಟರಾಜ್ ಎನ್ನುವ ಹುಡುಗನಿಗೆ ಕಾಲುಗಳಿಗೆ ಗುಂಡಿನೇಟು ಬಿದ್ದು ನೆಲಕ್ಕೆ ಉರುಳಿದ, ಈ ಹುಡುಗನಿಗೆ ಕಾಲಕ್ಕೆ ಸರಿಯಾಗಿ ವೈದ್ಯಕೀಯ ಸವಲತ್ತು ನೀಡಿದ್ದರೆ, ಬದುಕುತ್ತಿದ್ದು, ಈ ಹುಡುಗನನ್ನ ಸತ್ತ ನಾಯಿಯನ್ನು ಎಳೆದುಕೊಂಡು ಹೋಗುವಂತೆ ಸುಮಾರು ೩೦೦-೪೦೦ ಅಡಿ ಎಳೆದುಕೊಂಡು ಹೋಗಿದ್ದಾರೆ ಎನ್ನುವ ವಿಷಯವನ್ನು ತಮ್ಮ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ತಮ್ಮ ಗಮನಕ್ಕೆ ತರಬೇಕಾದ ವಿಷಯ ಏನು ಅಂದರೆ ಇಲ್ಲಿ ಪೋಲೀಸಿನವರು ಗೋಳಿಬಾರ್ ಮಾಡುವುದಕ್ಕೆ ಕಾರಣ ಇರಲಿಲ್ಲ. ಇದ್ದಂತ ೩೦-೪೦ ಜನ ಕೂಡ ವಾಪಸ್ಸು ಹೋಗುವುದರಲ್ಲಿದ್ದಂತ ಕೊನೆ ಹಂತದಲ್ಲಿ ಹಠಾತ್ತನೇ ಲಾಠಿ ಚಾರ್ಜ, ಅಶ್ರುವಾಯು ಪ್ರಯೋಗ ಮಾಡಿ, ಗುಂಡು ಹಾರಿಸುವಂತ ಹಿನ್ನೆಲೆ ಇರಲಿಲ್ಲ ಎನ್ನುವುದು ನನ್ನ ಖಚಿತವಾದ ಅಭಿಪ್ರಾಯ. ಇದರಲ್ಲಿ ಸತ್ತವರ ಸಂಖ್ಯೆ ಮೂರು. ಈ ಅಂಶಗಳನ್ನೆಲ್ಲಾ ಆ ಊರಿನಲ್ಲಿ ಪ್ರತ್ಯಕ್ಷವಾಗಿ ಅರಳಿಕಟ್ಟೆ ಮೇಲೆ ಕೂತುಕೊಂಡು ಕೇಳಿದ್ದೇವೆ, ಸುಮಾರು ೧೧ ಜನರನ್ನು ವಿಚಾರ ಮಾಡಿ ರೆಕಾರ್ಡು ಮಾಡಿಕೊಂಡು ಬಂದಿದ್ದೇವೆ. ನಾಲ್ಕು ಜನ ನಾಗಸಮುದ್ರದ ಮಹಿಳೆಯರು ಇದ್ದರು. ಬಂದೂಕದ ಚೂರಿಯಿಂದ ಹೊಟ್ಟೆಗೆ ಏಟು ಬಿದ್ದವರು ಇದ್ದಾರೆ. ಇದರ ಮೇಲೆ ನನ್ನ ವಾದ ಏನು ಅಂದರೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ಕೆಲವು ಹೇಳಿಕೆಗಳು, ರೈತರ ಚಳುವಳಿ

ಯನ್ನು ಮತ್ತು ರೈತರ ಸಂಘಟನೆಯನ್ನು ಎಷ್ಟು ಹೆಣಗಳಾದರೂ ಬೀಳಲಿ ಮುರಿಯುತ್ತೇನೆಂದು ಅಂತರಂಗದಲ್ಲಿ ಹೇಳಿಕೊಂಡಿದ್ದಾರೆನ್ನುವುದು ತಿಳಿದುಬಂದಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಂತರಂಗದಲ್ಲಿರತಕ್ಕ ವಿಷಯ ನಿಮಗೆ ಹೇಗೆ ತಿಳೀತು?

ಶ್ರೀ ಎ. ಲಕ್ಷ್ಮೀಸಾಗರ್.—ಅದು ನನಗೆ ಬರತಕ್ಕ ಕನ್ನಡ.

೨-೩೦ ಪಿ. ಎಂ.

ಜನರ ಅಭಿಪ್ರಾಯಕ್ಕೆ ವಿರೋಧವಾಗಿ ಅವರು ಬೇಡ ಅಂದರು ಪರಿಸ್ಥಿತಿ ಉಲ್ಬಣವಾಗುವ ಸ್ಥಿತಿಯಲ್ಲಿದ್ದಾಗ ಸ್ವಲ್ಪ ದಿವಸಗಳ ಹಿಂದೆ ವಿಫುಲವಾಗಿ ಸಂಘರ್ಷ ನಡೆದಿದೆ. ಅನೇಕ ಮನೆಗಳ ಜಫ್ತಿ ನಡೆದಿದೆ. ರೈತ ಸಂಘಟನೆಯವರು ಸರ್ಕಾರದ ಅಧಿಕಾರಿಗಳ ಮನೆ ಜಫ್ತಿ ಮಾಡಿದ್ದಾರೆ.ಒಂದು ಸಾರಿ ಜಫ್ತಿ ಮಾಡಿದರೆ ಯಾವ ರೀತಿ ಇರುತ್ತದೆ ಎನ್ನುವುದನ್ನು ತೋರಿಸಲಿಕ್ಕೆ ಜಫ್ತಿ ನಡೆಸಿದ್ದೇವೆಂದು ಅವರು ಹೇಳಿದ್ದಾರೆ. ಇಂಥ ಒಂದು ವಿಷಮಯ ಪರಿಸ್ಥಿತಿ, ಮನಸ್ಸು ನೆಮ್ಮದಿಯಿಂಲ್ಲದೇ ಇರತಕ್ಕ ಪರಿಸ್ಥಿತಿಯಲ್ಲಿ ಕಾಗೋಡು ತಿಮ್ಮಪ್ಪನವರು ರೈತ ಸಂಘಟನೆಯನ್ನು ಮುರಿಯುವ ದೃಷ್ಟಿಯಿಂದ ಅಲ್ಲಿ ಸಭೆ ಮಾಡಲಿಕ್ಕೆ ಪ್ರಯತ್ನ ಮಾಡಿದರು ಎನ್ನುವ ವಾದ ಇದೆ. ಇದರ ಬಗ್ಗೆ ನಮ್ಮ ಬೇಡಿಕೆ ಏನು ಎನ್ನುವುದನ್ನು ನಾನು ಆಮೇಲೆ ತಿಳಿಸುತ್ತೇನೆ. ಮಾನ್ಯ ತಿಮ್ಮಪ್ಪನವರ ಸಭೆ ನಡೆಸಲಿಕ್ಕೆ ಯಾರೂ ಮುಂದೆ ಬರಲಿಲ್ಲವಾದರೂ ಮುಖ್ಯವಾಗಿ ಸಹಾಯಕ್ಕೆ ಬಂದವರು ಯಾರು ಅಂದರೆ ನಾಲ್ಕು ಪೋಲೀಸ್ ವ್ಯಾನ್‌ಗಳಲ್ಲಿ ಪೋಲೀಸರು ಹೋಗಿದ್ದರು. ಆ ವ್ಯಾನ್‌ಗಳಲ್ಲಿ ಸಭೆ ನಡೆಸಲಿಕ್ಕೆ ಸಾಮಿಯಾನ ತೆಗೆದುಕೊಂಡು ಹೋಗುತ್ತಿದ್ದರು ಎನ್ನುವ ಮಾತನ್ನು ತಿಳಿಸಿದ್ದಾರೆ. ಸಭೆಯನ್ನು ರದ್ದುಗೊಳಿಸಿದಮೇಲೆ ಪೋಲೀಸರು ಗೋಲಿಬಾರ್ ಏತಕ್ಕೆ ಮಾಡಬೇಕಾಗಿತ್ತು. ರೈತರ ಸಂಘಟನೆಯನ್ನು ಹತ್ತಿಕ್ಕುವ ಉದ್ದೇಶವೇ ಹೊರತು ಮುಖ್ಯವಾದ ಬೇರೆ ಸಂಗತಿ ಏನೂ ಇರಲಿಲ್ಲ ಎಂದು ಕುರುಡನಿಗೂ ಗೊತ್ತಾಗುತ್ತದೆ, ಎಲ್ಲರಿಗೂ ಗೊತ್ತಾಗುತ್ತದೆ. ಪ್ರತ್ಯಕ್ಷವಾಗಿ ಆ ಮಣ್ಣಿನ ಜನರ ಮುಖ ನೋಡಿ ಅವರ ಸೂಕ್ಷ್ಮವಾದ ರೀತಿಯ ಮಾತುಗಳನ್ನು ಕೇಳಿದರೆ ಇದು ವೇದ್ಯವಾಗುತ್ತದೆ. ಇನ್ನು ಪೋಲೀಸರ ವರ್ತನೆಯ ಬಗ್ಗೆ ಹೇಳಬೇಕೆಂದರೆ ಬಸವನಗೌಡ, ಮಲ್ಲಣ್ಣ ಎಂಬುವರ ಎರಡು ಹೆಣಗಳು ಬಿದ್ದಿವೆ. ಏಟುಬಿದ್ದ ನಟರಾಜ ಎಂಬುವರನ್ನು ಹಾಕಿಕೊಂಡು ನಾಗಸಮುದ್ರದಿಂದ ಸನ್ಯಾಸಿಕೊಡಮಗ್ಗಿವರೆಗೆ ಹೋಗುವಾಗ ದಾರಿಯುದ್ದಕ್ಕೂ ಪಟಾಕಿ ಹಾರಿಸಿಕೊಂಡು ಹೋದ ಹಾಗೆ ಗುಂಡನ್ನು ಹಾರಿಸಿಕೊಂಡು ಹೋಗಿದ್ದಾರೆ. ಇವೊತ್ತು ಇವರು ಸನ್ಯಾಸಿ ಕೊಡಮಗ್ಗಿಯಲ್ಲಿ ಗುಂಡು ಹಾರಿಸಿರುವ ಬಗ್ಗೆ ಎರಡು ಮನೆಗಳಲ್ಲಿ ಬಂದೂಕು ಗುರುತು ಕಾಣಬಹುದು. ಅವು ಮಲ್ಲಿಕ್‌ಸಾಬ್, ಹಜಾಮ್ ಕೃಷ್ಣಪ್ಪ ಎಂಬುವವರ ಮನೆಯ ಗೋಡೆಯ ಮೇಲೆ ಗುರುತು ಇದೆ, ಹುಡುಗರು ಪಟಾಕಿ ಹಾರಿಸಿದಂತೆ ಪೋಲೀಸರು ಗುಂಡು ಹಾರಿಸಿಕೊಂಡು ಹೋಗಿದ್ದಾರೆ. ಪೋಲೀಸರ ಮನಸ್ಸಿನಲ್ಲಿ ಯಾವ ಒಂದು ಶಕ್ತಿ ಇತ್ತು ಎಂದರೆ ಅವರಿಗೆ ಸರ್ಕಾರದ ಭಯವಿಲ್ಲ. ಕಾಗೋಡು ತಿಮ್ಮಪ್ಪನವರು ನಮ್ಮ ಹಿಂದೆ ಇದ್ದಾರೆ ಅಂಥ ಅಲ್ಲಿಯ ಜನರ ವಾದ. ಹಾಗೂ ನನ್ನ ವಾದ. ಈ ರೀತಿ ಅಲ್ಲಿ ನಡೆದಿದೆ. ಆ ಹುಡುಗನಿಗೆ ಸರಿಯಾದ ಸಮಯದಲ್ಲಿ ಸಕಾಲಕ್ಕೆ ಅವನಿಗೆ ವೈದ್ಯಕೀಯ ಸೌಲಭ್ಯ ಕೊಟ್ಟಿದ್ದೇ ಆಗಿದ್ದರೆ ಆ ಹುಡುಗ ಸಾಯುತ್ತಿರಲಿಲ್ಲ ಎನ್ನುವುದನ್ನು ಪ್ರಸ್ತಾಪ ಮಾಡಿದ್ದೇನೆ. ಕೆಲವು ಪೋಲೀಸ್ ಅಧಿಕಾರಿಗಳು ಅಲ್ಲಿನ ಜನರ ಮೇಲೆ ಯಾವ ರೀತಿ ತಮ್ಮ ಕೋಪ, ರೋಷವನ್ನು ತೀರಿಸಿಕೊಂಡರು ಎನ್ನುವ ಬಗ್ಗೆ ಅಲ್ಲಿಯ ಜನ ನಮ್ಮ ಮುಂದೆ ತೋಡಿಕೊಂಡಿದ್ದಾರೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಉಪಾಧ್ಯಕ್ಷರೆ, ಸೂಕ್ಷ್ಮವಾಗಿ ವಿಚಾರಗಳನ್ನು ನಾವು ಹೇಳುತ್ತಿದ್ದೇವೆ. ಅಲ್ಲಿ ಯಾವ ಕಾರಣ ಇಲ್ಲದೇ ಪೋಲೀಸರಿಂದ ಗೋಲಿಬಾರ್ ನಡೆದಿದೆ. ಅದಕ್ಕೆ ಏನಾದರೂ ಒಂದು ಕಾರಣ ಬೇಕು ಅಂಥ ಪೋಲೀಸರಿಗೆ ಕಲ್ಲೇಟು ಬಿದ್ದಿದೆ ಎಂದು ಹೇಳಿದ್ದಾರೆ. ಪೋಲೀಸರಿಗೆ ಬಿದ್ದಿದ್ದರೆ ಅಲ್ಲಿರತಕ್ಕ ಜನರಿಗೂ ಗಾಯಗಳಾಗಿವೆ. ಅಲ್ಲಿನ ಜನರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಿದ್ದಾರೆಯೇ ಹೊರತು ಪೋಲೀಸರ ಮೇಲೆ ಕಾನೂನು ಪ್ರಕಾರ, ದಂಡ ಸಂಹಿತೆ ಪ್ರಕಾರ, ಸಿವಿಲ್ ಕ್ರಿಮಿನಲ್ ಪ್ರೊಸೀಜರ್ ಪ್ರಕಾರ ಯಾವ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಗೋಲಿಬಾರ್ ಆಗಿದೆ. ಅದಕ್ಕೆ ಏನಾದರೂ ಒಂದು ಕಾರಣ ಬೇಕು ಅಂಥ ಹೇಳಿ ತಮ್ಮಲ್ಲಿಯೇ ಇದ್ದಂಥ ಪೋಲೀಸ್ ವಾಹನದಿಂದ ಡೀಸೆಲ್ ತೆಗೆದು ಅದರಲ್ಲಿದ್ದಂಥ ರೇಡಿಯೋ, ವೈರ್‌ಲೆಸ್ ಸೆಟ್ ಬೇರೆ ವಾಹನಗಳಲ್ಲಿ ಇಟ್ಟು ಆ ವಾಹನಗಳಿಗೆ ಬೆಂಕಿ ಹಚ್ಚಿ

ದ್ದಾರೆ. ಇದು ಅಲ್ಲಿ ಇದ್ದು ನೋಡಿ ಹೇಳಿದವರ ಮಾತು. ಇದು ಈ ಘಟನೆಯ ಬಗ್ಗೆ ಮುಖ್ಯವಾದಂಥ ವಿಚಾರ. ಇದು ಆದಮೇಲೆ ಏನಾಗಿದೆ ೨೫ನೇ ತಾರೀಖು ಮಧ್ಯಾಹ್ನದಿಂದ ಸಾಯಂಕಾಲದ ವರೆಗೆ ನಡೆದಂಥ ಘರ್ಷಣೆಯಲ್ಲಿ ಪೋಲೀಸರು ಯಾರನ್ನೂ ಬಂಧಿಸಿಲ್ಲ. ಅವರು ಸ್ಥಳದಲ್ಲಿಯೇ ಅರೆಸ್ಟ್ ಮಾಡಬಹುದಿತ್ತು ಅದನ್ನು ಮಾಡಲಿಲ್ಲ, ಆದರೆ ೨೫ ಮತ್ತು ೨೬ರ ನಡುರಾತ್ರಿ ನರರಾಕ್ಷಸರಂತೆ ಪೋಲೀಸರು ಸನ್ಯಾಸಿ ಕೊಡಮಗಿ ನಾಗಸಮುದ್ರ, ಮುಂಗೋಟಿ ಈ ಮೂರು ಗ್ರಾಮಗಳ ಮನೆಗಳಿಗೆ ಹೋಗಿ ಕೈಗೆ ಸಿಕ್ಕಿದವರನ್ನು ಹಿಡಿದುಕೊಂಡು ಹೋಗಿದ್ದಾರೆ. ರಾಕ್ಷಸ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅದರಲ್ಲಿ ದೊಡ್ಡವರು, ಚಿಕ್ಕವರು, ಹುಡುಗರು ಅಂಥ ಯಾರನ್ನೂ ನೋಡಲಿಕ್ಕೆ ಹೋಗಿಲ್ಲ, ಪೋಲೀಸರು ೨೫ನೇ ತಾರೀಖಿನ ದಿವಸ ಸುಮ್ಮನೆ ಇದ್ದು ೨೫-೨೬ರ ಮಧ್ಯರಾತ್ರಿ ಮೂರು ಗ್ರಾಮಗಳ ಮನೆಗಳಿಗೆ ನುಗ್ಗಿ ದೈತ್ಯ ಕೃತ್ಯ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಜನರು ಹೇಳಲಾರದ ಕಷ್ಟಕ್ಕೆ ಗುರಿಪಡಿಸಿದ್ದಾರೆ ಅದಕ್ಕೆ ಸಾಕ್ಷಿ ಇದೆ, ಕೋರ್ಟಿನಲ್ಲಿ ಕೇಸ್ ಹಾಕಿರುವುದು ಪ್ರಸ್ತಾಪ ಮಾಡಿದ್ದೇನೆ. ಈ ಎಲ್ಲಾ ಅಂಶಗಳು ಘಟನೆಯಲ್ಲಿ ಸೇರಿವೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಈ ಸರ್ಕಾರ ೧೯೮೦ನೇ ಇಸವಿ ಜನವರಿಯಿಂದ ಅಧಿಕಾರದಲ್ಲಿದೆ, ಅದು ಯಾವ ಕಾಲದಲ್ಲಿ ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿ ಆದರೋ, ಅವರ ಸಂಪುಟದಲ್ಲಿ ಇತರೆಯವರು ಮಂತ್ರಿಗಳಾದರೋ ನೋಡಿ ಸ್ವಾಮಿ, ರೈತರಿಗೆ ಅನ್ವರ್ಥನಾಮ ಸರ್ಕಾರವಾಗಿ ಸಾಬೀತುಮಾಡಿ ತೋರಿಸಿದೆ. ಗುಂಡು ಹಾರಿಸತಕ್ಕ ಸರ್ಕಾರ, ಗುಂಡಿನ ಸುರಿಮಳೆ ನರಗುಂದದಿಂದ ಹಿಡಿದು ನಾಗಸಮುದ್ರದವರೆಗೆ ನಡೆದಿದೆ, ಸುಮಾರು ೨೦ ಜನ ರೈತರ ರಕ್ತ ಹರಿಸತಕ್ಕ ಸರ್ಕಾರವಾಗಿದೆ. ಇದಕ್ಕೆ ಏನಾದರೂ ಒಂದು ಪ್ರಥಮ ಬಹುಮಾನ ಕೊಡಬೇಕೆಂದು ದೇಶದಲ್ಲಿ ತೀರ್ಮಾನ ತೆಗೆದುಕೊಂಡರೆ ಅದು ಶ್ರೀಮಾನ್ ಗುಂಡೂರಾಯರಿಗೆ ದಕ್ಕತಕದ್ದು ಎಂದು ನನ್ನ ಬಹಳ ವಿನಯದ ಮಾತು. ಕವಿಗಳು ರೈತರ ಬಗ್ಗೆ ವಿಪುಲವಾದ ಚರ್ಚೆ ಮಾಡಿದ್ದಾರೆ. ರೈತ ನೇಗಿಲ ಯೋಗಿ ಮಣ್ಣಿನ ಮಗ, ಮಣ್ಣಿನಿಂದ ಅನ್ನ ಕೊಡತಕ್ಕವನು ಅಂಥ ಅವನನ್ನು ಪುಂಖಾನುಪುಂಖವಾಗಿ ಅವನ ಕೆಲಸದ ಬಗ್ಗೆ ಕವಿಗಳು ಕೊಂಡಾಡಿದ್ದಾರೆ. ಶ್ರೀಮಾನ್ ಗುಂಡೂರಾಯರು ಶ್ರೀಮಾನ್ ವೀರಪ್ಪಮೊಯಿಲಿಯವರು ಕೊಂಡಾಡುತ್ತಾರೆಂದು ಅಂದುಕೊಂಡಿದ್ದೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕೊಂಡಾಡಲೇಬೇಕು. ಏಕೆಂದರೆ ಅವರು ರೈತರ ಮುಖಂಡರು, ಅದರಲ್ಲೂ ಕೂಡ ಜಮೀನು ಇಲ್ಲದೇ ಇರತಕ್ಕ ರೈತರ ಮುಖಂಡ ಅಂಥ ಹೆಸರುವಾಸಿಯಾದ ಶ್ರೀ ಗೋಪಾಲಗೌಡರ ಅನುಯಾಯಿಯಾದವರು ಮಂತ್ರಿಗಳು ಆದಮೇಲೆ ಏತಕ್ಕೆ ಹಿಂದಿನ ತತ್ವಗಳನ್ನು ಮರೆತಿದ್ದಾರೆ ಎನ್ನುವ ಶಂಕೆ ನನಗೆ ಬರುತ್ತಿದೆ, ಆಶ್ಚರ್ಯ ಕೂಡ ಆಗುತ್ತದೆ ಮತ್ತು ದುಃಖ ಕೂಡ ಆಗುತ್ತಿದೆ. ತನ್ನ ಮಂತ್ರಿ ಪದವಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ರೈತರ ಮೇಲೆ ಗುಂಡು ಹಾರಿಸತಕ್ಕ ಸನ್ನಿವೇಶವನ್ನು ಏತಕ್ಕೋಸ್ಕರ ನಿರ್ಮಾಣ ಮಾಡಿದರು ಎನ್ನುವ ಶಂಕೆ ಬರುತ್ತಿದೆ. ಮಂತ್ರಿಯಾದ ಮೇಲೆ ಹಿಂದಿನ ಎಲ್ಲಾ ಸಿದ್ಧಾಂತಗಳಿಗೂ ತಿಲಾಂಜಲಿ ಕೊಟ್ಟಿದ್ದಾರೆ. ತಿಲಾಂಜಲಿ ಕೊಟ್ಟಿದ್ದರ ಪರಿಣಾಮವೇ ನಾಗಸಮುದ್ರದಲ್ಲಿ ಆ ರೀತಿ ನಡೆದಿದೆ ಎಂದು ನಾನು ಭಾವಿಸುತ್ತೇನೆ.

ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ನನ್ನ ಸ್ನೇಹಿತರು. ರಾಜಕೀಯದಲ್ಲಿ ಬೇರೆ ಬೇರೆ ಪಕ್ಷದಲ್ಲಿದ್ದೇವೆ ಅಷ್ಟೆ. ಅವರ ಬಗ್ಗೆ ನನಗೆ ವೈಯುಕ್ತಿಕವಾಗಿ ಈಗಲೂ ಗೌರವ ಮತ್ತು ಅಭಿಮಾನ ಇದೆ. ನಾಗಸಮುದ್ರದಲ್ಲಿ ನಡೆದಂಥ ಗೋಲೀಬಾರ್‌ನ ಹಿನ್ನೆಲೆಯಲ್ಲಿ ಅವರ ಪಾತ್ರವನ್ನು ನೋಡಿದರೆ ಅವರು ತಮ್ಮ ತತ್ವಕ್ಕೆ ಸಂಪೂರ್ಣವಾಗಿ ತಿಲಾಂಜಲಿಯನ್ನು ಬಿಟ್ಟಿದ್ದಾರೆಂದೂ ನಾನಾದರೂ ಹೇಳಬೇಕಾಗುತ್ತದೆ. ಅನ್ನ ಕೊಡತಕ್ಕ ರೈತರ ಮೇಲೆ ಗುಂಡಿನ ಸುರಿಮಳೆಯನ್ನೇ ಸುರಿಸಿದ್ದಾರೆ. ಸ್ವಾಮಿ, ಆ ಬಡ ರೈತರು ಕೇಳಿರುವುದಾದರೂ ಏನು? ಕನಿಷ್ಟ ಬೇಡಿಕೆಗಳನ್ನು ಕೇಳಿದ್ದಾರೆ. ಹಿಂದೆ ಇದೇ ಸಭೆಯಲ್ಲಿ ರಾಜ್ಯದ ಬಡ ರೈತರಿಗೋಸ್ಕರ ೭೫ ಕೋಟಿ ರೂಪಾಯಿಗಳ ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಘೋಷಣೆ ಮಾಡಿದಿರಿ, ಅದರ ಬಗ್ಗೆ ಒಂದು ಶ್ವೇತ ಪತ್ರವನ್ನೂ ಹೊರಡಿಸಿದಿರಿ. ಆದರೆ ಅದರ ಪರಿಣಾಮ ಏನಾಯಿತು? ಎಂಬುದು ತಮಗೇ ಗೊತ್ತಿದೆ. ಇದು ಒಂದು ಭಾಗ. ಕಾನೂನು ವಿರುದ್ಧವಾಗಿ ಸಿವಿಲ್ ಪ್ರೊಸೀಜರ್ ಕೋಡಿಗೆ ವಿರುದ್ಧವಾಗಿ ಸಾಲದ ವಸೂಲಾತಿಗಾಗಿ ರೈತರ ಮನೆಗಳನ್ನು ಜಪ್ತಿ ಮಾಡಿಸಿದಿರಿ. ಆದರೆ ತಮ್ಮ ಈ ನೀತಿ ಸರಿಯಲ್ಲವೆಂದು ಆ ರೈತರು ಹೈ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದರು. ಆದರೂ ಸರ್ಕಾರದವರು ತಮ್ಮ ಕೆಲಸವನ್ನು ಮಾತ್ರ ನಿಲ್ಲಿಸಲಿಲ್ಲ. ಈ ವರ್ತನೆಯನ್ನು ಖಂಡಿಸಲು, ಪ್ರತಿಭಟಿಸಲು ಶಿವಮೊಗ್ಗ ಜಿಲ್ಲೆಯ ರೈತರು ಸಂಘಟಿತರಾದರು. ರೈತರಿಗೆ ರಿಯಾಯಿತಿಯನ್ನು ಕೊಡುತ್ತೇವೆಂದು ಸರ್ಕಾರದವರು ಒಂದು ಸಾರಿ ಹೇಳುತ್ತಾರೆ. ಆದರೆ ಇನ್ನೊಂದು

ಸರಿ ಕೊಡುವುದಿಲ್ಲವೆಂದು ಹೇಳುತ್ತಾರೆ. ಆದರೆ ನೇರವಾಗಿ ಸಮರ್ಪಕವಾದ ಉತ್ತರವನ್ನು ಸರ್ಕಾರದವರ ಇದುವರೆಗೂ ಕೊಟ್ಟಿಲ್ಲ. ಈ ಪ್ರಶ್ನೆ ರೈತರ ಜೀವಂತ ಪ್ರಶ್ನೆಯಾಗಿಯೇ ಉಳಿದಿದೆ. ರೈತರ ಇಂಥ ಒಂದು ಜ್ವಲಂತ ಪ್ರಶ್ನೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಸರ್ಕಾರದವರ ನೀತಿಗೆ ಇವತ್ತು ನಾನು ವಿಷಾದವನ್ನು ಪಡಬೇಕಾಗಿದೆ. ರೈತರೆಲ್ಲಾ ಸಂಘಟಿತರಾದಮೇಲೆ ಸರ್ಕಾರದ ಅಡಿಷನಲ್ ಚೀಫ್ ಸೆಕ್ರೆಟರಿಯವರಾದ ಶ್ರೀ ವೆಂಕಟೇಶ್‌ರವರನ್ನು ಈ ಬಗ್ಗೆ ಸಂಧಾನಕ್ಕೋಸ್ಕರ ಕಳುಹಿಸಿಕೊಟ್ಟಿರಿ. ಈ ಸಂಧಾನದ ಪರಿಣಾಮವಾಗಿ ಅಲ್ಲಿ ಕೆಲವು ಒಪ್ಪಂದಗಳಾಗಿವೆ. ಆದರೆ ಆ ಒಪ್ಪಂದಗಳು ಇವತ್ತು ಏನಾಗಿವೆ ಎನ್ನುವ ಬಗ್ಗೆ ನಾನು ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರದವರು ಪರಿಹರಿಸಲು ಸಾಧ್ಯವೇ ಇಲ್ಲದಿರತಕ್ಕ ಪ್ರಶ್ನೆಗಳೇನೂ ಅಲ್ಲ, ಈ ರೈತರ ಸಮಸ್ಯೆಗಳು. ಆದರೆ ಆ ರೈತರು ಕೇಳಿರತಕ್ಕ ಎಲ್ಲ ಬೇಡಿಕೆಗಳೂ ನ್ಯಾಯಬದ್ಧವಾಗಿಯೇ ಇವೆಯೆಂದೂ ನಾನು ಹೇಳುವುದಿಲ್ಲ. ಆದರೆ ಅವರು ಕೇಳಿರತಕ್ಕ ಮೂಲಭೂತ ಸಮಸ್ಯೆಗಳನ್ನು ಮಾತ್ರ ಸರ್ಕಾರದವರು ಸಹೃದಯದಿಂದ ಪರಿಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸರ್ಕಾರದವರಿಗೆ ಅಣುರೇಣುವಿನಷ್ಟಾದರೂ ಬುದ್ಧಿ ಇದೆಯೆಂದು ಹೇಳಿಕೊಳ್ಳುವುದಾದರೆ ಅವುಗಳನ್ನು ಸರ್ಕಾರದವರು ಮಾಡಲೇಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸರ್ಕಾರಕ್ಕೆ ಕಣ್ಣಿದ್ದರೂ ಇಲ್ಲದಂತಿದೆ. ಕಿವಿ ಇದ್ದರೂ ಇಲ್ಲದಂತಿದೆ. ಆದರೆ ಅದಕ್ಕೆ ತಲೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ನಾನು ಹೇಳುವುದಾದರೆ, ರೈತರು ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷೋಪಲಕ್ಷ ಕಾರ್ಮಿಕರು ತಮಗಿರತಕ್ಕ ತೊಂದರೆಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಅನೇಕ ವರ್ಷಗಳಿಂದ ತೊಂದರೆಯನ್ನು ಅನುಭವಿಸಿದ ಈ ವರ್ಗದ ಜನರು ಇಂದು ಎಚ್ಚೆತ್ತು ಸಂಘಟಿತರಾಗಿ ನಿಂತಿದ್ದಾರೆ. ನಿಜವಾಗಿಯೂ ಈ ಜನರು ಶತ ಶತಮಾನಗಳಿಂದಲೂ ಶೋಷಣೆಗೆ ಒಳಗಾಗಿದ್ದವರು. ಆದುದರಿಂದಲೇ ಈಗ ಅವರೆಲ್ಲಾ ಎಚ್ಚೆತ್ತು ಸಂಘಟಿತರಾಗಿ ನಿಂತಿದ್ದಾರೆ ರೈತರು ಸಂಘಟಿತರಾಗಿ ನಿಂತಿದ್ದು ಈ ಸರ್ಕಾರಕ್ಕಾಗಲಿ ಅಥವಾ ಮಾನ್ಯ ಕಾಗೋಡು ತಿಮ್ಮಪ್ಪನವರಿಗಾಗಲಿ ಸರಿ ಕಾಣಲಿಲ್ಲ. ಆಗ ಇದು ಸರಿಯಲ್ಲವೆಂದು ಸಂವಿಧಾನಾತ್ಮಕವಾಗಿ ತಡೆಹಿಡಿಯಬೇಕೆಂದು ಪ್ರಯತ್ನ ಮಾಡಿ ಗುಂಡಿನ ಮಳೆಯನ್ನೇ ಸುರಿಸಿದರು. ಇದು ನಾಗಸಮುದ್ರದಲ್ಲಿ ನಡೆದಂಥ ಹತ್ಯಾಕಾಂಡದ ಒಂದು ಸಂಕ್ಷಿಪ್ತ ವಿವರಣೆ. ಮಾನ್ಯ ಕಾಗೋಡು ತಿಮ್ಮಪ್ಪನವರು ತಮ್ಮ ಒಂದು ಹೇಳಿಕೆಯಲ್ಲಿ ರೈತರು ಸಂಘಟನೆಯಾಗಿ ನನ್ನನ್ನು ಸಾಯಿಸುವುದಕ್ಕೆ ಪ್ರಯತ್ನ ನಡೆದಿದೆ ಎಂದು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದು ಸರಿಯಲ್ಲ. ನನ್ನ ಅಭಿಪ್ರಾಯದಲ್ಲಿ ಅವರು ಈ ಮಾತನ್ನು ಹೇಳಬಾರದಿತ್ತು. ಈ ಬಗ್ಗೆ ನಾನು ವಿಷಾದಿಸಬೇಕಾಗಿದೆ.

ಸ್ವಾಮಿ, ನಾನು ತಮ್ಮನ್ನು ಒಂದು ಮಾತು ಕೇಳುತ್ತೇನೆ. ಮಂತ್ರಿಗಳು ಎಂದರೆ ಕಾರು ಇರುತ್ತದೆ ಪೋಲೀಸರು ಇರುತ್ತಾರೆ. ಅವರ ಕೈಯಲ್ಲಿ ಬಂದೂಕು ಇರುತ್ತದೆ, ಇಷ್ಟೆಲ್ಲಾ ಇದ್ದಮೇಲೆ ಇವರ ಹತ್ತಿರ ಯಾರು ಹೋಗಲು ಸಾಧ್ಯ? ಅವರನ್ನು ಕೊಲೆ ಮಾಡುವುದಾದರೂ ಹೇಗೆ ಸಾಧ್ಯವಾಗುತ್ತದೆ? ಅವರ ಹೇಳಿಕೆ ನನಗೆ ಅರ್ಥವೇ ಆಗುವುದಿಲ್ಲ. ರೈತರ ಸಂಘದ ಅಧ್ಯಕ್ಷರಾದ ಶ್ರೀಮಾನ್ ರುದ್ರಪ್ಪನವರು ಏನು ಹೇಳಿದ್ದಾರೆಂದರೆ. ರೈತರ ಕೊಲೆ ಕಾಗೋಡು ತಿಮ್ಮಪ್ಪನವರ ಪೂರ್ವ ಯೋಜಿತವಾದುದು, ಮತ್ತು ಆವತ್ತು ಗೋಲೀಬಾರಿನ ಅವಶ್ಯಕತೆ ಇತ್ತು ಎಂದು ಹೇಳಿದ್ದಾರೆ. ಆದರೆ ಅದೇ ಪಕ್ಷಕ್ಕೆ ಸೇರಿದ ಮತ್ತು ಹೊಳೇ ಹೊನ್ನೂರನ್ನು ಪ್ರತಿನಿಧಿಸತಕ್ಕ ಮಾನ್ಯ ಬಸವಣ್ಣನವರು ಏನು ಹೇಳಿದ್ದಾರೆ ಅದನ್ನು ತೆಗೆದುಕೊಳ್ಳಬೇಕು. ರೈತರ ಸಾವು ನೋವಿಗೆ ಪೋಲೀಸರೇ ಕಾರಣ, ಎಂಬುದು. ಇನ್ನೊಂದು ಮಾತು ಏನು ಹೇಳಿದ್ದಾರೆಂದರೆ ರೈತರ ಸಂಘಟನೆಯನ್ನು ಮುರಿಯುವ ಪ್ರಯತ್ನ ಮತ್ತು ರೈತರನ್ನು ಎರಡು ಭಾಗವಾಗಿ ಮಾಡುವ ಕುಟಿಲ ತಂತ್ರವನ್ನು ಮಾಡಿದ್ದಾರೆಂದು. ಈ ಮಾತನ್ನು ಅವರು ಬಹಳ ಜವಾಬ್ದಾರಿಯಿಂದ ಹೇಳಿದ್ದಾರೆ. ಇನ್ನೊಂದು ಏನೆಂದರೆ ಮಾಜೀ ಸಚಿವರೂ ಮತ್ತು ಈ ಮನೆಯ ಸದಸ್ಯರೂ ಆಗಿರತಕ್ಕ ಮಾನ್ಯ ಬಂಗಾರಪ್ಪನವರು ಪೋಲೀಸರ ಗೋಲೀಬಾರಿಗೆ ಯಾವ ಪ್ರಚೋದನೆಯೂ ಇರಲಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಾನು ಇವತ್ತು ಇಡತಕ್ಕ ಬೇಡಿಕೆಗಳು ಮೂಲಭೂತವಾದುವು ಮತ್ತು ಕನಿಷ್ಠವಾದುವು ಎಂದು ಪೂರ್ವಭಾವಿಯಾಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಈ ಘಟನೆಯ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಅಂದರೆ ಜಿಲ್ಲಾಧಿಕಾರಿಯವರಿಂದ ಸಮಗ್ರ ತನಿಖೆ ನಡೆಸಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದೆ. ಸ್ವಾಮಿ, ಈ ಜಿಲ್ಲಾಧಿಕಾರಿಯವರು ನಮ್ಮ ಕಾರ್ಯಾಂಗದ ಒಂದು ಭಾಗ. ಆದ್ದರಿಂದ ಅವರು ಇದರಲ್ಲಿ ನಿಷ್ಪಕ್ಷಪಾತವಾದ ತನಿಖೆ

ಯನ್ನು ನಡೆಸುತ್ತಾರೆಂದು ಯಾರೂ ಭಾವಿಸುವುದಿಲ್ಲ. ಇದರಲ್ಲಿ ಯಾರಿಗೂ ನಂಬಿಕೆ ಇಲ್ಲ. ಆದ್ದರಿಂದ ಈ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುವುದು ಬೇಡ. ಇಷ್ಟೇ ಅಲ್ಲ, ಇನ್ನೊಂದು ಅತ್ಯಂತ ಪ್ರಬಲವಾದ ಕಾರಣ ಎಂದರೆ ಈ ಗೋಲೀಬಾರ್ ನಡೆಯುವುದಕ್ಕೆ ಮುಖ್ಯವಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರೇ ಕಾರಣವೆಂದು ಮಂತ್ರಿ ಮಂಡಲದಲ್ಲಿರತಕ್ಕ ಒಬ್ಬ ಮಂತ್ರಿಯವರೇ ಆಪಾದನೆ ಮಾಡಿರುವಾಗ ಇಂಥ ಪ್ರಕರಣದ ಬಗ್ಗೆ ಒಬ್ಬ ಜಿಲ್ಲಾಧಿಕಾರಿಯವರು ಸಮಗ್ರವಾದ ತನಿಖೆ ಮಾಡಿ ವರದಿ ಕೊಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು.

ಆದ್ದರಿಂದ ರೈತರ ಒಂದು ಏಕೈಕ ಬೇಡಿಕೆ, ಏಕೈಕ ಒತ್ತಾಯವೇನೆಂದರೆ ಒಂದು ನ್ಯಾಯಾಂಗ ತನಿಖೆಯಾಗಬೇಕು ಎಂಬುದು. ನಿಷ್ಪಕ್ಷಪಾತವಾದ ನ್ಯಾಯಾಂಗ ತನಿಖೆಯಾಗಬೇಕೆಂದು ಅವರು ಏನು ಒತ್ತಾಯ ಮಾಡುತ್ತಿರುತ್ತಾರೆ, ಅದನ್ನು ಸರ್ಕಾರದವರು ಮಾಡುವುದಕ್ಕೆ ಏನು ಕಳೆದುಕೊಳ್ಳುವುದೆಂದು ನಾನಾದರೂ ಕೇಳುತ್ತಿದ್ದೇನೆ. ನ್ಯಾಯಾಂಗ ತನಿಖೆಗಾಗಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಬಹುದಾಗಿತ್ತು. ಡೆಪ್ಯುಟಿ ಕಮಿಷನರ್‌ರವರನ್ನು ನೇಮಿಸಿರುವುದು ಅವರು ಒಳ್ಳೆಯವರೇ ಇರಬಹುದು. ನಾನು ಕೂಡ ಅವರನ್ನು ಭೇಟಿಮಾಡಿದ್ದೇನೆ, ಮಾತನಾಡಿದ್ದೇನೆ. ಅವರು ಕೋಲಾರದ ಡೆಪ್ಯುಟಿ ಕಮಿಷನರ್ ಆಗಿದ್ದರು. ಅವರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ; ಕಾನೂನು ದೃಷ್ಟಿಯಿಂದ, ಕಾನೂನಿನ ಒಂದು ವಾದ ಇದೆ Justice must be done. Not only justice must be done but justice must seem to have been done. ಇದು ಈ ಸಮಯದಲ್ಲಿ ಸಾಧ್ಯವಾಗುವುದಿಲ್ಲ. ಆದುದರಿಂದ ನಮ್ಮ ಮೊದಲನೆಯ ಒತ್ತಾಯದ ಬೇಡಿಕೆ ಕನಿಷ್ಟ ಬೇಡಿಕೆ ಏನೆಂದರೆ ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಎನ್ನುವುದು ಒಂದು. ಎರಡನೆಯದಾಗಿ ಯಾರು ಯಾರು ಈ ಘಟನೆಯಿಂದಾಗಿ ಬಂಧನಕ್ಕೆ ಒಳಗಾಗಿದ್ದಾರೋ ಅವರನ್ನು ಯಾವ ಕಾರಣದಿಂದಲೂ ಕೂಡ ಸರ್ಕಾರ ಬಂಧನದಲ್ಲಿಟ್ಟುಕೊಳ್ಳಬಾರದು. ಈಗಾಗಲೇ ಅವರು ಜಾಮೀನನ್ನು ಕೊಟ್ಟಿದ್ದಾರೆ. ಅವರ ಮೇಲೆ ಇರತಕ್ಕಂಥ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಬೇಕು. ಇದು ಎರಡನೆಯ ಬೇಡಿಕೆ. ಮೂರನೆಯದಾಗಿ ಮೃತರ ಮನೆಗಳಿಗೆ ನಾವು ಭೇಟಿ ಕೊಟ್ಟಿದ್ದೇವೆ. ಅವರು ಯಾರುಯಾರು ಇದ್ದಾರೆ ಅವರ ತಂದೆ ತಾಯಿಗಳನ್ನು ಅವರ ಅಕ್ಕತಂಗಿಯರನ್ನು ಭೇಟಿಮಾಡಿದ್ದೇವೆ. ಸರ್ಕಾರದವರು ಅವರಿಗೆ ಪರಿಹಾರ ಘೋಷಣೆ ಮಾಡತಕ್ಕಂಥ ವಿಚಾರ ಇನ್ನೂ ಖಚಿತವಾಗಿ ಗೊತ್ತಿಲ್ಲ. ಆದ್ದರಿಂದ ಸರ್ಕಾರದವರು ಮೃತರಾದವರಿಗೆ ಪರಿಹಾರವನ್ನು ಕೊಡತಕ್ಕಂಥ ಒಂದು ತೀರ್ಮಾನವನ್ನು ಕೂಡ ಮಾಡಿಲ್ಲವೆಂದು ನಮಗೆ ಅರ್ಥವಾಗಿರತಕ್ಕಂಥ ಮಾತಾಗಿದೆ. ಆದ್ದರಿಂದ ಅವರಿಗೆ ತಕ್ಷಣವೇ ಪರಿಹಾರವನ್ನು ಒದಗಿಸತಕ್ಕಂಥದ್ದು ಮೂರನೆಯದಾಗಿದೆ. ಇನ್ನು ಕೊನೆಯದಾಗಿ ರೈತರ ಬೇಡಿಕೆ ಬಗ್ಗೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿರತಕ್ಕಂಥ ರಾಜಕೀಯ ಚಳುವಳಿಯ ಸಮಯದಲ್ಲಿ ಉಲ್ಬಣಾವಸ್ಥೆಗೆ ಹೋದಾಗ ನಿಧಾನವಾಗಿಯಾದರೂ, ತಡವಾಗಿಯಾದರೂ ಸರ್ಕಾರ ಕಣ್ಣುತೆರೆದು ಸರ್ಕಾರದ ಅಡಿಷನಲ್ ಸೆಕ್ರೆಟರಿಯವರಾದ ಶ್ರೀ ವೆಂಕಟೇಶನ್‌ರವರನ್ನು ಕಳುಹಿಸಿಕೊಟ್ಟು ಅವರು ಮಾತನಾಡಿ ಯಾವ ಒಂದು ಒಪ್ಪಂದಕ್ಕೆ ಬಂದಿದ್ದಾರೆ ಎನ್ನುವುದು. ಅವರು ಕೊಟ್ಟಂಥ ಒಂದು ವಾಗ್ದಾನದಿಂದ ರೈತರ ಚಳುವಳಿ ನಿಂತಿದೆ. ಆ ಸಂದರ್ಭದಲ್ಲಿ ಅವರಲ್ಲಿ ಏನೇನು ಮಾತುಕತೆ ನಡೆಯಿತು, ಏನು ಒಪ್ಪಂದಕ್ಕೆ ಬಂದರು, ಸರ್ಕಾರದವರು ಕೊಟ್ಟ ವಾಗ್ದಾನಗಳು ಏನು ಎನ್ನುವುದನ್ನು ಚಾಚು ತಪ್ಪದೆ ರೈತರ ಸಮಸ್ಯೆಗಳನ್ನು ಬಿಡಿಸುವ ಪೂರ್ವಭಾವಿ ಮೊದಲ ಹಂತದ ಸರ್ಕಾರಿ ಪರವಾಗಿ ತಂದಿರತಕ್ಕಂಥ ವರದಿ ಏನು ಇದೆ ಅದನ್ನು ಜಾರಿಗೆ ತರತಕ್ಕಂಥದ್ದು ಇದು ನಾಲ್ಕು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿರತಕ್ಕಂಥ ಕನಿಷ್ಟ ಬೇಡಿಕೆಗಳಾಗಿವೆ. ಇವುಗಳನ್ನು ಒಪ್ಪಿಕೊಂಡರೆ ಸರ್ಕಾರವೇನು ಬಿದ್ದುಹೋಗುವುದಿಲ್ಲ. ವಿನಾಕಾರಣ ರೈತರ ರಕ್ತ ಹರಿಯಬಿಡಬೇಡಿ. ರೈತರ ರಕ್ತಸಿಕ್ತವಾಗಿ ಇರತಕ್ಕಂಥ ಕರ್ನಾಟಕ ದೇಶ ಇದು. ರೈತರ ಹತ್ಯಾಕಾಂಡ ನಾಗಸಮುದ್ರಕ್ಕೆ ಮುಗಿಯಲಿ. ಇದು ಹೀಗೆಯೇ ಮುಂದುವರಿದರೆ, ಇದು ನಿಲ್ಲದೆ ಹೋದರೆ, ಪರಿಸ್ಥಿತಿ ಯಾವ ಒಂದು ಮಟ್ಟಕ್ಕೆ ಹೋಗುತ್ತದೆ ಎನ್ನುವುದನ್ನು ಯಾರೂ ನಂಬುವುದಕ್ಕೆ ಸಾಧ್ಯವಿಲ್ಲ. ಇಷ್ಟೊಂದು ಘಟನೆಯಾದ ಮೇಲೆ ಬುದ್ಧಿಬರುತ್ತದೆಂದು ತಿಳಿದುಕೊಂಡು ಸರ್ಕಾರದ ರೀತಿನೀತಿ ಕಾರ್ಯಕ್ರಮ ಧೋರಣೆಯನ್ನು ನೋಡಿದಾಗ, ಅವರಿಗೆ ಈಗಲೂ ಹೇಳುತ್ತೇನೆ ತಲೆ ಇದ್ದರೆ ಬುದ್ಧಿ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಅವರಿಗೆ ರಕ್ತಪಾತ ನಡೆಸತಕ್ಕಂಥ ಒಂದು ಮನಸ್ಸು ಇದ್ದರೆ ಅದನ್ನು ಬಿಟ್ಟು ರೈತರ ಬಗ್ಗೆ ಅಭಿಮಾನ, ಅನುಕಂಪ ಕಿಂಚಿತ್ತಾದರೂ ಮನಸ್ಸಿನಲ್ಲಿ ಉಳಿದಿದ್ದರೆ ರೈತರ ರಕ್ತ ಪಿಪಾಸೆಯನ್ನು ನಿಲ್ಲಿಸಬೇಕು. ಮನಸ್ಸಿದ್ದರೆ ರೈತರ ಬೇಡಿಕೆಯನ್ನು ಒಪ್ಪಿ ಕೊಳ್ಳ

ಬೇಕು. ರೈತರ ಹತ್ಯಾಕಾಂಡ ನಾಂದಿಯನ್ನು ಚರಮ ಗೀತೆಯನ್ನು ಹಾಡಿ. ಇಲ್ಲದೆಹೋದರೆ ರೈತರ ಸಂಕಷ್ಟಕ್ಕೆ ಒಳಗಾಗಿರುವುದರಿಂದ ಬಂಗಿಲೆದ್ದು ಸರ್ಕಾರದ ವಿರುದ್ಧ ತಿರುಗಿ ಬೀಳತಕ್ಕಂಥ ದುರ್ಗತಿ ಬರಬಹುದೆಂದು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಚೆಪಡುತ್ತ ಸರ್ಕಾರದ ಮುಂದೆ ಏನು ಬೇಡಿಕೆಗಳನ್ನು ಇಟ್ಟಿರುತ್ತಾರೆ ಅದನ್ನು ಕಟ್ಟುನಿಟ್ಟಾಗಿ ಒಪ್ಪಿಕೊಂಡು ಕಾರ್ಯರೂಪಕ್ಕೆ ತರಬೇಕೆಂದು ನಾನು ಸರ್ಕಾರದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

†ಶ್ರೀ ಜೆ. ಎಚ್. ಪಟೇಲ್ (ಚೆನ್ನಗಿರಿ)—ಮಾನ್ಯ ಉಪಸಭಾಧ್ಯಕ್ಷರೇ ಸಾಕಷ್ಟು ವಿವರಣಾತ್ಮಕವಾಗಿ ನಮ್ಮ ಸ್ನೇಹಿತರು ಈ ವಿಚಾರವಾಗಿ ಹೇಳಿದ್ದಾರೆ. ಸ್ಥಳ ಪರೀಕ್ಷೆಗೆ ಹೋದಾಗ, ನಾನು ಮತ್ತು ವಿರೋಧಪಕ್ಷದ ನಾಯಕರು ಹೋಗಿದ್ದೆವು. ಈಗಾಗಲೇ ಅವರು ಕಂಡಿದ್ದನ್ನೆಲ್ಲ ಹೇಳಿದ್ದಾರೆ. ಅಲ್ಲಿ ಬಸಣ್ಣಗೌಡ ಎನ್ನುವ ಯುವಕನ ಒಂದು ವರ್ಷದ ಒಂದು ಮಗು, ಸುಮಾರು ೧೮–೧೯ ವರ್ಷದ ಆತನ ಹೆಂಡತಿಯನ್ನು ನೋಡಿದಾಗ ನಿಜವಾಗಿಯೂ ನಾವು ಯಾವ ಘಟಕ್ಕೆ ಹೋಗುತ್ತಿದ್ದೇವೆ ಎಂದು ಅರ್ಥ ವಾಗುತ್ತದೆ. ಸರ್ಕಾರದ ಕೊಲೆಗಳು ಹೀಗೆಯೇ ಮುಂದುವರಿದರೆ ಇದನ್ನು ಪತ್ತೆಹಚ್ಚಲಿಕ್ಕೆ ತರತಕ್ಕಂಥದ್ದು ಹೇಗೆ ? ಈ ರೀತಿ ನಡೆದದ್ದು ಬಹಳ ದುಃಖವಾಯಿತು. ಆದರೆ ಇದರ ಮೂಲ ಕಾರಣಗಳನ್ನು ಅರ್ಥ ಮಾಡಿಕೊಳ್ಳುತ್ತಾಹೋದರೆ ಜನ ಹುಚ್ಚೆದ್ದು ಕುಣಿಯುತ್ತಿರಬೇಕಾದರೆ ಸರ್ಕಾರ ಕೊಲೆಗಡುಕ ನೀತಿಯನ್ನು ಅನುಸರಿಸುತ್ತಿದೆಯೋ ಎನ್ನುವುದು ಒಂದುಕಡೆ State versus mad mob. ಇದು ಬಹುಶಃ ೪–೫ ವರ್ಷಗಳಿಂದ ಈ ಸರ್ಕಾರ ಬಂದಮೇಲೆ ಇಂಥಹ ಘಟನೆಗಳು ನಡೆಯುತ್ತಿರುವುದು ಜಾಸ್ತಿ ಎಂದು ಕಾಣುತ್ತಿದೆ. ಹಿಂದೆ ಯಾವ ಸರ್ಕಾರ ಇದ್ದಾಗ ಇಷ್ಟುಸಾರಿ ಗೋಲಿಬಾರ್ ಮಾಡಿದ್ದೆ ಆಗಲಿ ಜನರನ್ನು ಕೊಂದದ್ದೆ ಆಗಲಿ ನಡೆದಿರಲಿಲ್ಲ. ಇಲ್ಲಿ ಪೋಲೀಸ್‌ನವರು ಒಂದು ಇನ್‌ಸ್ಟ್ರುಮೆಂಟ್ ಇದ್ದಹಾಗೆ. ಒಬ್ಬ ದಫೆದಾರನನ್ನೋ ಅಥವಾ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ನನ್ನೋ ನೋಡಿದರೆ ಅವರು ಹುಚ್ಚು ಹಿಡಿದ ನಾಯಿರೀತಿ ಇರುತ್ತಾರೆ. ಹುಚ್ಚು ಹಿಡಿದ ನಾಯಿ ಯಾವರೀತಿ ಜನರನ್ನು ಕಚ್ಚುತ್ತಾ ಕಚ್ಚುತ್ತಾ ಹೋಗುತ್ತದೋ ಆರೀತಿ ಇರುತ್ತಾರೆ. ಹುಚ್ಚು ಹಿಡಿದ ನಾಯಿಯನ್ನು ಒಂದುಸಾರಿ ಛೂ ಬಿಟ್ಟರೆ ದಾರಿಯುದ್ದಕ್ಕೂ ಯಾರು ಯಾರು ಸಿಕ್ಕುತ್ತಾರೋ ಅವರನ್ನೆಲ್ಲ ಕಡಿಯುತ್ತಾ ಹೋಗುತ್ತದೆ. ಮೂಲ ಭೂತವಾಗಿ ಪೋಲೀಸ್‌ನವರು ಮುಂಚಿತವಾಗಿಯೇ ರೈತರನ್ನು ಕಂಡು ಸರಿಯಾಗಿ ವರ್ತಿಸಿದ್ದರೆ ಈರೀತಿ ಯಾದ ಘಟನೆ ನಡೆಯುವುದಕ್ಕೆ ಕಾರಣವೇ ಇರುತ್ತಿರಲಿಲ್ಲ. ಯಾವುದೋ ಅಸಮಾಧಾನದಿಂದಾಗಿ ಒಂದು ಸಣ್ಣ ಘಟನೆ ಆದರೆ ಊರಿಗೆ ಬೆಂಕಿ ಹಚ್ಚತಕ್ಕಂಥ ಕೆಲಸ ನಡೆದಿರುತ್ತದೆ. ನಾಗಸಮುದ್ರ ಒಂದು ಚಿಕ್ಕ ಊರು. ಅಲ್ಲಿ ರಸ್ತೆಗಳಲ್ಲಿ ಒಂದು ಗಾಡಿ ಹೋಗುತ್ತಿದ್ದರೆ ಎದುರಿಗೆ ಮತ್ತೊಂದು ಗಾಡಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಪೋಲೀಸ್‌ನವರು ಹೋಗುವಾಗ ಒಂದು ಜೀಪ್ ಹೋಗಿದ್ದರೆ ಸಾಕಾಗಿತ್ತು, ನಾಲ್ಕು ಜನ ಪೋಲೀಸರು ಹೋಗಿ ಸಭೆ ಮಾಡುವುದಕ್ಕೆ ಅವಕಾಶ ಇದೆಯೇ, ಇನ್ನೊಬ್ಬರ ಸಭೆಯನ್ನು ತಡೆಯುವುದಕ್ಕೆ ಹಕ್ಕು ಇಲ್ಲವೆಂದು ಹೇಳಿದ್ದರೆ ಸಾಕಾಗಿತ್ತು. ವಾದವಿವಾದ ನಡೆಯುತ್ತಿರಲಿಲ್ಲ. ತಿಮ್ಮಪ್ಪನವರ ಸಭೆ ಇಲ್ಲವೆಂದು ಗೊತ್ತಾದಮೇಲೆ ಜನ ಹೋಗುತ್ತಿದ ರು. ಒಂದು ವ್ಯಾನ್‌ನಲ್ಲಿ ಪೋಲೀಸ್ ಜೀಪ್, ಮತ್ತೊಂದು ವ್ಯಾನ್ ಒಟ್ಟು ಎರಡು ಜೀಪ್ ಎರಡು ವ್ಯಾನ್ ಸ್ಥಳಕ್ಕೆ ಹೋಗ ತಕ್ಕಂಥ ಅವಶ್ಯಕತೆಯಾದರೂ ಏನು ಇತ್ತು ? ಅಲ್ಲಿಯ ರೈತರು ಹೇಳುತ್ತಾರೆ ಅಲ್ಲಿ ಹಿಂದಿನ ದಿವಸ ೨೪ನೇ ತಾರೀಖು ಮುಂಗೋಟಿ ಗ್ರಾಮದಲ್ಲಿ ಪೋಲೀಸ್‌ನವರು ಮೀಟಿಂಗ್ ಮಾಡುವುದಕ್ಕೆ ಸ್ಥಳವೆಲ್ಲಿ ಎಂದು ಕೇಳಿದ್ದರೆ ಹೇಳುತ್ತಿದ್ದರು.

೩—೦೦ ಪಿ. ಎಂ.

ಆ ಊರಿನಲ್ಲಿ ಎರಡು ಪಾರ್ಟಿ. ತಿಮ್ಮಪ್ಪನವರ ಕಡೆಗೆ ಇದ್ದ ಪಾರ್ಟಿಗೆ ಅವರು ಆದೇಶ ಕೊಟ್ಟಿದ್ದರು ರೈತರ ಸಭೆ ಮಾಡಿಯೇ ತೀರಬೇಕೆಂದು. ಆ ಊರಿನಲ್ಲಿ ಸ್ಥಳವಿಲ್ಲವೆಂದು ಹೇಳಿದರೂ ಕೂಡ ಕೇಳಲಿಲ್ಲ, ಚಪ್ಪರ ಹಾಕುವುದಕ್ಕೆ ಸ್ಥಳವಿಲ್ಲವೆಂದು ಹೇಳಿದರೂ ಕೂಡ ಕೇಳಲಿಲ್ಲ. ಚಪ್ಪರ ಹಾಕುತ್ತೇವೆಂದು ಇನ್ನೊಂದು ಪಾರ್ಟಿಯವರು ಮುಂದೆ ಬಂದರು. ಪಾರ್ಟಿಯಿಲ್ಲದಿರುವ ಊರಿನಲ್ಲಿ ಏತಕ್ಕೆ ಪಾರ್ಟಿ ಹುಟ್ಟಿಸುತ್ತೀರಿ ಇಲ್ಲಿ ರೈತರ ಸಭೆಯನ್ನು ಏತಕ್ಕೋಸ್ಕರ ಮಾಡುತ್ತೀರಿ ? ರೈತರ

---

† ndicates that remarks or speeches have not been revised by the members concerned.

ಸಮಸ್ಯೆಗಳನ್ನು ಶ್ರೀ ಎಚ್. ಎಸ್. ರುದ್ರಪ್ಪನವರು ಸರ್ಕಾರಕ್ಕೆ ವಿವರಿಸುತ್ತಾರೆ, ನೀವು ಏತಕ್ಕೋಸ್ಕರ ಮೀಟಿಂಗ್ ಮಾಡುತ್ತೀರಿ ? ಎಂದು ರೈತರು ಕೇಳಿದರು ಇವರು ಬಿಡಲಿಲ್ಲ. ರಾಜಕೀಯವಾಗಿ ಆಳುವ ಪಕ್ಷದಲ್ಲೇ ಎರಡು ಗುಂಪುಗಳಿವೆ. ನಾನು ನಿನ್ನೆ ಮಾತನಾಡುವಾಗ ಒಬ್ಬ ಮಂತ್ರಿಗಳು ಪಿತೂರಿ ಮಾಡಿದ್ದಾರೆಂದು ಸಾಂಕೇತಿಕವಾಗಿ ಹೇಳಿದ್ದೇನೆ, ಇನ್ನೊಂದು ರಾಜಕೀಯ ಪುಂಪಿನವರಿಗೂ ಈ ಮಂತ್ರಿಗಳ ಗುಂಪಿನವರಿಗೂ ಪಿತೂರಿ ನಡೆಯುತ್ತಲೇ ಇದೆ ಅದು ಅವರ ಒಳ್ಳೆಯದಕ್ಕೆ ಅದು ಮುಂದುವರಿಯಲಿ. ಆದರೆ ಇವರು ತಮ್ಮ ಪಿತೂರಿಗಳನ್ನು ಜನರ ನಡುವೆ ಉಪಯೋಗಿಸಬಾರದು. ಒಂದು ಪಾರ್ಟಿಯ ಒಬ್ಬ ಹುಡುಗ ಆತ ೬ ತಿಂಗಳು ಜೈಲಿಗೆ ಹೋಗಿ ಬಂದಿದ್ದವನು ಈ ಮೀಟಿಂಗ್ ಆಗಲಿಕ್ಕೆ ಬಿಡಬಾರದು, ಕಾಗೋಡುತಿಮ್ಮಪ್ಪನವರನ್ನು ತಡೆಯಬೇಕು ಎಂದು ರಸ್ತೆಗಳಿಗೆ ಗಾಡಿಗಳನ್ನು ನಿಲ್ಲಿಸಿದರು. ಮಂತ್ರಿಗಳು ಬರುತ್ತಾರೆಂದರೆ ಪೋಲೀಸ್‌ನವರು ಬಂದೇ ಬರುತ್ತಾರೆ. ಆ ದಿನ ಹೆಚ್ಚಿನ ಪೋಲೀಸಿನವರು ನಾಗಸಮುದ್ರ ಗ್ರಾಮಕ್ಕೆ ಬಂದರು. ಜನಗಳು ಪೋಲೀಸಿನವರು ಬಂದದ್ದನ್ನು ನೋಡಿ ಅವರು ಕೂಡಿಕೊಂಡರು. ಬಂದು ಜನಗಳನ್ನು ಪೋಲೀಸಿನವರು ಒಳ್ಳೆಯ ಮಾತಿನಲ್ಲಿ ಹೇಳಿದ್ದರೆ ಅವರೆಲ್ಲಾ ತಮ್ಮ ಪಾಡಿಗೆ ತಾವು ಹೊರಟು ಹೋಗುತ್ತಿದ್ದರು. ಆದರೆ ಪೋಲೀಸಿನವರಿಗೆ ಟ್ರೈನಿಂಗ್ ಕೊಡುವಾಗಲೇ ಸರಿಯಾದ ಪದ ಬಳಸುವ ಪದ್ಧತಿ ಹೇಳಿಕೊಟ್ಟಿರುವುದಿಲ್ಲ. ಪೋಲೀಸ್ ಡಿಪಾರ್ಟ್‌ಮೆಂಟ್ ಹಾಗೆ ನನ್ನನ್ನು ಹಲವಾರು ಬಾರಿ ದಸ್ತಗಿರಿ ಮಾಡಿದ್ದಾಗ ನಾನು ನೋಡಿದ್ದೇನೆ, ದಫೇದಾರ್ ಪೋಲೀಸ್‌ನವರನ್ನು ಕರೆಯುತ್ತಿದ್ದುದು ಅವನು ಯಾವನೇ ೨೧೨ ಬೋಳಿಮಗನೇ' ಬಾರೋ ಇಲ್ಲಿ ಎಂದು ಕರೆಯುತ್ತಿದ್ದ. ಅಗೇ ರೀತಿ ಸಬ್‌ಇನ್ಸ್‌ಪೆಕ್ಟರ್ ದಫೇದಾರನನ್ನು ಕರೆಯುತ್ತಿದ್ದರು. ಸಬ್‌ಇನ್ಸ್‌ಪೆಕ್ಟರ್ ಮೇಲ್ಗಡೆಯವರು ಯಾವ ಭಾಷೆ ಬಳಸುತ್ತಾರೋ ನನಗೆ ಗೊತ್ತಿಲ್ಲ ಅದು ಹಾಗೆ ಇರಲಿ. ತತ್‌ಕ್ಷಣ ನಾಗಸಮುದ್ರದಿಂದ ಯೋಗಪ್ಪ ಎಂಬ ಸಬ್‌ಇನ್ಸ್‌ಪೆಕ್ಟರ್‌ನ್ನು ವಾಪಸ್ ಕಳುಹಿಸಿ ಎಂದು ಸತ್ಯಾಗ್ರಹ ಮಾಡಿದಂತಹ ಜನ ಹೇಳಿದರು, ಕಾರಣ ಆತ ಯಾವಾಗಲೂ ಸೊಂಟದ ಕೆಳಗಿನ ಮಾತೇ ಆಡುವುದು, ಅದು ಜನಾಭಿಪ್ರಾಯಕ್ಕೆ ಕ್ರೋಧವಿದೆ. ಈ ಊರಿಗೆ ಡಿ.ವೈ.ಎಸ್.ಪಿ. ಯವರನ್ನು ಸೇರಿಸಿಕೊಳ್ಳುತ್ತೇವೆ ಆ ಸಬ್‌ಇನ್ಸ್‌ಪೆಕ್ಟರ್‌ನ್ನು ಮಾತ್ರ ಸೇರಿಸಿಕೊಳ್ಳುವುದಿಲ್ಲವೆಂದು ಹಠ ಹಿಡಿದರು. ಆತನನ್ನು ವಾಪಸ್ಸು ಕಳುಹಿಸದೆ ಜನಗಳನ್ನು ಸಮಾಧಾನಗೊಳಿಸದೆ ಮುಂಗೋಟಿತನಕ ಹೋಗುತ್ತೇವೆಂದು ಪೋಲೀಸ್‌ನವರು ಹೇಳಿದರು. ತಿಮ್ಮಪ್ಪನವರು ಬರುವುದಿಲ್ಲ ಮೀಟಿಂಗ್ ಮಾಡುವುದಿಲ್ಲ ಎಂದು ಹೇಳಿದರು. ಜನಗಳು ಮಾತ್ರ ಹಿಂಸೆಗೆ ತಿರುಗಲಿಲ್ಲ, ಹಿಂಸೆಗೆ ತಿರುಗಿದರು ಕಲ್ಲು ಹೊಡೆದರು ಎಂದು ಹೇಳಿರುವುದು ಪಕ್ಕಾ ಸುಳ್ಳು. ಪೋಲೀಸ್‌ನವರೇ ನಾಲ್ಕು ಗಾಡಿ ಚಕ್ರಗಳನ್ನು ದಬ್ಬಿದ್ದಾರೆ. ಜನಗಳು ಯಾರೂ ಕೂಡ ಹಿಂಸೆಗೆ ಹೋಗಿರಲಿಲ್ಲ. ಅಲ್ಲಿಗೆ ಅಷ್ಟೊಂದು ಪೋಲೀಸ್ ಹೋಗುವ ಅವಶ್ಯಕತೆ ಏನಿತ್ತು ? ಅಲ್ಲಿ ಎರಡು ರಾಜಕೀಯ ಗುಂಪುಗಳು ಇವೆ ತಿಮ್ಮಪ್ಪನವರಿಗೆ ಕೆಟ್ಟ ಹೆಸರು ತರಲಿಕ್ಕೆ ಹೊರಟಿದ್ದಾರೆ, ನಿಜವಾಗಿಯೂ ಈಗ ಕೆಟ್ಟಹೆಸರು ತಂದಿದ್ದಾರೆ. ಸಂಬಂಧ ಪಡದೆ ಇರತಕ್ಕಂತಹ ನಿರಪರಾಧಿ ರೈತರನ್ನು ಪ್ರಾಣ ತೆಗೆಯತಕ್ಕ ಪರಿಸ್ಥಿತಿ ಏತಕ್ಕೆ ಬಂತು ? ಪೋಲೀಸ್‌ನವರು ಗುಂಡುಹಾರಿಸಿದಾಗ ಬಸವನಗೌಡ ಎಂಬ ಹುಡುಗನಿಗೆ ಏಟು ಬಿದ್ದು ನರಳುತ್ತಿದ್ದಾಗ ಆತನಿಗೆ ನೀರು ಕುಡಿಸಲೆಂದು ಬಂದ ಮಲ್ಲಪ್ಪ ಎಂಬುವರಿಗೆ ಸಾಯುವ ತನಕ ಗುಂಡು ಹೊಡೆದಿದ್ದಾರೆ. ೫೦ ಜನ ರೈತರು ಇದ್ದಾಗ ೧೨೦ ಜನ ಪೋಲೀಸ್‌ನವರು ಇದ್ದುಕೊಂಡು ಲಾಟಿ ಚಾರ್ಜ್ ಮಾಡಿದ್ದರೆ ರೈತರು ಓಡಿಹೋಗುತ್ತಿದ್ದರು. ಗಾಡಿಗಳಿಗೆ ಇವರೇ ಡ್ಯಾಮೇಜ್ ಮಾಡಿದ್ದಾರೆ. ಗುಂಡುಹಾರಿಸುವಾಗ ಮೊದಲು ಗಾಳಿಗೆ ಗುಂಡು ಹಾರಿಸಿ ಶಬ್ದ ತೋರಿಸಿದ್ದರೆ ಅವರು ಓಡಿ ಹೋಗುತ್ತಿದ್ದರು. ಗುಂಡೇಟು ತಗಲಿದ ಬಸವನಗೌಡ ಎಂಬ ಹುಡುಗನಿಗೆ ನೀರು ಕೊಡಲಿಕ್ಕೆ ಹೋದ ಮಲ್ಲಪ್ಪನಿಗೆ ಗುಂಡು ಹಾರಿಸಿದಾಗ ಆತನ ತೊಡೆಗೆ ಏಟು ಬಿದ್ದ ತಕ್ಷಣ ಆತ ೫೦ ಅಡಿ ಮುಂದೆ ಹೋಗಿ ಕುಳಿತುಕೊಳ್ಳುವುದರಲ್ಲಿ ಮತ್ತೊಂದು ಗುಂಡುಹಾರಿಸಿ ಹೊಡೆದು ಸಾಯಿಸಿದಾ ರೆ, ಈ ವಿಚಾರವನ್ನು ಕಣ್ಣಾರೆ ನೋಡಿದ, ಒಬ್ಬ, ಬಣವೆಯ ಹತ್ತಿರ ತಲೆ ಮರಿಸಿಕೊಂಡು ತಪ್ಪಿಸಿಕೊಂಡು ಬಂದೆ ಎಂದು ಹೇಳಿದ. ಇಷ್ಟೆಲ್ಲಾ ಆದಮೇಲೆ ವಿನಾ ಕಾರಣ ಗುಂಡು ಹಾರಿಸಿದ್ದಕ್ಕೆ ಇದಕ್ಕೆ ಏನಾದರೂ ಕಾರಣ ಸೃಷ್ಟಿಮಾಡಬೇಕೆಂದು ಪೋಲೀಸ್ ಜೀಪಿನಿಂದ ವ್ಯಾನಿನಿಂದ ವೈರ್‌ಲೆಸ್ ತೆಗೆದು ಡಿಸೇಲ್ ಹಾಕಿ ಸ್ವತಃ ಸುಟ್ಟುಹಾಕಿ ಇದನ್ನು ಯಾರ ಮೇಲಾದರೂ ತರಬೇಕೆಂದು ನಟರಾಜ್ ಎಂಬುವನನ್ನು ಹಿಡಿದುಕೊಂಡು ಚೆನ್ನಾಗಿ ಹೊಡೆದು ಜೈಲಿಗೆ ಕರೆದುಕೊಂಡು ಹೋಗಿ ಅಲ್ಲಿಂದ ಆಸ್ಪತ್ರೆಗೆ ಸೇರಿಸಿದ್ದಾರೆ. ನಟರಾಜನ ಹಾಸಿಗೆ ಪಕ್ಕದಲ್ಲಿದ್ದ ಒಬ್ಬ ಹೆಂಗಸು ಆತನ ತಾಯಿಗೆ ಯಾರೋ ತಂದು ಬೀಸಾಕಿ ಹೋದರು, ಯಾರು ಬಂದು ನೋಡಲಿಲ್ಲ, ಡಾಕ್ಟರುಗಳು ಬಂದು

ನೋಡಲಿಲ್ಲವೆಂದು ತಿಳಿಸಿದ್ದಾಳೆ. ನಟರಾಜನ ತಾಯಿ ನನ್ನೊಂದಿಗೆ ನಡೆದ ವಿಷಯವನ್ನು ಹೇಳಿದಳು ಇದನ್ನೆಲ್ಲಾ ನೋಡಿದಾಗ ಏತಕ್ಕೋಸ್ಕರ ಮನುಷ್ಯ ಇರಬೇಕು ? ಇಂತಹ ಸರ್ಕಾರ ಇಂತಹ ಹಿಂಸೆಯನ್ನು ಏತಕ್ಕೆ ಅನುಭವಿಸಬೇಕು ? ಇದನ್ನೆಲ್ಲಾ ನೋಡಿದರೆ ದಿಗ್ಭ್ರಮೆಯಾಗುತ್ತದೆ. ಈಗ ಏನೇನೂ ಆಗದೆ ಇರಬಹುದು. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಯಾವ ಅಧಿಕಾರವು ಇಲ್ಲ. ಮ್ಯಾಜಿಸ್ಟ್ರೇಟರ್ ಇಲ್ಲ ಯಾರ್ಯಾರು ಇಲ್ಲ. ೧೨೦ ಜನ ಪೋಲೀಸ್‌ನವರು ಹೋಗಿ ಜನರನ್ನು ಕೊಂದು ಬರುವುದಕ್ಕೆ ಮೂಲತಃ ರೈತರ ಮೇಲಿನ ಅಸಮಾಧಾನದಿಂದಲ್ಲ, ಇದು ಪಕ್ಷದ ಪಿತೂರಿಗಳು. ಸರ್ಕಾರದ ಪರವಾಗಿ ಭರವಸೆಗಳನ್ನು ಕೊಟ್ಟು ಸಮಸ್ಯೆಗಳನ್ನು ತಂದೊಡ್ಡಿದ್ದಾರೆ. ದೊಡ್ಡ ರೈತ, ಸಣ್ಣ ರೈತ ಎಂದು ಬೇಡದ ನೀತಿಯನ್ನು ಅನುಸರಿಸುವುದು ಈ ತರಹ ಮಾಡಿ ಇಂತಹ ಒಂದು ದುರಂತದಲ್ಲಿ ಪರ್ಯಾವಸಾನವಾಗಿದೆ. ಸರ್ಕಾರಕ್ಕೆ ಬುದ್ಧಿ ಇಲ್ಲವೆಂದು ವಿರೋಧಪಕ್ಷದ ನಾಯಕರು ಹೇಳಿದರು, ಬುದ್ಧಿ ಬೇಡ ಹೃದಯ ಬೇಕು. ಸರ್ಕಾರಕ್ಕೆ ಹೃದಯ ಇಲ್ಲದೆ ಹೋದರೆ, ಬುದ್ಧಿ ಇಲ್ಲದೆ ಹೋದರೆ ಇಂತಹ ಕೆಲಸವನ್ನೆ ಮಾಡುವುದು. ರೈತರ ಸಮಸ್ಯೆಗಳನ್ನು ಕಷ್ಟಗಳನ್ನು ಅರ್ಥಮಾಡಿಕೊಳ್ಳುವಂತಹ ಹೃದಯ ಇದ್ದರೆ ಮಾತ್ರ ಜನಪ್ರಿಯ ಸರ್ಕಾರವಾಗಲು ಸಾಧ್ಯ. ಜನಪ್ರಿಯ ಸರ್ಕಾರವೆಂದು ಹೇಳಿಕೊಳ್ಳುವ ನೀವು ಮಂತ್ರಿಗಳ ಕಾರುಗಳ ಹಿಂದೆ ಮುಂದೆ ಪೋಲೀಸ್‌ನವರ ಕಾರುಗಳು ಓಡಾಡುತ್ತಿವೆ. ನಮ್ಮ ಮುಖ್ಯ ಮಂತ್ರಿಗಳು ಇದ್ದಿದ್ದರೆ ನಮ್ಮದು ಜನಪ್ರಿಯ ಸರ್ಕಾರವಾಗಿರುವುದಕ್ಕೆ ನಾವು ಬೀದರ್‌ನಲ್ಲಿ ಗೆದ್ದಿದ್ದೇವೆ ಹೊಸದುರ್ಗದಲ್ಲಿ ಗೆದ್ದಿದ್ದೇವೆಂದು ಕೈ ಬಾಯಿ ತೋರಿಸಿ ಹೇಳಿ ಬಿಡುತ್ತಿದ್ದರು , ನಾವು ಎದುರಿಕೊಳ್ಳುವ ಹಾಗೆ ಮಾಡಿಬಿಡುತ್ತಿದ್ದರು. ನಾನು ಈಗಾಗಲೇ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದೇನೆ ನಾವು ಕೂಡ ಹಿಂಸೆಗೆ ಮನಸ್ಸು ಮಾಡಿದರೆ, ರೈತರ ಮನಸ್ಸಿನಲ್ಲಿರತಕ್ಕ ರೋಷಕ್ಕೆ ತುಪ್ಪ ಎರಿಸುವ ಕೆಲಸವನ್ನು ವಿರೋಧಪಕ್ಷದವರು ಮಾಡಿದರೆ ಶಿವಮೊಗ್ಗ ಜಿಲ್ಲೆಯಲ್ಲಿ ಮಹಾಯುದ್ಧವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಶಿವಮೊಗ್ಗ ಮಾತ್ರವಲ್ಲ, ಕರ್ನಾಟಕ ರಾಜ್ಯದಲ್ಲಿಯೇ ಆಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಇದು ಮುಂದೆ ಇಡೀ ಕರ್ನಾಟಕಕ್ಕೇ ಹರಡುತ್ತದೆ. ಎಲ್ಲ ಕಡೆ ಹೆಣಗಳು ಬೀಳುತ್ತವೆ. ಕೊನೆಗೆ ಸರ್ಕಾರದ ಶಕ್ತಿ ಮುಂದೆ ನಮ್ಮ ಶಕ್ತಿ ಕುಗ್ಗಿ ಹೋಗಬಹುದು. ಆದರೂ ಸಹ ನಾವು ಅಂತಿಮ ಹೋರಾಟಕ್ಕೆ ತಯಾರಾಗಿದ್ದೇವೆ. ಆಗ ನೀವು ಬೇರೆ ದೇಶಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡು ನಮ್ಮ ಶಕ್ತಿಯನ್ನು ತುಳಿಯ ಬೇಕಾಗುತ್ತದೆ. ಆದರೆ ತಾವು ಈ ಮಾರ್ಗವನ್ನು ಬಿಟ್ಟು ಜನರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ತಾವು ಇದೇ ರೀತಿ ವಿದ್ಯಾರ್ಥಿಗಳನ್ನು, ರೈತರನ್ನು, ಕಾರ್ಮಿಕರನ್ನು ಪೋಲೀಸಿನವರ ಮೂಲಕ ಕೊಲ್ಲುವುದಾದರೆ, ಇದೇ ನಿಮ್ಮ ಕೆಲಸವಾದರೆ, ನಾಳೆದಿವಸ ಜನರಿಗೆ ಹುಚ್ಚುನಾಯಿಯನ್ನು ಕಂಡರೆ ಯಾವ ರೀತಿ ಹೆದರಿಕೆಯಾಗುತ್ತದೋ ಅದೇ ರೀತಿ ಪೋಲೀಸರನ್ನು ಕಂಡರೆ ಆಗುತ್ತದೆ. ಲಾ-ಅಂಡ್-ಆರ್ಡರ್ ಬಗ್ಗೆ ನಿಮ್ಮ ಒಂದು ಥಿಯರಿ ಹಾಗೂ ಉದ್ದೇಶ ಏನೇ ಇರಲ್ಲಿ ಆಡಳಿತ ಸುಸೂತ್ರವಾಗಿ ನಡೆ ಯುವಂತಹ ವಾತಾವರಣ ಈಗ ಇಲ್ಲ. ಆದಕಾರಣ ತಾವು ಈಗಲಾದರೂ ಅಲ್ಲಿ ನಡೆದ ಘಟನೆಯ ತೀವ್ರತೆಯನ್ನು ಅರ್ಥ ಮಾಡಿಕೊಳ್ಳಿ. ರೈತರು ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡಿ. ಈ ಮೊದಲು ರೈತರಿಗೆ ೮೫ ಕೋಟಿ ರೂಪಾಯಿಗಳನ್ನು ಪರಿಹಾರ ಕೊಡುವುದಾಗಿ ಹೇಳಿದರು. ಆದರೆ ಅಷ್ಟು ಪರಿಹಾರ ಕೊಡಲಿಲ್ಲ. ಮುಖ್ಯಮಂತ್ರಿಗಳಿಗೂ ನಮಗೂ ಭಿನ್ನಾಭಿಪ್ರಾಯವಿಲ್ಲ. ಆದರೆ ಶ್ರೀ ಕಾಗೋಡು ತಿಮ್ಮಪ್ಪನವರು ನಮ್ಮನ್ನು ಕೆಡಿಸುತ್ತಿದ್ದಾರೆಂದು ಅಲ್ಲಿನ ರೈತರು ಹೇಳುತ್ತಿದ್ದಾರೆ. ಒಂದು ಕಡೆ ಶ್ರೀ ಗುಂಡೂರಾವ್ ಅವರು ರೈತರನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದರೆ ಮತ್ತೊಂದು ಕಡೆ ಶ್ರೀ ಕಾಗೋಡು ತಿಮ್ಮಪ್ಪನವರು ರೈತರನ್ನು ಮುರಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಎಲ್ಲವೂ ಶ್ರೀ ಗುಂಡೂರಾವ್ ಅವರ ಕೈಯಲ್ಲಿದೆಯೇ ಹೊರತು ಶ್ರೀ ಕಾಗೋಡು ತಿಮ್ಮಪ್ಪನವರ ಕೈಯಲ್ಲಿ ಏನಿದೆ ? ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಇದನ್ನು ಶ್ರೀಮತಿ ಇಂದಿರಾಗಾಂಧಿಯವರೇ ತೀರ್ಮಾನ ಮಾಡಬೇಕಾಗುತ್ತದೆಯೇ ಹೊರತು ಶ್ರೀ ಗುಂಡೂರಾವ್ ಅವರ ಕೈಯಲ್ಲಿಯೂ ಇಲ್ಲ. ಇಲ್ಲಿ ಒಂದು ಕಡೆ ಇವರುಗಳು ಇದ್ದರೆ ಮತ್ತೊಂದು ಕಡೆ ಶ್ರೀ ಬಂಗಾರಪ್ಪನವರು ಮತ್ತು ಶ್ರೀ ಬಸವಣ್ಣಪ್ಪನವರು ಇದ್ದಾರೆ. ಒಂದೇ ಪಾರ್ಟಿಯಲ್ಲಿರುವ ನೀವುಗಳು ಬೇಕಾದಂತೆ ಹೊಡೆದಾಟ ಮಾಡಿ, ಆದರೆ ರೈತರನ್ನು ಏತಕ್ಕೆ ಬಲಿ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಎಂ. ಶೀರ್ನಾಳಿಚಂದ್ರುಶೇಖರ್.—ನಮ್ಮ ಪಾರ್ಟಿ ವಿಷಯ ನಿಮಗೆ ಏತಕ್ಕೆ ?

ಶ್ರೀ ಜೆ. ಎಚ್. ಪಟೇಲ್.—ಇಲ್ಲಿ ಶ್ರೀ ಕೆ. ಎಚ್. ಶ್ರೀನಿವಾಸ್ ಅವರ ಪಾರ್ಟಿ ಬೇರೆ ಇದೆ. ಅದು ಏನೇ ಇರಲಿ. ಇದನ್ನೆಲ್ಲಾ ನಾವು ಇಲ್ಲಿ ಮಾತನಾಡಬಾರದು , ಮೊದಲು ಸರ್ಕಾರ ದಿಂದ ಅಲ್ಲಿ ಸತ್ತಿರುವ ಮೂರು ಜನರಿಗೆ ಪರಿಹಾರ ಸಿಗಬೇಕು. ಶ್ರೀ ಬಸವನಗೌಡ, ಶ್ರೀ ಮಲ್ಲಪ್ಪ, ಹಾಗೂ ಶ್ರೀ ನಟರಾಜ್ ಎಂಬುವರು ಈ ಘಟನೆಯಲ್ಲಿ ಸತ್ತಿರುವುದರಿಂದ ಇವರನ್ನೆ ನಂಬಿರುವ ಇವರ ಹೆಂಗಸರಿಗೆ ಅಥವಾ ತಂದೆ ತಾಯಿಗಳಿಗೆ ಸೂಕ್ತ ಪರಿಹಾರ ಕೊಡಬೇಕು ಮತ್ತು ಅಲ್ಲಿನ ರೈತರನ್ನು ಕರೆಸಿ ಮಾತನಾಡಬೇಕು. ಅವರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು. ನಿಮ್ಮ ಕೈ ಯಲ್ಲಿ ಆಗುವಷ್ಟು ಈಡೇರಿಸಿ. ಅದನ್ನು ಬಿಟ್ಟು ೮೫ ಕೋಟಿ ರೂ.ಗಳ ಪರಿಹಾರ ಕೊಡುತ್ತೇವೆಂದು ಹೇಳಿ ಕೊನೆಗೆ ೬೧ ಲಕ್ಷ ಪರಿಹಾರ ಕೊಡುವುದು ಸರಿಯಲ್ಲ. ಬಂದಂಥ ಐದೂವರೆ ಲಕ್ಷ ಅರ್ಜಿಗಳ ಪೈಕಿ ಇವರು ತೀರ್ಮಾನ ಮಾಡಿ ಪರಿಹಾರ ಕೊಟ್ಟ ಅರ್ಜಿಗಳು ಕೇವಲ ಹನ್ನೆರಡೂವರೆ ಸಾವಿರ ಮಾತ್ರ. ಇವೆಲ್ಲಾ ಏತಕ್ಕೆ ? ನಮ್ಮ ಕೈಯಲ್ಲಿ ಮಾಡಲು ಇಷ್ಟು ಮಾತ್ರ ಸಾಧ್ಯ ಎಂದು ಹೇಳಿಬಿಡಿ. ಇದನ್ನು ಬಿಟ್ಟು ಭೂಮಿ ಕೊಡುತ್ತೇವೆ, ನೀರು ಕೊಡುತ್ತೇವೆ, ಆಕಾಶ ಕೇಳಿದರೂ ಕೊಡುತ್ತೇವೆ. ಕೊನೆಗೆ ಬ್ರಹ್ಮಾಂಡ ಬೇಕಾದರೂ ಕೊಡುತ್ತೇವೆಂದು ಹೇಳುವುದು ವಾಸ್ತವಿಕವಾದಂಥ ನೀತಿಯಲ್ಲ. ಇಷ್ಟು ಸಾಲ ಮಾತ್ರ ರದ್ದು ಮಾಡುತ್ತೇವೆಂದು ಖಚಿತವಾಗಿ ಹೇಳಿ. ಗಾಳಿ ಮಾತು ಆಡಬೇಡಿ. ಈ ರೀತಿ ರೈತರನ್ನು ಗುಂಡಿಟ್ಟು ಕೊಲ್ಲುವುದು ಸರಿಯಲ್ಲ. ಈಗಾಲೂ ನಾನು ಸರ್ಕಾರಕ್ಕೆ ಎಚ್ಚರಿಸು ವುದೇನೆಂದರೆ, ಇದು ಭಯಂಕರ ಹಿಂಸಾಖಾಂಡಕ್ಕೆ ತಿರುಗುವುದಕ್ಕೆ ಅವಕಾಶ ಕೊಡಬಾರದು ಎಂದು. ರೈತರು ನಿಮ್ಮ ರಾಜೀನಾಮೆಯನ್ನು ಕೇಳುತ್ತಿಲ್ಲ. ತಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಿ ಎಂದು. ಕೇಳುತ್ತಿದ್ದಾರೆ. ಈಗ ಅವರು ಸಿಟ್ಟಿಗೆದ್ದಿದ್ದಾರೆ. ಇಂತಹ ಸಂದರ್ಭದಲ್ಲಿ ತಾವು ಪೋಲೀಸರ ಸಹಾಯವಿಲ್ಲದೆ ಆ ಸ್ಥಳಕ್ಕೆ ಹೋಗಿ ಬಂದುಬಿಡಿ ನೋಡೋಣ ? ಶ್ರೀ ವೀರಪ್ಪ ಮೊಯ್ಲಿ ಹಾಗೂ ಶ್ರೀ ವೈ. ರಾಮಕೃಷ್ಣ ಅವರು ಹೋಗಿ ಮಾತನಾಡಲಿ. ನಾವು ಬೇಕಾದರೆ ನಿಮಗೆ ಹೊಡೆಯ ಬೇಡಿ ಎಂದು ಹೇಳುತ್ತೇವೆ. ಆದ್ದರಿಂದ ನಿಮಗೇನಾದರು ಸ್ವಲ್ಪ ಧೈರ್ಯವಿದ್ದರೆ ಅಥವಾ ಜನ ಪ್ರೀಯತೆ ಇದ್ದರೆ ಆ ಸ್ಥಳಕ್ಕೆ ಹೋಗಿ ಮಾತನಾಡಿ. ನೀವು ಪೋಲೀಸರನ್ನೇ ನಂಬಿಕೊಂಡು ಎಷ್ಟು ದಿವಸ ಇರುತ್ತೀರಿ ? ನಾಳೆ ಪೋಲೀಸರ ಸಹಾಯ ಇಲ್ಲದಿದ್ದಾಗ ಏನು ಮಾಡುತ್ತೀರಿ ? ಆದ್ದ ರಿಂದ ರೈತರನ್ನು ಕೂಡಲೇ ಕರೆಸಿ ಮಾತನಾಡಿ. ಅಡಿಷನಲ್ ಚೀಫ್-ಸೆಕ್ರೆಟರಿ ಅವರು ಹೇಳಿರುವ ಮಾತುಗಳನ್ನು ತಾವು ನಡೆಸಿಕೊಡಿ. ಈ ಒಂದು ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಇಲ್ಲಿ ಯಾವ ಪ್ರಚೋದನೆಯೂ ಇಲ್ಲದೆ ಪೋಲೀಸರು ಗುಂಡು ಹಾರಿಸಿದ್ದಾರೆ. ವಿನಾಕಾರಣ ರೈತರನ್ನು ಕೊಂದಿದ್ದಾರೆ. ಇಂತಹ ಕೊಲೆಗಡುಕ ಪೋಲೀಸರಿಗೆ ಶಿಕ್ಷೆಯಾಗಬೇಕು. ಸತ್ತವರ ಕುಟುಂಬದವರಿಗೆ ಪರಿಹಾರ ಕೊಡಬೇಕು. ಇಲ್ಲಿ ಸತ್ತಿರುವ ೩ ಜನರ ಪೈಕಿ ನಟರಾಜ್ ಎಂಬುವನನ್ನು ಆತನ ತಾಯಿ ಓದುವುದನು ತಪ್ಪಿಸಿ ಜಮೀನು ಕೆಲಸಕ್ಕೆ ಇಟ್ಟು ಕೊಂಡಿದ್ದಳು. ಈಗ ಈತ ಸತ್ತಿರುವುದರಿಂದ ಅವರಿಗಿರುವ ೫ ಎಕರೆ ಜಮೀನನ್ನು ಯಾರು ನೋಡಿಕೊಳ್ಳಬೇಕು ? ಏಕೆಂದರೆ ಇದ್ದ ಒಬ್ಬ ಮಗನೂ ಸತ್ತಿದ್ದಾನೆ. ಇಂತಹ ಒಂದು ಕರು ಣಾಜನಕ ಸ್ಥಿತಿಯನ್ನು ನೋಡಿದಾಗ ನಮ್ಮ ಸಹನೆ ಮೀರಿ ಹೋಗುತ್ತದೆ. ಆದ್ದರಿಂದ ಇವರು ಗಳಿಗೆ ಪರಿಹಾರವನ್ನು ಕೂಡಲೇ ಕೊಡಿ. ಈ ವಿಚಾರದಲ್ಲಿ ತಾವು ಕೊಡುವ ಉತ್ತರವನ್ನು ನೋಡಿ ಕೊಂಡು ಮುಂದೆ ನಾನು ಅಗತ್ಯವಿದ್ದರೆ ಮಾತನಾಡುತ್ತೇನೆ. ಅವರ ಬೇಡಿಕೆಗಳಲ್ಲಿ ತಾವು ಎಷ್ಟು ಬೇಡಿಕೆಗಳನ್ನು ಒಪ್ಪಿಕೊಳ್ಳುತ್ತೀರಿ ಎಂಬುದನ್ನು ನೋಡಬೇಕಾಗಿದೆ. ರೈತರ ಹೋರಾಟಕ್ಕೆ ಬೆಂಬಲ ಕೊಟ್ಟಿದ್ದೇವೆ. ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದೇವೆ. ಆದರೆ ನಾವು ಅವರ ಜೊತೆಗೆ ನೇರವಾಗಿ ಚಳುವಳಿಗೆ ಹೋಗಿಲ್ಲ. ಏಕೆಂದರೆ, ಅವರು ಬೇಡ ಎಂದು ಹೇಳಿರುವುದರಿಂದ ನಾವು ಭಾಗವಹಿಸಿಲ್ಲ. ತಾವು ಅವರ ಬೇಡಿಕೆಗಳನ್ನು ಈಡೇರಿಸದೆ ಇದೇ ರೀತಿ ಗುಂಡು ಹಾರಿಸಿದರೆ ನಾವೂ ಸಹ ಅವರ ಜೊತೆ ಯಲ್ಲಿ ಸೇರಬೇಕಾಗುತ್ತದೆ. ಆಗ ನಮ್ಮ ಶಕ್ತಿಯನ್ನು ನೀವು ಮತ್ತು ನಿಮ್ಮ ಶಕ್ತಿಯನ್ನು ನಾವು ಎದುರಿಸಬೇಕಾಗುತ್ತದೆಂಬ ಎಚ್ಚರಿಕೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಷ್ಟ್ರದಲ್ಲಿ ಈ ಮೊದಲು ಒಂದು ಸಂಪ್ರದಾಯವಿತ್ತು. ಅದೇನೆಂದರೆ, ಹಿಂದಿನ ರಾಜಮಹಾರಾಜರು ತಮ್ಮ ಒಂದು

ಪ್ರತಿಭೆಯನ್ನು ಪ್ರಕಟ ಮಾಡಲು ಅಶ್ವಮೇಧಯಾಗವನ್ನು ನಡೆಸುವುದರ ಮೂಲಕ ರಾಜ್ಯಭಾರ ಮಾಡುತ್ತಿದ್ದರು. ಆದರೆ ಈಗಿನ ನಮ್ಮ ಶ್ರೀ ಗುಂಡೂರಾವ್ ಅವರ ಸರ್ಕಾರ ನರಮೇಧ ಯಾಗವನ್ನು ಮಾಡಿದೆ. ಈ ಮೊದಲು ನರಗುಂದದಲ್ಲಿ ರೈತರನು ಕೊಂದರು. ನಿಪ್ಪಾಣಿ ಯಲ್ಲಿ ೧೪ ಜನರನ್ನು ಕೊಂದರೂ ಸಹ ಇವರಿಗೆ ತೃಪ್ತಿಯಾಗದೆ ಕಾರಣ ಮತ್ತೆ ಗಂಡಸಿಯಲ್ಲಿ ಇಬ್ಬರನ್ನು ಕೊಂದರು. ಆದರೂ ಇವರಿಗೆ ತೃಪ್ತಿಯಾಗಲಿಲ್ಲ. ಈಗ ನಾಗಸಮುದ್ರದಲ್ಲಿ ೩ ಜನರನ್ನು ಕೊಂದಿದ್ದಾರೆ. ಒಟ್ಟಿನಲ್ಲಿ ಇದು ರಕ್ತಪಿಪಾಸಿ ಸರ್ಕಾರ ಎಂದು ಹೇಳಬೇಕಾಗುತ್ತವೆ. ಉತ್ತರ ಕರ್ನಾಟಕದಲ್ಲಿ ಕನ್ನಡದಲ್ಲಿ ಒಂದು ಕವನ ಹೇಳಿದ್ದಾರೆ. ಅದು ಈ ರೀತಿ ಇದೆ.—

"ಕಂಡಲಿ ಗುಂಡಿಟ್ಟು ಕೊಲ್ಲುವಾ ಗುಂಡೂರಾಯರ ಸರ್ಕಾರ,
ಹೆಂಡ ಕುಡಿದು ಜನ ಸತ್ತರಿಲ್ಲಿ ಸಾವಿರ ಸಾವಿರ,
ಕೆಂಡದಲಿ ಬೆಂದು ನೀರಿನಲ್ಲಿ ಮುಳುಗಿ ಸತ್ತಿದೆ ಮಕ್ಕಳ ಪರಿವಾರ.
ಖಂಡ ಕರ್ನಾಟಕದಲ್ಲಿ ನಡೆಯುತ್ತಿದೆ ಗುಂಡೂರಾಯರ ದರ್ಬಾರ,

ಈ ಕವನದಲಿ ಹೇಳಿರುವುದು ಸತ್ಯವಾಗಿದೆ. ಕಂಡಲ್ಲಿ ಗುಂಡಿಟ್ಟು ಅನೇಕ ಕಡೆ ಜನರನ್ನು ಕೊಂದಿರು ವುದು ಸತ್ಯವಾಗಿದೆ. ಸರ್ಕಸ್ ದುರಂತದಲ್ಲಿ ಬೆಂಕಿಯಲ್ಲಿ ಮಕ್ಕಳು ಬೆಂದು ಸತ್ತಿದ್ದು ಸತ್ಯವಾಗಿದೆ, ಗೋಪಿನಾಥಂ ಟ್ಯಾಂಕ್ ದುರಂತದಲ್ಲಿ ಜನರು ನೀರಿನಲ್ಲಿ ಮುಳುಗಿ ಸತ್ತಿದ್ದು ಹಾಗೂ ಹೆಂಡ ಕುಡಿದ ಜನರು ಸತ್ತಿದ್ದು ಸತ್ಯವಾಗಿದೆ. ಆದ್ದರಿಂದ ಇದೆಲ್ಲಾ ನರಮೇಧವಲ್ಲವೇ ? ಈ ರಕ್ತದ ಪಾಪದ ಕೊಡವನ್ನು ಎಲ್ಲಿಯವರಿಗೆ ತುಂಬಿಸುತ್ತೀರಿ ? ಮೊನ್ನೆ ನಾಗಸಮುದ್ರದಲ್ಲಿ ನಡೆದ ಘಟನೆ ಪ್ರಾಧಾನ್ಯವಲ್ಲ. ಗುಂಡೇಟಿನಿಂದ ಜನರು ಸತ್ತಿದ್ದು ಪ್ರಾಧಾನ್ಯವಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ಹೆಂಗ ಸರಾಗಿ ಹುಟ್ಟುವುದು ಅಪರಾಧವೆಂದು ಕಾಣುತ್ತಿದೆ, ಅದರಲ್ಲಿಯೂ ಮುಖ್ಯಮಂತ್ರಿಗಳ ಹೆಂಡತಿ ಯಾಗಿ ಹುಟ್ಟುವುದು ಮಹಾಪರಾಧ ಎಂದು ಕಾಣುತ್ತದೆ. ಏಕೆಂದರೆ ನಾನು ಬೆಳಗಾಂನಿಂದ ಬಸ್ ನಲ್ಲಿ ಬರುವಾಗ ಅಲ್ಲಿನ ಗೋಡೆಗಳ ಮೇಲೆ ಗೋಕಾಕ್ ವರದಿ ಸಂಬಂಧವಾಗಿ ಏನೇನೋ ಬರೆದಿದ್ದರು. ಶ್ರೀ ಗುಂಡೂರಾವ್ ಅವರ ಬಗ್ಗೆ ಏನಾದರೂ ಬರೆದುಕೊಳ್ಳಲಿ. ಆದರೆ ಶ್ರೀ ಗುಂಡೂರಾವ್ ಅವರ ಹೆಂಡತಿ ಏನು ಅಪರಾಧ ಮಾಡಿದ್ದರು ? ಕನ್ನಡ ಚಳುವಳಿಗೂ ಇವರಿಗೂ ಏನು ಸಂಬಂಧ ? ಇಂತಹ ಅವಾಚ್ಯ ಶಬ್ದಗಳನ್ನು ಗೋಡೆಯ ಮೇಲೆ ಬರೆಯಬಾರದೆಂದು ಕಾನೂನಿದ್ದರೂ ಸಹ ಈ ಕಾನೂನನ್ನು ಜಾರಿಗೆ ತರಲು ಇವರು ತಯಾರಿಲ್ಲ.

ಅಂಥಾ ಅವಾಚ್ಯ ಶಬ್ದಗಳನ್ನು ಬಳಸಿದ್ದಾರೆ. ಇದರಿಂದ ನಮ್ಮ ಸಂಸ್ಕೃತಿಗೆ ಅವಮಾನ ಮಾಡಿ ದ್ದಾರೆ. ಇಂಥಾ ಅವಾಚ್ಯ ಶಬ್ದಗಳನ್ನು ಗೋಡೆ ಮೇಲೆ ಬರೆಯುವುದನ್ನು ತಪ್ಪಿಸುವ ತಾಕತ್ತು ಪೋಲೀಸರಿಗೆ ಇಲ್ಲ, ನಿರಪರಾಧಿಗಳನ್ನು ಜೈಲಿಗೆ ಕಳುಹಿಸುವುದು, ನಿರಪರಾಧಿಗಳ ಮೇಲೆ ಗುಂಡು ಹಾರಿಸುವುದು ಇಂಥಾ ದುರ್ಘಟನೆಗಳನ್ನು ನಡೆಸಿಕೊಂಡು ಬರುತ್ತಾ ಇದ್ದಾರೆ. ನಾನು ಈ ವಿಷಯ ವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಈ ದುರ್ಘಟನೆಗೆ ಕಾರಣರು ಯಾರು ಎಂದರೆ ನಾಗ ಸಮುದ್ರದಲ್ಲಿ ಒಬ್ಬ ಪೋಲೀಸ್ ಅಧಿಕಾರಿ ಯೋಗಪ್ಪ ಅನ್ನುವವನನ್ನು ಆತ ಮಾಡತಕ್ಕಂಥಾ ಅವ್ಯವ ಹಾರದ ಕೆಲಸಕ್ಕೆ ಇವರು ಪ್ರೋತ್ಸಾಹ ಕೊಡುತ್ತಿದ್ದಾರೆ. ಅಂಥಾವನಿಗೆ ಇವರು ಈ ಕೆಲಸ ಕೊಟ್ಟಿದ್ದಾರೆ. ಆ ರೈತರಲ್ಲಿ ಯಾವರೀತಿ ಮಾತನಾಡಬೇಕು, ಅವರ ಮನಸ್ಸಿನ ಭಾವನೆ ಏನು ಎಂದು ಮೊದಲು ತಿಳಿದುಕೊಳ್ಳಬೇಕಾಗಿತ್ತು. ಅವರು ತಮ್ಮ ಸರ್ಕಾರಕ್ಕೆ ಭಾವನೆಯನ್ನು ಸರ್ಕಾರಕ್ಕೆ ವ್ಯಕ್ತ ಪಡಿಸುವದಕ್ಕೋಸ್ಕರ ಅವರು ಶಾಂತಿಯುತವಾದ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ ಶಾಂತಿಯುತವಾದ ಹೋರಾಟವನ್ನು ಮಾಡುತ್ತಿದ್ದಾರೆ. ಹೀಗೆ ಮಾಡುತ್ತಿರುವಾಗ ಅವರನ್ನು ಹಿಡಿದು ಕೊಂಡು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬಂದರು. ಅವರನ್ನು ಜೈಲಿಗೆ ಹಾಕುವುದಕ್ಕೆ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬಂದಾಗ ಆ ವ್ಯಕ್ತಿ ಎಂತಹ ಅವಾಚ್ಯ ಶಬ್ದವನ್ನು ಬಳಸಿದ್ದಾನೆ ಎಂದರೆ ಅವನು ಬಳಸಿದಂಥಾ ಭಾಷೆಯನ್ನು ನಾನು ಉಪಯೋಗ ಮಾಡದೇ ಇದ್ದರೂ ಕೂಡ ಅದರ ಅರ್ಥ ಬರುವ ರೀತಿಯಲ್ಲಿ ನಾನು ಇಲ್ಲಿ ಹೇಳಬೇಕಾಗಿದೆ. ಸರ್ಕಾರದ ಅನ್ನಪುಷ್ಕಳವಾಗಿ ಸಿಕ್ಕುತ್ತಿದೆ ಎಂದು ಇಲ್ಲಿಗೆ ಬರುತ್ತಿದ್ದೀರಲ್ಲಾ ನಿಮ್ಮ ಹೆಣ್ಣುಮಕ್ಕಳನ್ನು ಭೋಗಿಸಲು ನೀವು ಯಾರಿಗೆ ಕೊಟ್ಟು ಬಂದಿದ್ದೀರಿ ಎಂದು ಕೇಳಿದ್ದಾನಲ್ಲಾ. ಇಂಥಾ ಮಾತನ್ನು ಅವನಿಂದ ಕೇಳಬೇಕಾದರೆ ಯಾರಿಗೆ ತಾನೇ ರಕ್ತ ಕುದಿಯುವು ದಿಲ್ಲ. ಆ ರೈತರ ಮನಸ್ಸಿನಲ್ಲಿ ಈ ಮಾತನ್ನು ಕೇಳಿದರೆ ಏನಾಗಬಹುದು ? ರೈತರು ಚಳುವಳಿ ಏತಕ್ಕೆ ಮಾಡುತ್ತಿದ್ದಾರೆ, ಅವರ ನೋವು ಏನು ಎಂದು ತಿಳಿದುಕೊಳ್ಳದೆ ಇಂಥಾ ಮಾತನಾಡಿದ್ದಾನೆ, ಆ

ಪೋಲೀಸ್ ಅಧಿಕಾರಿ. ರೈತರು ಚಳುವಳಿ ಮಾಡಿದ ಉದ್ದೇಶ ಏನೆಂದರೆ ತಮ್ಮಲ್ಲಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೋಸ್ಕರವಾಗಿ ಸಾಮಾನ್ಯವಾಗಿ ೩ ತಿಂಗಳಿಂದಲೂ ಕೂಡ ಉಗ್ರವಾದ ಚಳುವಳಿಯನ್ನು ಮಾಡುತ್ತಿದ್ದಾರೆ. ಹೀಗಿದ್ದರೂ ಕೂಡ ಸರ್ಕಾರ ೩ ತಿಂಗಳಿಂದಲೂ ಕೂಡ ಕಣ್ಣು ತೆರೆಯಬೇಡವೇ, ಇದನ್ನು ಕೇಳಲು ಸರ್ಕಾರಕ್ಕೆ ಕಿವಿ ಇಲ್ಲವೇ ? ಸರಿಯಾದ ಹೃದಯ ಇಲ್ಲವೆ ? ಸರಿಯಾದ ಮನುಷ್ಯತ್ವ ಇಲ್ಲವೆ ? ನಮ್ಮ ದೇಶದಲ್ಲಿ ನಾನಾ ಬಾಬುಗಳಿಗಾಗಿ ಖರ್ಚು ಮಾಡತಕ್ಕಂಥಾದಲ್ಲಿ ಮೂರನೇ ಒಂದು ಭಾಗದಷ್ಟು ಹಣವನ್ನು ಸುಮಾರು ೫೦೦ ಕೋಟಿ ರೂಪಾಯಿಯಷ್ಟು ಹಣವನ್ನು ಸರ್ಕಾರದಲ್ಲಿರುವ ೩೩ ಸಾವಿರ ಅಧಿಕಾರಿಗಳಿಗೆ ಖರ್ಚು ಮಾಡುತ್ತಿದ್ದೀರಿ. ಇದು ಯಾರ ಹಣ, ಇದು ಬಡವರ ಹಣವಲ್ಲವೇ, ಇದು ರೈತರ ಹಣವಲ್ಲವೇ, ಆ ರೈತರಿಂದ ದುಡ್ಡನ್ನು ವಸೂಲ್ಮಾಡಿ, ಅವನ ಹಣವನ್ನೇ ಖರ್ಚು ಮಾಡಿ ನೀವು ಸರ್ಕಾರ ನಡೆಸುತ್ತಿದ್ದಿರಿ. ಅಂಥಾವನ ಮೇಲೆ ಗುಂಡು ಹಾಕಿಕೊಲ್ಲುತ್ತೀರಲ್ಲಾ ಇದು ನ್ಯಾಯವೇ ? ನಿಜವಾಗಿ ಆ ರೈತರ ಸಮಸ್ಯೆ ಏನು ಅನ್ನುವುದನ್ನು ತಿಳಿಯಲು ನ್ಯಾಯವಾಗಿ ಪ್ರಯತ್ನವೇ ಪಟ್ಟಿಲ್ಲ ಎಂದು ಹೇಳುತ್ತೇನೆ. ಇದನ್ನು ನೋಡಿದರೆ ನಿಜವಾಗಿಯೂ ಸರ್ಕಾರ ಇದೆಯೇ ಎನ್ನುವ ಪ್ರಶ್ನೆ ಬರುತ್ತದೆ. ಆ ರೈತರು ತಮ್ಮ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೋರಾಟ ಮಾಡುತ್ತಿರುವಾಗ ಅವರ ಸಮಸ್ಯೆ ಏನು ಎಂದು ಕೇಳಿ ಬಗೆಹರಿಸುವ ಪ್ರಯತ್ನ ಮಾಡದೆ ಅವರ ಮೇಲೆ ಗುಂಡುಹಾರಿಸುವ ಪ್ರಯತ್ನ ಮಾಡಿದ್ದಾರೆ. ಅವರನ್ನು ಕೊಲ್ಲುವ ಪ್ರಯತ್ನ ಮಾಡಿದ್ದಾರೆ. ಆ ಮುಂಗೋಟಿಯಲ್ಲಿ ಲಂಗೋಟಿ ಮೀಟಿಂಗ್ ಇವರು ಏಕೆ ಮಾಡಬೇಕಾಗಿತ್ತು ? ಪೋಲೀಸ್ ವ್ಯಾನ್‌ನಲ್ಲಿ ಶಾಮಿಯಾನಾ ತೆಗೆದುಕೊಂಡು ಅಲ್ಲಿ ಚಪ್ಪರ ಏತಕ್ಕೆ ಹಾಕಿಸಬೇಕಾಗಿತ್ತು ? ಆ ರೈತರನ್ನು ಹೆದರಿಸಿ ಬೆದರಿಸಿ ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಅವರ ಮೇಲೆ ಗುಂಡು ಹಾರಿಸುವ ಕೆಲಸ ಮಾಡಿದ್ದಾರಲ್ಲಾ ಇದು ಸರಿಯೇ ? ರೈತರನ್ನು ಚೆನ್ನಾಗಿ ದುಡಿಯಬೇಕು ಅಂತ ಹೇಳುತ್ತೀರಿ, ರೈತರು ದುಡಿಯದೇ ಹೋದರೆ ನಮಗೆ ಏನೂ ಸಿಕ್ಕುವುದು ಇಲ್ಲ. ಅವರು ತಮ್ಮ ಕಷ್ಟಗಳನ್ನು ಬಗೆಹರಿಸುವುದಕ್ಕೆ ಶಾಂತಿಯುತವಾದ ಚಳುವಳಿ ಮಾಡುತ್ತಿದ್ದರೆ, ಅಲ್ಲಿಯ ಪೋಲೀಸ್ ಅಧಿಕಾರಿ ಯೋಗಪ್ಪ ಅನ್ನುವವನು ಸರ್ಕಾರದ ಅನ್ನ ಜೈಲಿನಲ್ಲಿ ಪುಷ್ಕಳವಾಗಿ ಸಿಕ್ಕುತ್ತದೆ ಅಂತ ಇಲ್ಲಿಗೆ ಬಂದಿದ್ದೀರಲ್ಲಾ ನಿಮ್ಮ ಊರಿನಲ್ಲಿ ನಿಮ್ಮ ಹೆಂಡತಿಯನ್ನು ಯಾರ ಕೈಯಲ್ಲಿ ಕೊಟ್ಟು ಬಂದಿದ್ದೀರಿ ಅಂತ ಕೇಳಿದ್ದಾನಲ್ಲಾ ಇಂತ ಮಾತನ್ನಾಡಿದರೆ ಯಾರಿಗೆ ತಾನೇ ರಕ್ತ ಬಿಸಿರುವುದಿಲ್ಲ. ಅವರು ಶಾಂತಿಯುತವಾಗಿ ಚಳುವಳಿ ಮಾಡುತ್ತಿದ್ದರೆ, ಅವರ ಮೇಲೆ ಗಲಾಟೆ ಮಾಡಿ ಆ ನಿರಪರಾಧಿಗಳ ಮೇಲೆ ಗುಂಡು ಹಾರಿಸಿದ್ದಾರಲ್ಲಾ. ಇಷ್ಟೇ ಅಲ್ಲದೆ ಅಲ್ಲಿರುವ ಜೋಪಿಗೆ ಅವರೇ ಬೆಂಕಿ ಇಟ್ಟು ಸುಟ್ಟಿದ್ದಾರೆ. ಅವರು ಗುಂಡು ಹಾರಿಸಿದ್ದರಲ್ಲಿ ಒಬ್ಬನಿಗೆ ನೋವಾಗಿ ಅವನಿಗೆ ನೀರು ಕುಡಿಸುವುದಕ್ಕೆ ಬಂದವರನ್ನು ಕೊಂದಿದ್ದಾರೆ ಆ ನಟರಾಜನ ಮೇಲೆ ಗುಂಡಿಟ್ಟಿದ್ದಾರೆ. ಅವನ ಮೇಲೆ ಗುಂಡು ಹಾಕಬೇಕಾದಂಥಾ ಅವಶ್ಯಕತೆ ಇರಲಿಲ್ಲ. ಇದರಿಂದ ಆ ರೈತರ ಸಮಸ್ಯೆ ಏನೂ ಬಗೆಹರಿಸಿದಂತೆ ಆಗಲಿಲ್ಲಾ. ಆ ರೈತರ ಮುಖ್ಯ ಸಮಸ್ಯೆಗಳು ಏನು ಎಂದರೆ ಅವರ ಸಾಲವನ್ನು ರದ್ದು ಮಾಡುವುದಕ್ಕೆ ಮೊದಲು ಒಪ್ಪಿದ್ದರು, ಅದನ್ನು ತಾವು ಒಪ್ಪಬೇಕಾಗಿತ್ತು ತಮಗೆ ಹೇಳಬೇಕಾದರೆ ಈ ಬಗ್ಗೆ ನಾನು ಮೊದಲೇ ಒಂದು ನಿರ್ಣಯವನ್ನು ತಂದಿದ್ದೆ. ಆಗಿನ ಮಂತ್ರಿಗಳು ಈ ರೈತರ ಸಾಲ ೧೧೨ ಕೋಟಿ ರೂಪಾಯಿ ಏನು ಇದೆ ಅದನ್ನು ಬಿಡಬೇಕಾಗಿದೆ, ಎಂದಿದ್ದರು. ಈ ೧೧೨ ಕೋಟಿ ರೂಪಾಯಿ ಬರೇ ಶ್ರೀಮಂತರ ಸಾಲವೇ ವಿನಾ ಬಡವರ ಸಾಲವಲ್ಲ. ಬಡವರ ಸಾಲ ಕೇವಲ ೩೫ ಕೋಟಿ ರೂಪಾಯಿ ಮಾತ್ರ ಇರುವುದು. ಆ ೩೫ ಕೋಟಿ ರೂಪಾಯಿ ಕೂಡ ಇವರು ಬಿಟ್ಟಿಲ್ಲ. ತಮಗೆ ಹೇಳಬೇಕಾದರೆ ಹೆಚ್ಚುವರಿ ಬೋನಸ್, ಡಿ.ಎ. ಅಂತ ಹೇಳಿ ೨೫ ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ, ಆ ಬಡ ರೈತರ ಸಾಲ ೩೫ ಕೋಟಿ ರೂಪಾಯಿ ಏನು ಇದೆ ಅದನ್ನು ಬಿಟ್ಟಿಲ್ಲಾ. ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ, ಮಹಾರಾಷ್ಟ್ರ ಸರ್ಕಾರ ತಮಿಳುನಾಡು ಸರ್ಕಾರದವರು ಹೇಗೆ ಬಿಟ್ಟರು ಎಂದು ಕೇಳುತ್ತೇನೆ. ಈ ಬಡ ರೈತರು ತಮ್ಮ ಸಾಲವನ್ನು ರದ್ದು ಮಾಡಬೇಕೆಂದು ಒಟ್ಟು ೫,೦೫,೦೨೯ ಜನರು ಅರ್ಜಿ ಹಾಕಿದ್ದರು. ಅವರಲ್ಲಿ ೨.೮೦೯ ಅರ್ಜಿಗಳು ವಿಲೇವಾರಿ ಆಗಿದೆ. ಅದರಲ್ಲಿ ಒಟ್ಟು ೨೫ ಲಕ್ಷ ರೂಪಾಯಿ ಮಾತ್ರ ರಿಯಾಯಿತಿ ಕೊಟ್ಟಿದ್ದಾರೆ. ಒಟ್ಟು ೧೧½ ಕೋಟಿ ರೂಪಾಯಿಯಷ್ಟು ಸಾಲ ಬಿಡುಗಡೆಯಾಗಬೇಕಾಗಿತ್ತು. ಅಷ್ಟು ಬಿಡುಗಡೆಯಾಗಿಲ್ಲಾ. ಹೀಗಿರುವಾಗ ಆ ರೈತರು ಬಹಳ ಕಷ್ಟದಲ್ಲಿರುವಾಗ, ಆ ರೈತರು ತೆಗೆದುಕೊಂಡಂಥಾ ಸಾಲವನ್ನು ವಸೂಲ್ಮಾಡುವುದಕ್ಕೆ ಈ ಅಧಿಕಾರಿಗಳು ಹೋಗಿ ಅವರ ಮನೆಯಲ್ಲಿರುವ ಪಾತ್ರೆ ವಗೈರೆ ಇವುಗಳನ್ನು ಜಪ್ತಿ ಮಾಡಿಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ ತಮಗೆ ಅಧಿಕೃತವಾಗಿ ಹೇಳಬೇಕಾದರೆ ಭಾರತದ

ಆಡಿಟರ್ ಮತ್ತು ಕಂಪ್ಟ್ರೋಲರ್ ಜನರಲ್‌ರವರು ತಮ್ಮ ವರದಿಯಲ್ಲಿ ಸೇಲ್ಸ್ ಟ್ಯಾಕ್ಸ್ ೪೪ ಕೋಟಿ ರೂಪಾಯಿ ಕಲೆಕ್ಷನ್ ಆಗಬೇಕಾಗಿತ್ತು ಇನ್ನೂ ಆಗಿಲ್ಲ ಅಂತ ಹೇಳಿದ್ದಾರೆ. ಇದೆಲ್ಲಾ ಶ್ರೀಮಂತರಿಂದ, ದೊಡ್ಡ ದೊಡ್ಡ ವ್ಯಾಪಾರಸ್ಥರಿಂದ ಬರಬೇಕಾದದ್ದು. ಅವರ ಹತ್ತಿರ ಹೋಗಿ ಇವರು ಕಲೆಕ್ಟ್ ಮಾಡಲಿಕ್ಕೆ ಆಗಲಿಲ್ಲ. ಇನ್ನು ಎಕ್ಸೈಜ್ ಡ್ಯೂಟಿಯಿಂದ ೫.೧೪ ಕೋಟಿ ರೂಪಾಯಿ ಕಲೆಕ್ಟ್ ಆಗಬೇಕಾಗಿದೆ, ಫಾರೆಸ್ಟಿನಿಂದ ೧೪.೯೪ ಕೋಟಿ ರೂಪಾಯಿ ಕಲೆಕ್ಟ್ ಆಗಬೇಕಾಗಿದೆ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಿಂದ ೧೨.೨೪ ಕೋಟಿ ರೂಪಾಯಿ ಬರಬೇಕಾಗಿದೆ. ಹೀಗೆ ಒಟ್ಟು ೮೦.೩೩ ಕೋಟಿ ರೂಪಾಯಿಯಷ್ಟು ಕಲೆಕ್ಟ್ ಮಾಡಬೇಕಾಗಿದೆ ಎಂದು. ಇದು ಶ್ರೀಮಂತರಿಂದಲೇ ಬರಬೇಕಾಗಿದೆ ಎಂದು ಅವರಿಂದ ವರದಿ ಬಂದಿದೆ. ಆ ಶ್ರೀಮಂತರಿಂದ ಆ ಹಣವನ್ನು ವಸೂಲ್ ಮಾಡುವುದಕ್ಕೆ ನಮ್ಮ ಸರ್ಕಾರಕ್ಕೆ ದಕ್ಷತೆ ಎಲ್ಲಿಹೋಗಿದೆ, ಆ ಧೀಮಂತಿಕೆ ಎಲ್ಲಿ ಹೋಗಿದೆ ? ಅವರಿಂದ ವಸೂಲ್ ಮಾಡುವುದಕ್ಕೆ ತಾಕತ್ತು ಇಲ್ಲದೆ ಈ ರೈತ ವರ್ಗದ ಮೇಲೆ, ಈ ಬಡವರ ಮೇಲೆ ತಮ್ಮ ದಬ್ಬಾಳಿಕೆಯನ್ನು ನಡೆಸಿ ಗುಂಡು ಹಾರಿಸಿ ಕೊಲ್ಲುತ್ತಿದ್ದಾರಲ್ಲಾ ಇದು ನ್ಯಾಯವೇ ? ಒಟ್ಟಿನಲ್ಲಿ ಹೇಳಬೇಕಾದರೆ ಆ ರೈತರ ಸಮಸ್ಯೆ ಏನು ಅನ್ನುವುದನ್ನು ತಿಳಿಯಬೇಕು ಆ ರೈತರಿಗೆ ಇನಾಮ್ ಭೂಮಿಯನ್ನು ಕೊಡುತ್ತೇವೆಂದು ಹೇಳಿದರು, ಆದರೆ ಅವರಿಗೆ ಇನ್ನೂ ಪಟ್ಟಾನೇ ಕೊಟ್ಟಿಲ್ಲಾ. ಇದಕ್ಕೆ ಬೇರೆಯವರ ಕುತಂತ್ರ ನಡೆಯುತ್ತಾ ಇದೆ. ಅದಕ್ಕೆ ಆ ರೈತರು ಹೋರಾಟ ಮಾಡುತ್ತಿದ್ದಾರೆ. ಇನ್ನು ಕೂಲಿಗಾಗಿ ಕಾಳು ಅನ್ನುವ ಯೋಜನೆಯಲ್ಲಿ ಶಿವಮೊಗ್ಗಾ ಜಿಲ್ಲೆಯಲ್ಲಿ ನಡೆಯುತ್ತಾ ಇರತಕ್ಕಂಥಾದ್ದು ನ್ಯಾಯವಾಗಿ ಕೂಲಿ ಮಾಡುವವರಿಗೆ ಸರಿಯಾದ ಪರಿಹಾರ ಸಿಕ್ಕುತ್ತಾ ಇಲ್ಲ ಕೂಲಿ ಮಾಡದೇ ಇರುವವರಿಗೆ ಪ್ರಯೋಜನ ದೊರಕುತ್ತಾ ಇದೆ, ನ್ಯಾಯವಾಗಿ ಕೂಲಿ ಮಾಡುವವನು ಮಣ್ಣು ತಿನ್ನಬೇಕು ಅಷ್ಟೆ. ಅಷ್ಟು ಭ್ರಷ್ಟಾಚಾರ ನಡೆಯುತ್ತಾ ಇದೆ. ಅದನ್ನೂ ಸಹ ವರದಿಯಲ್ಲಿ ಕೊಟ್ಟಿದ್ದಾರೆ ಅದಕ್ಕಾಗಿ ಅವರು ಸತ್ಯಾಗ್ರಹ ಮಾಡಿದರೆ ಅದನ್ನು ವಿಚಾರಿಸುವವರೇ ಇಲ್ಲ. ಇನ್ನು ಜೀತವಿಮುಕ್ತರ ಬಗ್ಗೆ ಹೇಳಬೇಕಾದರೆ ಅವರಿಗೂ ಸಹ ಸರಿಯಾದ ಪರಿಹಾರ ದೊರಕುತ್ತಾ ಇಲ್ಲ. ಕೇಂದ್ರ ಸರ್ಕಾರದವರು ನಮಗೆ ಈ ಬಗ್ಗೆ ೨.೪೧ ಕೋಟಿ ರೂಪಾಯಿ ಏನು ಬಿಡುಗಡೆ ಮಾಡಿದ್ದಾರೆ ಅವರಲ್ಲಿ ೨.೧೪ ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದಾರೆ ಅದಕ್ಕೆ ಇನ್ನೂ ಕೂಡ ಕ್ಲಿಯರೆನ್ಸ್ ಸರ್ಟಿಫಿಕೇಟ್ ಬಂದಿಲ್ಲಾ. ಸರ್ಕಾರದ ವರದಿ ಪ್ರಕಾರ ಅಧಿಕೃತವಾಗಿ ಏನು ಬಂದಿದೆ ಅದನ್ನು ನಾನು ಹೇಳುತ್ತಿದ್ದೇನೇ ವಿನಾ ಉತ್ಪ್ರೇಕ್ಷೆಯಿಂದ ಹೇಳುತ್ತಾ ಇಲ್ಲ. ಇನ್ನು ಜೀತವಿಮುಕ್ತರ ಪರಿಹಾರದಲ್ಲಿ ಏನು ಅನ್ಯಾಯ ನಡೆಯುತ್ತಾ ಇದೆ ಎಂದರೆ ಅವರು ಒಂದು ಎತ್ತು ತೆಗೆದುಕೊಳ್ಳಬೇಕಾದರೆ ೫೦೦ ರೂಪಾಯಿ ತೆಗೆದುಕೊಳ್ಳಬೇಕಾದರೆ ಅವರ ಕೈಯಲ್ಲಿ ೪ ಸಾವಿರ ರೂಪಾಯಿ ತೆಗೆದುಕೊಂಡು ಹಾಗೆ ರುಜು ಮಾಡಿಸಿ ಕೊಂಡಿದ್ದಾರೆ. ಈ ಅನ್ಯಾಯದ ಬಗ್ಗೆ ಅವರು ಸತ್ಯಾಗ್ರಹ ಮಾಡಿದ್ದಾರೆ. ಮತ್ತೆ ಅವರು ವಸೂಲಿ ಮಾಡಿದಾಗ ಅವರ ಮೇಲೆ ಏನು ದಬ್ಬಾಳಿಕೆ ಮತ್ತು ದೌರ್ಜನ್ಯ ನಡೆದಿದೆ ಅದನ್ನು ಸರ್ಕಾರದ ಮುಂದೆ ತೋರಿಕೊಳ್ಳುವುದಕ್ಕೋಸ್ಕರ ಸತ್ಯಾಗ್ರಹ ಮಾಡಿದ್ದಾರೆ ಹೀಗೆ ನಾನಾ ರೀತಿಯಲ್ಲಿ ಆ ರೈತರ ಮೇಲೆ ಸರ್ಕಾರೀ ಅಧಿಕಾರಿಗಳು ದೌರ್ಜನ್ಯ ಮಾಡಿರುವುದರಿಂದ ಅವರು ವಿಧಿಯಿಲ್ಲದೆ ತಮ್ಮ ಅಸ್ತ್ರವನ್ನು, ಎಂದರೆ ಶಾಂತಿಯುತವಾದ ಸತ್ಯಾಗ್ರಹವನ್ನು ಮಾಡಿದರು. ಈ ಹಿಂದೆ ನರಗುಂದ ನವಲಗುಂದದ ಘಟನೆ ಆದಾಗ ಅಲ್ಲಿಯವರು ೩೦ ದಿವಸಗಳ ಕಾಲ ಸತ್ಯಾಗ್ರಹ ಮಾಡಿದರು. ತಮಗೆ ಆಗಿರತಕ್ಕಂಥಾ ಅನ್ಯಾಯದ ಬಗ್ಗೆ, ಅಧಿಕಾರಿಗಳು ಅನ್ಯಾಯ ಮಾಡಿದುದರ ಬಗ್ಗೆ ಒಂದು ದಿವಸ ಮೆರವಣಿಗೆ ಬಂದು ಅಲ್ಲಿಯ ಸರ್ಕಾರೀ ಕಚೇರಿಗಳನ್ನು ಬಂದ್ ಮಾಡಬೇಕೆಂದು ಬಂದರು. ಅವರು ತಾಲ್ಲೂಕ್ ಆಫೀಸ್ ಮುಂದೆ ಬಂದು ಸತ್ಯಾಗ್ರಹ ಮಾಡಿದರು. ಅಲ್ಲಿ ಸತ್ಯಾಗ್ರಹ ನಡೆಯುತ್ತಿದ್ದಾರೆ ಒಬ್ಬ ತಹಸೀಲ್ದಾರ್ ಬಂದು ಆ ತಾಲ್ಲೂಕ್ ಆಫೀಸ್ ಬಾಗಿಲ ಮುಂದೆ ೫ ಜನ ಸತ್ಯಾಗ್ರಹಿಗಳು ಏನು ಕೂತಿದ್ದರು ಅವರನ್ನು ಬಾಗಿಲು ತೆಗೆಯಬೇಕು ಬಿಡಿ ಎಂದು ಕೇಳಿದ. ಅವರು ಅದಕ್ಕೆ ಅವಕಾಶ ಕೊಡದೇ ಇದ್ದಾಗ ಅಲ್ಲಿರತಕ್ಕಂಥಾ ೧೨ ಜನರನ್ನು ಬೂಟ್ಸ್‌ಕಾಲಿನಲ್ಲಿ ಒದ್ದು ತೆಗೆದ. ಅದಕ್ಕೆ ಆ ತಹಸೀಲ್ದಾರ ಏನು ಅನುಭವಿಸಬೇಕಾಗಿತ್ತು ಅದನ್ನು ಅದನ್ನು ಅನುಭವಿಸಿದ. ಇಂಥಾ ಒಂದು ದುರ್ಘಟನೆ ಅಲ್ಲಿ ನಡೆದಿದೆ. ಇನ್ನು ಮಾನ್ಯ ಮಿತ್ರರಾದ ಶ್ರೀ ಜೆ.ಹೆಚ್. ಪಟೇಲರು ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಬೇಕು ಎಂದು ಕೇಳಿದ್ದಾರೆ. ತಮಗೆ ಹೇಳಬೇಕಾದರೆ ಇಂಥಹ ನ್ಯಾಯಾಂಗ ವಿಚಾರಣೆ ಇದುವರೆಗೆ ಎಷ್ಟೋ ಆಗಿವೆ ಆದುದರಿಂದ ಅದಕ್ಕೆ ಏನೂ ಇಲ್ಲದಾಗಿದೆ ಇದನ್ನೆಲ್ಲಾ ಸಮಾಧಿ ಮಾಡುವುದಕ್ಕೆ ನ್ಯಾಯಾಂಗ ವಿಚಾರಣೆ ಮಾಡಿ ಮುಚ್ಚುತ್ತಾರೇ ವಿನಾ ಪ್ರಯೋಜನ ಮಾತ್ರ ಏನೂ ಆಗುತ್ತಾ ಇಲ್ಲ. ತಮಗೆ ಇನ್ನೊಂದು ವಿಷಯ ಹೇಳಬೇಕಾದರೆ ಈಪೊತ್ತು ನರಗುಂದ ನವಲಗುಂದದ ಬಗ್ಗೆ ಒಂದು ವರದಿ ಬಂದಿದೆ.

೩-೩೦ ಪಿ.ಎಂ.

ಆ ವರದಿಯಲ್ಲಿ ಈ ಅಧಿಕಾರಿಗಳ ದುರ್ವರ್ತನೆ ಬಗ್ಗೆ, ಹಿಂಸೆಯ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಹೇಳಿದ್ದಾರೆ. ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿರಿ? ರೈತರಿಗೆ ಕೊಟ್ಟಂತಹ ಪರಿಹಾರ ವೇನು? ಅಧಿಕಾರಿಗಳು ರೈತರಿಂದ ಬೆಟರ್‌ಮೆಂಟ್ ಲೆವಿ ವಸೂಲು ಮಾಡುವುದಕ್ಕೆ ನೋಟಿಸ್ ಕೊಟ್ಟಿದ್ದಾರೆ. ಇಂತಹ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈ ಸರ್ಕಾರ ತಯಾರು ಇಲ್ಲ. ಈ ಗೋಪಿನಾಥ ದುರಂತದಲ್ಲಿ ಅನೇಕ ನಿರಪರಾಧಿ ಹಸುಗೂಸುಗಳು ಸತ್ತಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅಲ್ಲಿಗೆ ಭೇಟಿ ಕೊಟ್ಟು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ? ಅದರ ಬಗ್ಗೆ ಏನೂ ಕಾರ್ಯಕ್ರಮ ಇಲ್ಲ. ಇಂತಹ ನೂರಾರು ಕೇಸುಗಳಲ್ಲಿ ಅಪರಾಧ ಪರಂಪರೆ ನಡೆದುಕೊಂಡು ಬಂದಿದ್ದರೂ ಈ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಆದ್ದರಿಂದ ಇದು ಅದಕ್ಷ ಸರ್ಕಾರ ಇರಬೇಕು ಇಲ್ಲವೇ ಬೇಜವಾಬ್ದಾರಿ ಸರ್ಕಾರ ಇರಬೇಕು ಈ ಎರಡರಲ್ಲಿ ಯಾವುದಾದರೂ ಒಂದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಈ ನಾಗಸಮುದ್ರ ಘಟನೆಯನ್ನು ನ್ಯಾಯಾಂಗ ವಿಚಾರಣೆಗೆ ಒಳಗು ಮಾಡಿದರೆ ಆ ನ್ಯಾಯಾಂಗ ವಿಚಾರಣೆ ಸೂಕ್ತ ರೀತಿಯಲ್ಲಿ ಮುಗಿದು ಸತ್ಯಾಂಶ ಹೊರಬರುವುದರೊಳಗೆ ಯಾರು ಇರುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸಬೇಕಾಗಿದ್ದರೆ ಇವತ್ತು ಈ ಮಂತ್ರಿಮಂಡಲ ರಾಜೀನಾಮೆಯನ್ನು ಕೊಡಬೇಕು. ಅವರು ರಾಜೀನಾಮೆಯನ್ನು ಕೊಟ್ಟು ಆ ಜನರ ಮುಂದೆ ಹೋಗಿ ಕ್ಷಮಾಪಣೆಯನ್ನು ಕೇಳಬೇಕು. ನಿರಂತರವಾಗಿ ಅಪರಾಧಗಳನ್ನು ಮಾಡಿಕೊಂಡು ಬಂದಿರತಕ್ಕಂಥ ಈ ಸರ್ಕಾರ ಅಧಿಕಾರದಲ್ಲಿ ಉಳಿಯುವುದಕ್ಕೆ ಯಾವ ನೈತಿಕ ಹಕ್ಕೂ ಸಹ ಇಲ್ಲ. ರೈತರ ರಕ್ತದ ಮೇಲೆ ಬದುಕುವುದಕ್ಕೆ ಪ್ರಯತ್ನ ಮಾಡಿರತಕ್ಕಂಥ ಈ ಸರ್ಕಾರಕ್ಕೆ ಘನತೆ-ಗೌರವಗಳಿದ್ದರೆ, ಮನುಷ್ಯತ್ವ ಇದ್ದರೆ, ಮಾನವೀಯ ಹೃದಯವಿದ್ದರೆ ಈ ಒಂದು ಘಟನೆಯಲ್ಲಿ ಅಪರಾಧಿಗಳಾಗಿ ಯಾರಿದ್ದಾರೆ ಅವರ ಮೇಲೆ ತೀವ್ರ ಕ್ರಮವನ್ನು ಕೈಗೊಳ್ಳಲಿ. ಈ ಸರ್ಕಾರಕ್ಕೆ ಅಪರಾಧಿಗಳ ಮೇಲೆ ಕ್ರಮ ಕೈಕೊಳ್ಳತಕ್ಕಂಥ ಗಂಡೆದೆಗಾರಿಕೆ ಇರುವುದಾದರೆ ಕೂಡಲೇ ಅವರ ಮೇಲೆ ತ್ವರಿತ ಕ್ರಮವನ್ನು ತೆಗೆದುಕೊಳ್ಳಲಿ. ಈ ಘಟನೆಯಲ್ಲಿ ನಿರಪರಾಧಿಗಳು ಪೊಲೀಸ್ ಸ್ಟೇಷನ್‌ನಲ್ಲಿ ಸತ್ತಿದ್ದಾರೆ. ಈ ಬಗ್ಗೆ ವರದಿಗಳು ಬಂದಿವೆ. ಇಂತಹ ಅನೇಕ ಘಟನೆಗಳಲ್ಲಿ ಈ ಸರ್ಕಾರ ದಕ್ಷ ಪೋಲೀಸ್ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದೆ. ಅವರಿಗೆ ಬೇಕಾದವರಿಗೆ ಪ್ರಮೋಷನ್ ಕೊಟ್ಟು ಅಂತಹ ಸ್ಥಳಗಳಿಗೆ ಹಾಕಿದೆ. ಅಪರಾಧಿಗಳ ಬಗ್ಗೆ ಏನೂ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಅದಕ್ಷ ಸರ್ಕಾರ ಹಾಗೂ ಜವಾಬ್ದಾರಿ ಹೀನವಾದ ಸರ್ಕಾರ ಕೂಡಲೇ ರಾಜೀನಾಮೆಯನ್ನು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ತಾಯಿ ಭುವನೇಶ್ವರಿಯು ಈ ಸರ್ಕಾರಕ್ಕೆ ಕೂಡಲೇ ರಾಜೀನಾಮೆಯನ್ನು ಕೊಡತಕ್ಕಂಥ ಸದ್ಬುದ್ಧಿಯನ್ನು ಕೊಡಲಿ ಎಂದು ಪ್ರಾರ್ಥಿಸಿಕೊಂಡು ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಜಿ. ಬಸವಣ್ಣಪ್ಪ (ಹೊಳೇಹೊನ್ನೂರು). —ಸನ್ಮಾನ್ಯ ಅಧ್ಯಕ್ಷರೇ, ಈ ನಾಗಸಮುದ್ರ ಘಟನೆಯಲ್ಲಿ ಪೋಲೀಸ್ ಗೋಲೀಬಾರ್ ಆಗಿ ಅದರಿಂದ ಆದಂತಹ ೩ ಜನರ ಸಾವಿನ ಹಿನ್ನಲೆಯಲ್ಲಿ ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವಾಗ ನನ್ನ ಮನಸ್ಸಿಗೆ ಬಹಳ ನೋವು ಹಾಗೂ ಸಂಕಟ ಉಂಟಾಗುತ್ತಿದೆ. ಈ ಒಂದು ಘಟನೆ ಏನು ನಡೆದಿದೆ ಇದು ನನ್ನ ಕ್ಷೇತ್ರದಲ್ಲಿ ನಡೆದಿದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಅಲ್ಲಿ ಪ್ರವಾಸ ಕೈಗೊಂಡಾಗ ಅಲ್ಲಿ ರೈತ ಮತ್ತು ರೈತ ಕಾರ್ಮಿಕರ ಒಂದು ಸಮ್ಮೇಳನವನ್ನು ಇಟ್ಟುಕೊಂಡರು. ಅಲ್ಲಿ ಆ ಒಂದು ರೈತ ಮತ್ತು ರೈತ ಕಾರ್ಮಿಕರ ಸಮ್ಮೇಳನವನ್ನು ಕರೆಯಬೇಕಾದರೆ ಅಥವಾ ಇನ್ಯಾವುದೇ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕಾದರೆ ಆ ಕ್ಷೇತ್ರದ ಶಾಸಕನಾದ ನನ್ನನ್ನು ಕರೆದು ವಿಚಾರ ಮಾಡಬೇಕಾಗಿತ್ತು. 'ಈ ರೀತಿ ಸಮ್ಮೇಳನವನ್ನು ಕರೆಯುತ್ತೇವೆ, ನಿಮ್ಮ ಅಭಿಪ್ರಾಯ ಏನು' ಎಂದು ಕೇಳದೇ ನನ್ನ ಜೊತೆಯಲ್ಲಿ ಆ ಬಗ್ಗೆ ವಿಚಾರ ಮಾಡದೇ ನನ್ನನ್ನು ಕಡೆಗಣಿಸಿ ಸಮ್ಮೇಳನವನ್ನು ಕರೆದು ಇಂತಹ ಒಂದು ಅನಾಹುತಕ್ಕೆ ಕಾರಣರಾಗಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಈ ಘಟನೆಯ ಹಿನ್ನಲೆಯನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಈ ಶಿವಮೊಗ್ಗ ಜಿಲ್ಲೆಯಲ್ಲಿ ರೈತ ಚಳುವಳಿ ಯಾವ ರೂಪದಲ್ಲಿ ಇದೆ ಎಂಬುದನ್ನು ಪ್ರಸ್ತಾಪ ಮಾಡುವುದು ಆವಶ್ಯಕವೆಂದು ನಾನು ಭಾವಿಸಿಕೊಂಡಿದ್ದೇನೆ. ರೈತರ ಸಮಸ್ಯೆಗಳ ಹಿನ್ನಲೆಯಲ್ಲಿ ರೈತರ

ಸಂಘಟನೆಯಾಯಿತು. ಈ ರೈತರ ಸಂಘಟನೆಯನ್ನು ಈ ಸಭೆಯ ಅನೇಕ ಜನ ಸದಸ್ಯರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರು ಮಂತ್ರಿಮಂಡಲದ ಸದಸ್ಯರು ಹಾಗೂ ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ಎಲ್ಲಾ ರಂಗದಲ್ಲೂ ಸಂಘಟನೆ ಇದೆ. ಈ ರೈತರಲ್ಲಿ ಇಲ್ಲಿಯವರಿಗೆ ಸಂಘಟನೆ ಇರಲಿಲ್ಲ. ಈಗ ರೈತರ ಸಂಘಟನೆಯಾಗಿದೆ – ಇದನ್ನು ನಾನು ಸ್ವಾಗತ ಮಾಡುತ್ತೇನೆ ಎಂದು ಸ್ವತಃ ಮಾನ್ಯ ಮುಖ್ಯಮಂತ್ರಿಯವರೇ ಹೇಳಿ ಅದನ್ನು ಸ್ವಾಗತ ಮಾಡಿದ್ದಾರೆ. ಆ ಸಂದರ್ಭದಲ್ಲೇ ಮಾನ್ಯ ಮುಖ್ಯಮಂತ್ರಿಯವರು ರೈತರ ಬಗ್ಗೆ ಅನೇಕ ರಿಯಾಯಿತಿಗಳನ್ನು ತೋರಿಸುವುದಾಗಿ ಘೋಷಣೆ ಮಾಡಿದರು. ಈ ಬಗ್ಗೆ ಶ್ರೀ ಬಂಗಾರಪ್ಪ ಕಮಿಟಿಯನ್ನು ಮತ್ತು ಆದಾದ ಮೇಲೆ ಶ್ರೀ ಬೊಮ್ಮಾಯಿಯವರ ಕಮಿಟಿಯನ್ನು ಮಾಡಿದರು. ಅಲ್ಲದೇ ರೈತರಿಗೆ ರಿಯಾಯಿತಿ ತೋರಿಸುವ ಬಗ್ಗೆ ಒಂದು ಶ್ವೇತಪತ್ರವನ್ನೂ ಕೂಡ ಹೊರಡಿಸಿದರು. ಇದೆಲ್ಲಾ ಏನು ತೋರಿಸುತ್ತದೆ ಎಂದರೆ ಪ್ರಸ್ತುತ ಸರ್ಕಾರಕ್ಕೆ ರೈತರ ಬಗ್ಗೆ ಇರತಕ್ಕಂಥ ಧೋರಣೆ ಹಾಗೂ ಅನುಕಂಪವನ್ನು ತೋರಿಸುತ್ತದೆ. ಸರ್ಕಾರದವರು ರೈತರಿಗೆ ಒಳ್ಳೆಯ ಸಪೋರ್ಟ್ ಪ್ರೈಸ್ ಕೊಟ್ಟಿರತಕ್ಕಂಥದ್ದನ್ನು ಮತ್ತು ಬೆಟರ್‌ಮೆಂಟ್ ಲೆವಿ ರದ್ದು ಮಾಡಿದ್ದನ್ನು ಶಿವಮೊಗ್ಗ ಜಿಲ್ಲೆಯ ರೈತರು ಸ್ವಾಗತ ಮಾಡಿದರು. ಮತ್ತು ಶಿವಮೊಗ್ಗ ಜಿಲ್ಲೆಯ ರೈತ ಪ್ರತಿನಿಧಿಗಳು ಮಂತ್ರಿಮಂಡಲದ ಸದಸ್ಯರ ಜೊತೆಗೆ ಚರ್ಚೆ ನಡೆಸಿ ಮಂತ್ರಿಮಂಡಲದ ನಿರ್ಧಾರವನ್ನು ಸ್ವಾಗತಿಸಿ ಹೋದರು. ನಮ್ಮ ಜಿಲ್ಲೆಯ ಮಂತ್ರಿವರ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಒಂದು ಸಂದರ್ಭವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ವ್ಯವಹಾರ ಮಾಡಬಹುದಾಗಿತ್ತು. ಸರ್ಕಾರ ರೈತರ ಅನೇಕ ಸಮಸ್ಯೆಗಳು ಏನಿದ್ದುವು ಅವರಲ್ಲಿ ಕೆಲವು ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಇನ್ನೂ ಕೆಲವು ಸಮಸ್ಯೆಗಳು ಹಾಗೆಯೇ ಉಳಿದಿವೆ. ಯಾವ ಸರ್ಕಾರವೇ ಆಗಲೀ ನೂರಾರು ವರ್ಷಗಳಿಂದ ಬಂದಿರತಕ್ಕಂಥ ಸಮಸ್ಯೆಗಳನ್ನು ಒಮ್ಮೆಲೇ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ ಈ ಸರ್ಕಾರ ಬಗೆಹರಿಯದೇ ಉಳಿದಿರತಕ್ಕಂಥ ರೈತರ ಸಮಸ್ಯೆಗಳನ್ನು ಒಂದೊಂದಾಗಿ ಬಗೆಹರಿಸುತ್ತೇವೆ ಎಂದು ಕೂಡ ಹೇಳಿದ್ದಾರೆ. ಇದು ರೈತರ ಸಮುದಾಯದ ಅಭಿಪ್ರಾಯವಾಗಿತ್ತು. ಕಾಗೋಡು ತಿಮ್ಮಪ್ಪನವರು ಸರಿಯಾದ ರೀತಿಯಲ್ಲಿ ವ್ಯವಹರಿಸಿದ್ದರೆ ಈ ಸಮಸ್ಯೆಗಳು ಉದ್ಭವಿಸುತ್ತಾ ಇರಲಿಲ್ಲ. ಇಂತಹ ಒಂದು ಸಂದರ್ಭವನ್ನು ಶ್ರೀ ಕಾಗೋಡು ತಿಮ್ಮಪ್ಪನವರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ರೈತ ಸಮುದಾಯವನ್ನು ಸರ್ಕಾರದೊಡನೆ ತೆಗೆದುಕೊಂಡು ಹೋಗಬಹುದಾಗಿತ್ತು. (He has failed to approch the various Concessions extended to the farmers by the Government and miserably failed to capitalise the work done by the Government). ಅದು ಬಿಟ್ಟು ರೈತರ ಸಂಘಟನೆಯನ್ನು ಮುರಿಯತಕ್ಕಂಥ ಪ್ರಯತ್ನ ಅವರಿಂದ ಅನೂಚಾನವಾಗಿ ನಡೆಯಿತು. ನನ್ನ ಹೊಳೇಹೊನ್ನೂರು ಕ್ಷೇತ್ರದಲ್ಲಿ ಸುಮಾರು ೪೦ ಸಾವಿರ ಎಕರೆ ನೀರಾವರಿ ಜಮೀನು ಇದೆ. ರೈತರ ಸಂಘಟನೆ ಕೇಂದ್ರೀಕೃತವಾದದ್ದು ನನ್ನ ಈ ಕ್ಷೇತ್ರದಲ್ಲಿ. ಅಲ್ಲಿಯ ರೈತರ ಸಂಕಟವನ್ನು, ನೋವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅವರ ಬೇಡಿಕೆ ಏನಿದೆ ಅದು ನಿಜವಾದ ಬೇಡಿಕೆಯಾಗಿದೆ ಅವರು ಎಷ್ಟು ಹಣವನ್ನು ಖರ್ಚು ಮಾಡಿ ಬೆಳೆ ಬೆಳೆದರೂ ಸಹ ಆ ಉತ್ಪತ್ತಿಯಿಂದ ಅವರು ಖರ್ಚು ಮಾಡಿದಷ್ಟು ಹಣ ಕೂಡ ಬರುತ್ತಾ ಇಲ್ಲ ಇದರ ಬಗ್ಗೆ ನಾನು ಅಂಕಿಅಂಶ ಕೊಟ್ಟು ಮಾತನಾಡುವಂತಹ ಅವಶ್ಯಕತೆ ಇಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಸರ್ಕಾರದ ವಿರುದ್ಧ ನಿಲ್ಲಬೇಕು, ಈ ಸರ್ಕಾರವನ್ನು ಉರುಳಿಸಬೇಕು ಎನ್ನುವ ಧೋರಣೆಯಿಂದ ನಾನು ಹೋಗಲಿಲ್ಲ. ಆದರೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ರೈತ ವಿರೋಧಿ ಚಟುವಟಿಕೆಯಿಂದ ಶಿವಮೊಗ್ಗ ಜಿಲ್ಲೆಯ ರೈತರು ತೀವ್ರ ಚಳವಳಿ ಮಾಡುವಂತಹ ಪರಿಸ್ಥಿತಿ ಉಂಟಾಯಿತು. The agitation was called off at the intervention of Sri Venkateshan, Deputy Chief Secretary and not at the intervention of Sri Kagodu Thimmappa. It has irritated Kagodu Thimmappa very much, ರೈತರು ಸರ್ಕಾರದ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದ ಮೇಲೆ ಚಳವಳಿಯನ್ನು ವಾಪಸ್ಸು ತೆಗೆದುಕೊಂಡರು. 'ನಾನು ಆ ಜಿಲ್ಲೆಯ ಮಂತ್ರಿ ನನ್ನ ಪ್ರತಿಷ್ಠೆಗೆ ಧಕ್ಕೆಯಾಯಿತು. ನನ್ನ ವ್ಯಕ್ತಿತ್ವಕ್ಕೆ ಧಕ್ಕೆಯಾಯಿತು' ಎಂದು ತಿಳಿದುಕೊಂಡು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಸ್ವಾರ್ಥಪರ ರಾಜಕೀಯವನ್ನು ಮಾಡಿದ್ದರಿಂದ ಈಗ ನಮ್ಮ ಜಿಲ್ಲೆಯ ಅದರಲ್ಲೂ ನನ್ನ ಕ್ಷೇತ್ರದ ೩ ಜನ ನಿರಪರಾಧಿ ರೈತರು ಗುಂಡಿಗೆ ಬಲಿಯಾದರು. ಇದಕ್ಕೆ ಕಾರಣರು–

ಯಾರು ? ಇದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಈ ಘಟನೆಯಾದ ಮೇಲೆ ನನಗೆ ಫೋನ್ ಮೂಲಕ ಈ ವಿಷಯ ತಿಳಿಯಿತು. ಆಗ ನಾನು ನನ್ನ ಮಕ್ಕಳನ್ನು ಸ್ಕೂಲಿಗೆ ಸೇರಿಸುವುದಕ್ಕೆ ಕರೆದು ಕೊಂಡು ಹೋಗಬೇಕಾದಂಥ ಪರಿಸ್ಥಿತಿಯಲ್ಲಿದೆ. ಆ ಕ್ಷೇತ್ರದ ಶಾಸಕನಾದ ನನ್ನನ್ನು ವಿಚಾರ ಮಾಡದೇ ಡೆಮಾಕ್ರಟಿಕ್ ನಾರ್ಮ್ಸ್‌ನ್ನು ಮೂಲೆಗೊತ್ತಿ ಈ ಮಂತ್ರಿಯವರು ವ್ಯವಹಾರ ಮಾಡಿದ್ದರಿಂದ ಇಂತಹ ಒಂದು ಪರಿಸ್ಥಿತಿ ಉಂಟಾಗಿದೆ. ನಾನು ಅಲ್ಲಿಗೆ ಹೋಗಿ ವಿಚಾರ ಮಾಡಿದೆ. ಪರಿಸ್ಥಿತಿ ಬಹಳ ಗಂಭೀರವಾಗಿತ್ತು. ದುಃಖತಪ್ತ ಮನೆಗಳಿಗೆ ಹೋಗಿ ಅವರ ಸಂಕಟದಲ್ಲಿ ನಾನು ಭಾಗಿಯಾದೆ. ನಡೆದ ಘಟನೆಯನ್ನು ನೆನೆದು ನನ್ನ ಸಹನೆ ಮೀರಿತು. ಅಲ್ಲಿಗೆ ಪತ್ರಿಕಾ ಪ್ರತಿನಿಧಿಗಳು ಬಂದಿದ್ದರು, ಕಾರ್ಯಕರ್ತರೂ ಬಂದಿದ್ದರು. ನಾನು ಈ ಬಗ್ಗೆ ಒಂದು ಪ್ರೆಸ್ ಸ್ಟೇಟ್‌ಮೆಂಟ್ ಸಹ ಕೊಟ್ಟೆ. ಪ್ರತಿಯೊಂದು ವಿಷಯವನ್ನೂ ಕೂಲಂಕಷವಾಗಿ ವಿಚಾರ ಮಾಡಿ ನಾನು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಅದಕ್ಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಅದಕ್ಕೂ ಸಹ ನಾನು ಉತ್ತರ ಕೊಟ್ಟಿದ್ದೇನೆ. ಅದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಬಯಸುವುದಿಲ್ಲ.

ದಿನಾಂಕ ೧೨ನೇ ಮೇ ೧೯೮೨ ರಂದು ವರ್ಕರ್ಸ್ ಮೀಟಿಂಗ್ ಕರೆದು ಆ ವರ್ಕರ್ಸ್ ಮೀಟಿಂಗ್‌ಗೆ ಭದ್ರಾವತಿ ತಾಲ್ಲೂಕಿನ ಶಾಸಕನಾದ ನನ್ನನ್ನು ಕರೆಯಬೇಕಾಗಿತ್ತು. ಆದರೆ ನನ್ನನ್ನು ಕರೆಯಲಿಲ್ಲ. ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರನ್ನು ಹಾಗೂ ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನು ಸಹ ಕರೆಯಲಿಲ್ಲ. ಒಬ್ಬ ಮಿಲ್ ಮಾಲೀಕರಾದ ಶ್ರೀಮಾನ್ ಭೀಮಣ್ಣ ಎಂಬುವರ ಮಿಲ್‌ನಲ್ಲಿ ಮೀಟಿಂಗ್ ಮಾಡಿದ್ದಾರೆ. ಆ ಮೀಟಿಂಗ್‌ನಲ್ಲಿ ಈ ಚಳುವಳಿಯ ವಿಷಯವನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ರೈತರ ರೈತ ಕಾರ್ಮಿಕರ ಚಳುವಳಿಯನ್ನು ಮುರಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ರೈತ ಮತ್ತು ರೈತ ಕಾರ್ಮಿಕರ ಸಮ್ಮೇಳನವನ್ನು ಈಗ ಕರೆಯುವುದು ಸರಿಯಲ್ಲ, ವಾತಾವರಣ ಸರಿಯಿಲ್ಲ ಎಂದು ಕೆಲವರು ಹೇಳಿದಾಗ್ಯೂ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಸಮ್ಮೇಳನ ನಡೆಯಲೇಬೇಕು ನಾನು ಬರುತ್ತೇನೆ, ಅದಕ್ಕೆ ಜವಾಬ್ದಾರಿ ನನ್ನದು ಎಂದು ಹೇಳಿದ್ದಾರೆ. Therefore I directly blame Sri Kagodu Thimmappa, who is responsible for the death of three innocent farmers.—

ನಾವು ಇಲ್ಲಿಗೆ ಬರಬೇಕಾದರೆ ಪ್ರಜೆಗಳಿಂದ ಮತವನ್ನು ಪಡೆದು ಬಂದಿದ್ದೇವೆ. ಇಲ್ಲಿರತಕ್ಕಂತಹ ಎಲ್ಲಾ ಶಾಸಕರು ಕೂಡ ನೂರಕ್ಕೆ ಎಪ್ಪತ್ತೈದು ಭಾಗದಷ್ಟು ರೈತರ ಮಕ್ಕಳೆ. ಆ ರೈತರ ಕಷ್ಟ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅದನ್ನು ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ ? ರೈತರನ್ನು ನಾವು ಆಂದೋಲನಕ್ಕೆ ಇಳಿಸುವುದು ಸರಿಯಲ್ಲ ಹಾಗೂ ಅವರನ್ನು ಬ್ಲೇಮ್ ಮಾಡುವುದು ಸರಿಯಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಘಟನೆಯ ಬಗ್ಗೆ ಸವಿಸ್ತಾರವಾಗಿ ವಿವರಿಸಿದ್ದಾರೆ. ಹೆಚ್ಚಿನ ವಿವರಣೆಯನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಒಂದು ರೈತರ ಚಳುವಳಿಯಲ್ಲಿ ಪೋಲೀಸಿನವರ ಗೋಳಿಬಾರ್‌ಗೆ ತುತ್ತಾಗಿರತಕ್ಕಂತಹ ಕುಟುಂಬದವರಿಗೆ ಕೊನೆಯ ಪಕ್ಷ ೧೦,೦೦೦ ರೂಪಾಯಿಗಳನ್ನಾದರೂ ಸರ್ಕಾರ ಪರಿಹಾರ ಕೊಡಬೇಕು. ಮತ್ತು I demand for the impartial enquiry. Once again, I appeal to the Chief Minister that Sri Kagodu Thimmappa should be dropped from the Ministry and then only the interest of the party, interest of the Government and the interest of the farmers will be safeguarded. ಇಷ್ಟು ಹೇಳಿ ನಾನು ನಾಲ್ಕು ಮಾತುಗಳನ್ನು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಠಲ್). — ಸನ್ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಾದ ಶ್ರೀಮಾನ್ ಪಟೇಲ್‌ರವರು ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ, ಆದರೆ ನಾನು ಹೋಗಿ ನೋಡಿಕೊಂಡು ಬರಲಿಲ್ಲ. ಅದೇ ಜಿಲ್ಲೆಯ ಒಬ್ಬ ಶಾಸಕರು ಈ ವಿಷಯದ ಬಗ್ಗೆ ಮಾತನಾಡುವಾಗ ವಿಷಯ ಏನು ಎಂಬುದು ಅರ್ಥವಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಬಸವಣ್ಣಪ್ಪನವರು ಆಳುವ ಪಕ್ಷದ ಶಾಸಕರು, ಆದರೂ ಕೂಡ ಅವರು ರೈತರ ಕಷ್ಟವನ್ನು ಅರಿತುಕೊಂಡು ಮಾತನಾಡಿದಾಗ ನಿಜವಾಗಿಯೂ ಕೂಡ ಸರ್ಕಾರದವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಇದನ್ನು ಸರ್ಕಾರದವರು ಅರ್ಥ ಮಾಡಿಕೊಂಡಿದ್ದಾರೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ನರಗುಂದದಲ್ಲಿ ಪೋಲೀಸಿನವರು ಗೋಲಿಬಾರ್ ಮಾಡಿದರು. ಅದರ ಬಗ್ಗೆ ಈ ಮನೆಯಲಿ ನಾವು

ಚರ್ಚೆ ಮಾಡಿದ್ದೇವೆ. ರೈತರು ತಮ್ಮ ಮೂಲ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ಆ ಮೂಲ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯ ಮಾಡುತ್ತಾರೆ, ಸರ್ಕಾರದವರು ಅವರ ಬೇಡಿಕೆಗಳನ್ನು ಈಡೇರಿಸದಿದ್ದ ಪಕ್ಷದಲ್ಲಿ ಇಂತಹ ಪರಿಸ್ಥಿತಿ ಉಂಟಾಗುತ್ತದೆ. ರೈತರು ಯಾವುದಾದರೂ ಚಳುವಳಿಯನ್ನು ಮಾಡಿದಾಗ ಅಲ್ಲಿರತಕ್ಕಂತಹ ಅಧಿಕಾರಿ ವರ್ಗದವರು ಯಾವ ರೀತಿಯಲ್ಲಿ ವರ್ತನೆ ಮಾಡುತ್ತಾರೆ ಎಂಬುದನ್ನು ನಮ್ಮ ಮಾನ್ಯ ಮಿತ್ರರು ಕೆಲವರು ಹೇಳಿದ್ದಾರೆ. ಪೋಲೀಸಿನವರು ಇಂತಹ ಚಳುವಳಿಯಾದಾಗ ಯಾವ ರೀತಿಯಲ್ಲಿ ವರ್ತಿಸಬೇಕು ಎಂಬುದನ್ನು ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ಆ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳದಿದ್ದರೆ ಹೇಗೆ? ಆದ್ದರಿಂದ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ರೈತರು ತಮ್ಮ ಕಷ್ಟಗಳನ್ನು ಹಾಗೂ ತಮ್ಮ ಬೇಡಿಕೆಗಳನ್ನು ನೇರವಾಗಿ ಸರ್ಕಾರದ ಮುಂದೆ ಇಡಲು ಪ್ರಯತ್ನ ಮಾಡಿದ್ದಾರೆ. ಆದರೆ ಕೆಲವರು ಇದರಲ್ಲಿ ರಾಜಕೀಯವನ್ನು ಮಾಡಿದ್ದರಿಂದ ರೈತರ ಮೇಲೆ ಗೋಲಿಬಾರ್ ಮಾಡುವಂತಹ ಪರಿಸ್ಥಿತಿಯನ್ನು ಉಂಟು ಮಾಡಿದರು. ಹಿಂದೆ ರೈತರು ಒಂದು ಸಾರಿ ಚಳುವಳಿಯನ್ನು ಮಾಡಿದಾಗ ಅವರಿಗೆ ನೀವು ಬೆಂಬಲ ಕೊಟ್ಟು ರೈತರ ಜಾಥಾ ನರಗುಂದದಿಂದ ಹಿಡಿದು ಬೆಂಗಳೂರಿನ ವರೆವಿಗೂ ಸುಮಾರು ೨-೩ ಲಕ್ಷ ಜನರು ವಿಧಾನಸೌಧದ ಮುಂದೆ ಬಂದು ಸೇರಿದಾಗ ಈ ರೈತರಿಗೆ ಎಲ್ಲಾ ಕಾರ್ಮಿಕರು, ಎಲ್ಲಾ ನಾಗರೀಕರು ಹಾಗೂ ನ್ಯಾಯವಾದಿಗಳು, ಬುದ್ಧಿಜೀವಿಗಳು ಬೆಂಬಲವನ್ನು ವ್ಯಕ್ತಪಡಿಸಿದರು. ನಾವು ರೈತರ ಸಂಘಪಟನೆಯನ್ನು ಉಂಟು ಮಾಡಿದ ಉದ್ದೇಶವಾದರೂ ಇಷ್ಟೆ. ರೈತರ ಕಷ್ಟಗಳು ಏನು ಎಂಬುದನ್ನು ಈ ಸರ್ಕಾರ ಮನಗೊಳ್ಳಬೇಕು ರೈತರ ಕಷ್ಟಗಳು ಏನು ಎಂಬುದನ್ನು ತಿಳಿದುಕೊಳ್ಳಬೇಕು ಎಂದು. ಆದರೆ ಆ ಸಂದರ್ಭದಲ್ಲಿ ಸರ್ಕಾರದವರು ಅಲ್ಲಿ ನೆರೆದಿರುವಂತಹ ರೈತರು ಬಾಡಿಗೆ ಜನ ಎಂದು ಕರೆದರು, ಇದನ್ನು ರೈತರು ತಿಳಿದುಕೊಂಡು ರೊಚ್ಚಿಗೇಳುವ ಪರಿಸ್ಥಿತಿಯನ್ನು ಈ ಸರ್ಕಾರದವರು ಉಂಟು ಮಾಡಿದರು. ನಾನು ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಈ ಸರ್ಕಾರದವರು ರೈತರ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದೇವೆಂದು ದೀರ್ಘವಾಗಿ ಹೇಳಿಕೊಳ್ಳುತ್ತಿದ್ದಾರೆ. ಪದೇ ಪದೇ ಈ ಸದನದಲ್ಲಿ ರೈತರಿಗೆ ನಾವು ಸಹಾಯ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಸಾರ್ವಜನಿಕರಿಗೆ ಈ ಸರ್ಕಾರದವರು ಬೇಕಾದಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ ಆದರೆ ಕೊಟ್ಟಂತಹ ಆಶ್ವಾಸನೆಗಳನ್ನು ಎಷ್ಟರ ಮಟ್ಟಿಗೆ ಈಡೇರಿಸಿದ್ದಾರೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇವರ್ ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತಿದ್ದಾರೆ ನನ್ನ ಒಂದು ಜಿಲ್ಲೆಯನ್ನು ತೆಗೆದುಕೊಂಡು ನಾನು ಹೇಳುವುದಾದರೆ ಎಲ್ಲಾ ರೈತರು ಶ್ರೀಮಂತರು ಎಂದು ಎಷ್ಟೇ ವಾದ ಮಾಡಿದರೂ ಕೂಡ ಇದನ್ನು ಯಾರೂ ಒಪ್ಪುವುದಿಲ್ಲ ನನ್ನ ಮಾನ್ಯ ಅರ್ಥ ಸಚಿವರು ಕೂಡ ಇದನ್ನು ಒಪ್ಪಿಕೊಳ್ಳುವುದಿಲ್ಲ. ರೈತರಿಗೆ ಸಹಕಾರ ಸಂಘಗಳ ಮುಖಾಂತರ ಸಾಲವನ್ನು ಕೊಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ರೈತನಿಗೆ ದನಕರುಗಳನ್ನು ತೆಗೆದುಕೊಳ್ಳುವುದಕ್ಕೆ ಹಾಗೂ ಇನ್ನೂ ಇತರೇ ಸಾಲಗಳನ್ನು ಕೊಟ್ಟಿದ್ದಾರೆ, ಇವರು ಕೊಟ್ಟಿರತಕ್ಕಂತಹ ಸಾಲದಲ್ಲಿ ಯಾವ ಒಬ್ಬ ರೈತನಿಗಾದರೂ ರಿಯಾಯಿತಿ ಕೊಟ್ಟಿದ್ದಾರೆಯೇ ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು ಆ ರೀತಿ ನೋಡುವುದಕ್ಕೆ ಹೋದರೆ ಯಾರಿಗೂ ಸಿಗುವುದಿಲ್ಲ. ಅದೇ ರೀತಿಯಲ್ಲಿ ತುಮಕೂರು ಇನ್ನೂ ಹಲವಾರು ಕಡೆಗಳಲ್ಲಿ ಯಾವ ಒಬ್ಬ ರೈತನಿಗೂ ಕೂಡ ಸಾಲದ ರಿಯಾಯಿತಿ ಸಿಕ್ಕಿಲ್ಲ. ಕೇವಲ ಕೆಲವರಿಗೆ ಮಾತ್ರ ಈ ಒಂದು ರಿಯಾಯಿತಿ ಸಿಕ್ಕಿದೆ ಇದಕ್ಕೆ ಕಾರಣವೇನು? ಎಷ್ಟು ಜನರನ್ನು ಸರ್ಕಾರದವರು ಸಾಲದ ಋಣಮುಕ್ತರನ್ನಾಗಿ ಮಾಡಿದ್ದಾರೆ? ಸರ್ಕಾರದಿಂದ ಸಿಗುವಂತಹ ನ್ಯಾಯವಾದ ಸವಲತ್ತುಗಳನ್ನು ಯಾರಿಗೆ ಕೊಟ್ಟಿದ್ದಾರೆ? ರೈತರು ಇವತ್ತು ಆಹಾರ ಪದಾರ್ಥಗಳನ್ನು ಬೆಳೆಯಬೇಕಾದರೂ ಸಹ ಅವರಿಗೆ ಹಣದ ಕೊರತೆ ಇರುತ್ತದೆ. ಇದನ್ನೆಲ್ಲಾ ಸರ್ಕಾರದವರು ಯೋಚನೆ ಮಾಡಬೇಕು. ನಮ್ಮ ದೇಶದಲ್ಲಿರುವಂತಹ Workers Economy Survey Report ತಮಗೆ ಬಂದಿರಬಹುದು ಇದರಿಂದ ಅವರಿಗ ಸಿಕ್ಕಿರುವಂತಹ ಪ್ರತಿಫಲ ಏನು? ಇವತ್ತು ರೈತರು ತಾನು ಉತ್ಪಾದನೆ ಮಾಡಿದಂತಹ ಪದಾರ್ಥಗಳಿಗೆ ಏನು ಬೆಲೆ ಸಿಗುತ್ತಿದೆ ಎಷ್ಟು ಲಾಭ ದೊರೆಯುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ರೈತರು ಇವತ್ತು ಹೇಳುತ್ತಿದ್ದಾರೆ ನಾವು ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದರೂ ಕೂಡ ಅದರಿಂದ ನಮಗೆ ಲಾಭ ಮಾತ್ರ ಬರುವುದಿಲ್ಲ ಇನ್ನೂ ನಷ್ಟವಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇವತ್ತು ನಾಗರೀಕರು ಸಕ್ಕರೆ ಕೊಳ್ಳಲು ಕಷ್ಟಪಡುವಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟಾಗಿದೆ. ಸರ್ಕಾರದವರು ನಿಗದಿ ಮಾಡಿರುವ ಪ್ರಕಾರ ಒಂದು ಕ್ವಿಂಟಾಲ್ ಸಕ್ಕರೆಯ ಬೆಲೆ ೧೫೦-೦೦ ರೂಪಾಯಿಗಳು. ಆದರೆ ಒಂದು ಕ್ವಿಂಟಾಲ್ ಸಕ್ಕರೆಯನ್ನು ೮೦ ರೂಪಾಯಿ

ಗಳಿಗೂ ಕೇಳುವವರಿಲ್ಲ. ಇದಕ್ಕೆ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೆ? ಬೀದರ್ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಅಲ್ಲಿನ ರೈತರು ಬೆಳೆದಂತಹ ಕಬ್ಬನ್ನು ಅಲ್ಲಿನ ಸಹಕಾರ ಸಂಘದವರೇ ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. ಸರ್ಕಾರ ನಿಗದಿ ಮಾಡಿದ ಬೆಲೆಗಿಂತ ಕಡಿಮೆ ದರದಲ್ಲಿ ಅವರು ಸುಮಾರು ೫೦–೬೦ ರೂಪಾಯಿಗಳಿಗೆ ತೆಗೆದುಕೊಂಡರೆ ರೈತನು ಹೇಗೆ ಬದುಕಬೇಕು? ಮತ್ತೆ ತಂಬಾಕು ಇನ್ನು ಇತರೆ ಪದಾರ್ಥಗಳನು ರೈತನು ಬೆಳೆಯುತ್ತಾನೆ ಅದಕ್ಕೆ ಸರಿಯಾದಂತಹ ಬೆಲೆಗಳು ಸಿಗುತ್ತಿಲ್ಲ. ಇದು ಇಡೀ ರಾಷ್ಟ್ರದ ಸಮಸ್ಯೆ ಆದ್ದರಿಂದ ಇದನ್ನು ಸರ್ಕಾರದವರು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ನೀರಾವರಿ ವಿಚಾರವಾಗಿ ಹೇಳುವುದಾದರೆ ಅಪ್ಪರ್ ಕೃಷ್ಣಾ ಹಾಗೂ ಘಟಪ್ರಭಾ, ಮಲಪ್ರಭಾ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸದೆ ರೈತರು ಕಣ್ಣಿನಲ್ಲಿ ನೀರನ್ನು ಸುರಿಸುತ್ತಿದ್ದಾರೆ. ಆದರೆ ರೈತರಿಗೆ ನೀರು ಮಾತ್ರ ಸಿಗುತ್ತಿಲ್ಲ. ರೈತರಿಂದ ಹಣವನ್ನು ಮಾತ್ರ ಸರ್ಕಾರದವರು ವಸೂಲು ಮಾಡುತ್ತಿದ್ದಾರೆ:

ಇದರ ಹಿಂದೆ ಇರುವಂಥ ಅತೃಪ್ತಿ, ರೈತರಲ್ಲಿ ಇರುವಂಥ ಅತೃಪ್ತಿ ಇವತ್ತು ಶಾಪವಾಗುವಂಥ ಪರಿಸ್ಥಿತಿ ಉಂಟಾಗಿದೆ. ಇದನ್ನು ಪರಿಹಾರ ಮಾಡುವುದಕ್ಕೆ ಕ್ರಮ ತೆಗೆದುಕೊಂಡರೆ ಆಗುತ್ತದೆ, ಆದರೆ ತೆಗೆದುಕೊಳ್ಳುವಂಥ ಇಚ್ಛೆ ಇವರಿಗಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗಿದೆ. ಮಾನ್ಯ ಬಸವಣ್ಣಪ್ಪನವರು ಏನು ಹೇಳಿದ್ದಾರೆ. ಅವರು ಆ ರೀತಿ ಹೇಳಿದ ಮೇಲಾದರೂ ಸರ್ಕಾರದವರು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೋಯಿಲಿ.— ಅವರಿಗೆ ವೈಯುಕ್ತಿಕವಾಗಿ ಸಮಸ್ಯೆ ಇದೆ.

ಶ್ರೀ ಬಿ. ವಿ. ಕಕ್ಕಿಲಾಯ.— ಇರಬಹುದು, ಮಾನ್ಯ ಬಸವಣ್ಣಪ್ಪನವರು ಬಹಳ ಜವಾಬ್ದಾರಿಯುತವಾಗಿ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಈ ಸದನದಲ್ಲಿ ಅವರೂ ಒಬ್ಬರು ಸದಸ್ಯರು, ಹಿಂದೆ ಮಂತ್ರಿಗಳಾಗಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅವರಿಗೆ ವೈಯುಕ್ತಿಕವಾದ ಸಮಸ್ಯೆಗಳಿವೆ, ಅದರಿಂದ ಹೇಳಿರಬಹುದು.

ಶ್ರೀ ಬಿ. ವಿ. ಕಕ್ಕಿಲಾಯ.— ಅವರು ಆ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂಥ ಸದಸ್ಯರು. ಈ ಸಭೆಯಲ್ಲಿ ಮಾತನಾಡಿದ್ದು ಅಕ್ಷರಶಃ ಸತ್ಯ ಎಂದು ನಾವು ತಿಳಿದುಕೊಳ್ಳುತ್ತೇವೆ. ಅವರು ಹೇಳಿದ ಮಾತುಗಳು ನಿಜ ಎನ್ನುವ ಆಧಾರದ ಮೇಲೆ ನಾವು ಹೋಗಬೇಕಾಗುತ್ತದೆ ಇಲ್ಲ ಎಂದು ಬೇರೆ ಯಾರಾದರೂ ರುಜುವಾತು ಮಾಡಿದರೆ ಅದು ಬೇರೆ. ಅವರು ಆ ಕ್ಷೇತ್ರದ ಸದಸ್ಯರು. ಅನೇಕ ವಿಚಾರಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಅವನ್ನು ನೋಡಿದರೆ ನಮ್ಮ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಅದು ಸಾಬೀತಾಗುತ್ತದೆ. ಈ ದುರ್ಘಟನೆ ನಡೆಯುತ್ತಾ ಇರಲಿಲ್ಲ, ಬೇಕು ಬೇಕು ಎಂದು ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಆ ಕ್ಷೇತ್ರದಲ್ಲಿ ತಮ್ಮ ಪ್ರಭಾವವನ್ನು ಬೀರಬೇಕು ಎಂದು ತಿಳಿದುಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ತಮ್ಮ ಅಧಿಕಾರವನ್ನು, ತಮ್ಮ ಪ್ರಭಾವವನ್ನು ಉಳಿಸಿಕೊಳ್ಳುವುದರ ಸಲುವಾಗಿ ಈ ದುರ್ಘಟನೆಯನ್ನು ಹುಟ್ಟು ಮಾಡಿದ್ದಾರೆ ಎನ್ನುವಂಥ ಬಹಿರಂಗವಾದ ಆರೋಪವನ್ನು ಸನ್ಮಾನ್ಯ ಸದಸ್ಯರು ಈ ಸದನದಲ್ಲಿ ಮಾಡಿದ್ದಾರೆ. ಇದರ ಮೇಲೆ ಸರ್ಕಾರದ ಜವಾಬ್ದಾರಿ ಬಹಳ ಗಂಭೀರವಾದುದು. ಏಕೆಂದರೆ ತಮ್ಮ ಪಕ್ಷಕ್ಕೆ ಸೇರಿದವರು ಈ ಆರೋಪವನ್ನು ಮಾಡಿದ್ದಾರೆ. ಅವರ ವೈಯುಕ್ತಿಕವಾದ ಸಮಸ್ಯೆಗಳು ನಮಗೂ ಸಂಬಂಧವಿಲ್ಲ. ಆದುದರಿಂದ ತಾವು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಇದಕ್ಕೆ ನ್ಯಾಯಾಂಗ ವಿಚಾರಣೆ ಆಗಬೇಕು ಮಾತ್ರವಲ್ಲ ನ್ಯಾಯಾಂಗ ವಿಚಾರಣೆಯಾಗುವಂಥ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿಯಾಗಿ ಇರಬಾರದು ಎಂದು ನಾನು ಹೇಳುತ್ತೇನೆ. ಮಂತ್ರಿಮಂಡಲವೇ ರಾಜಿನಾಮೆ ಕೊಡಬೇಕು ಎನ್ನುವಂಥ ವಾದವನ್ನು ಮಾನ್ಯ ಸ್ನೇಹಿತರು ಏನು ತಂದಿದ್ದಾರೆ, ಅದನ್ನು ಸ್ವಲ್ಪ ಸುಧಾರಿಸಿ ಅದಕ್ಷತೆ ಅಥವಾ ಬೇಜವಾಬ್ದಾರಿತನ ಇವೆರಡರಲ್ಲಿ ಯಾವುದಾದರೂ ಇದೆಯೆಂದು ಅಂದುಕೊಂಡು ಇಡೀ ಮಂತ್ರಿಮಂಡಲ ರಾಜಿನಾಮೆ ಕೊಡಬೇಕಾಗುತ್ತದೆ. ಇಲ್ಲದೇ ಹೋದರೆ ಈ ಸಂದರ್ಭದಲ್ಲಾದರೂ ಕೂಡ ಅವರನ್ನು ಕೈಬಿಟ್ಟು ಹೊರಗೆ ನಿಲ್ಲಿಸಿ, ನ್ಯಾಯಾಂಗ ವಿಚಾರಣೆ ನಡೆದು, ಅವರ ಮುಖೇನ ನಡೆದಿಲ್ಲ ತಪ್ಪಿತಸ್ಥರಲ್ಲ ಎಂದರೆ ಅವರು ಮತ್ತೆ ಬರಲಿ ಅವರನ್ನು ಗೌರವವಾಗಿ ಸದನಕ್ಕೆ ಸ್ವಾಗತ ಮಾಡೋಣ. ಹಿಂದುಮುಂದು

ನೋಡದೆ ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಬೇಕು ರೈತರ ಬೇಡಿಕೆಗಳ ಬಗ್ಗೆ ಮತ್ತು ಅಲ್ಲಿ ನಡೆದಂಥ ಘಟನೆ ಬಗ್ಗೆ, ಅದಕ್ಕೆ ಕಾರಣರಾದವರ ಬಗ್ಗೆ ಇವೆಲ್ಲದರ ಬಗ್ಗೆ ನ್ಯಾಯಾಂಗ ತನಿಖೆ ಮೂಲಕ ಸಾಬೀತು ಪಡಿಸುವುದಾದರೆ ತಮ್ಮ ಸರ್ಕಾರಕ್ಕೂ ಕೂಡ ಕೀರ್ತಿ ಬರುತ್ತದೆ, ಇದನ್ನು ತಾವು ಮಾಡಿ. ಉದಾಹರಣೆಗೆ ಹೇಳುವುದಾದರೆ, ಕೇರಳದಲ್ಲಿ ಟಿ. ವಿ. ಥಾಮಸ್ ಮತ್ತು ಎಂ ಎನ್. ಗೋವಿಂದನ್ ನಾಯರ್ ಹಿರಿಯ ನಾಯಕರು. ನಂಬೂದರಿಪಾದ್ ಅವರು ಮುಖ್ಯಮಂತ್ರಿಯಾಗಿದ್ದಾಗ, ಮಂತ್ರಿ ಮಂಡಲದ ಈ ಇಬ್ಬರು ಸದಸ್ಯರ ಮೇಲೆ ಆರೋಪಗಳನ್ನು ಹೊರಿಸಿದಾಗ ಅವರು ಮುಲ್ಲಾ ಆಯೋಗ ವನ್ನು ನೇಮಿಸಿ ತನಿಖೆಗೆ ಒಪ್ಪಿಸಿದರು. ಮಂತ್ರಿಮಂಡಲದ ಸದಸ್ಯರು ರಾಜಿನಾಮೆ ಕೊಡಲಿಲ್ಲ ಎಂದು ಒಬ್ಬರು ಹೈಕೋರ್ಟಿನಲ್ಲಿ ಸ್ಟೇ ಕೇಳಿದರು. ಥಾಮಸ್ ಮತ್ತು ಗೋವಿಂದನ್ ನಾಯರ್ ಆ ಕ್ಷಣ ರಾಜಿನಾಮೆ ಕೊಟ್ಟು ಆಯೋಗದ ಮುಂದೆ ಹೋಗಿ ಸಮರ್ಥನೆ ಮಾಡಿಕೊಂಡಿದ್ದರಿಂದ ಆಯೋಗದ ತೀರ್ಪಿನಲ್ಲಿ ಇವರಿಬ್ಬರೂ ಆರೋಪಗಳಿಂದ ವಿಮುಕ್ತರಾದರು. ಆಮೇಲೆ ಮಂತ್ರಿಗಳಾದರು. ಅಂಥಾ ಒಂದು ಆದರ್ಶವನ್ನು ತಾವು ನಿರ್ಮಾಣ ಮಾಡಬೇಕು. ಏಕೆಂದರೆ, ನ್ಯಾಯ, ನೀತಿ ಎಲ್ಲರಿಗೂ ಒಂದೆ. ಈ ಸಂದರ್ಭದಲ್ಲಿ ನಾನಾದರೂ ಹೇಳುವುದೇನೆಂದರೆ, ಇದರ ಬಗ್ಗೆ ನಾನು ವಿಚಾರ ಮಾಡಿದಾಗ ತಾವು ಹೊರಗೆ ನಿಂತು ತಮ್ಮನ್ನು ತಾವು ಸಮರ್ಥನೆ ಮಾಡಿಕೊಳ್ಳಿ, ತಮ್ಮ ಅಭಿಪ್ರಾಯವನ್ನು ಹೇಳಿಕೊಳ್ಳಿ. ತಾವು ನಿರಪರಾಧಿಗಳು ಎಂದು ಆದರೆ ಆಮೇಲೆ ಬನ್ನಿ, ಅದರ ಮೇಲೆ ಆಕ್ಷೇಪಣೆ ಏನೂ ಇಲ್ಲ. ವಿಚಾರಣೆ ಆಗುವಷ್ಟು ಕಾಲ ಅಧಿಕಾರದಲ್ಲಿ ಉಳಿಯದೆ, ನ್ಯಾಯಾಂಗ ವಿಚಾರಣೆಗೆ ತಾವು ಅವಕಾಶ ಮಾಡಿ ಕೊಟ್ಟರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ, ಮತ್ತು ಜನರಿಗೆ ತಮ್ಮ ಮೇಲೆ ವಿಶ್ವಾಸ ಜಾಸ್ತಿಯಾಗುತ್ತದೆ. ಅಂಥಾ ಪ್ರಮಾದವೇನೂ ಆಗಲಾರದು, ಇದಕ್ಕೆ ಒಪ್ಪಿಕೊಳ್ಳಿ ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಕಾಗೋಡು ತಿಮ್ಮಪ್ಪನವರು ರೈತರ ವಿರೋಧಿ ಎನ್ನುವುದನ್ನು ಒಪ್ಪುತ್ತೀರಾ?

ಶ್ರೀ ಬಿ. ಎ. ಕಕ್ಕಿಲಾಯ.— ಅವರು ರೈತರ ವಿರೋಧಿಯೆಂದು ನಾನು ಹೇಳಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್.— ಮಾನ್ಯ ಕಕ್ಕಿಲಾಯರವರು ಆ ರೀತಿ ಹೇಳಲಿಲ್ಲ. ಅವರು ಹೇಳಿದ್ದರೆ ಎದೆ ಮೇಲೆ ಕೈಯಿಟ್ಟು ಹೇಳುತ್ತಿದ್ದರು. ಮಾನ್ಯ ಬಸವಣ್ಣಪ್ಪನವರು, ಕಾಗೋಡು ತಿಮ್ಮಪ್ಪನವರು ಇದಕ್ಕೆ ಕಾರಣ ಎಂದು ಎದೆ ಮೇಲೆ ಕೈಯಿಟ್ಟು ಏಕೆ ಹೇಳಲಿಲ್ಲ.

ಶ್ರೀ ಬಿ. ಎ. ಕಕ್ಕಿಲಾಯ.— ಮಾನ್ಯ ಕಾಗೋಡು ತಿಮ್ಮಪ್ಪನವರು ರೈತರ ವಿರೋಧಿ ಅಥವಾ ರೈತರ ಸಂಗಾತಿ ಎಂದು— ಇವೆರಡನ್ನೂ ನಾನು ಹೇಳಲಿಲ್ಲ. ಅದು ಅವರ ಕಾರ್ಯ ಚಟುವಟಿಕೆಯಿಂದ ಸ್ಪಷ್ಟವಾಗಬೇಕು ಜನ ತಿಳಿಯಬೇಕು. ನಾನು ಹೇಳಿದ್ದೇನೆಂದರೆ, ನಮ್ಮ ಶಿಫಾರಸಿನಿಂದ ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲ, ಅವರು ರೈತರ ವಿರೋಧಿ ಎಂದು ಹೇಳಲಿಲ್ಲ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಒಂದು ವಿಚಾರದಲ್ಲಿ ರೈತರು ತಮ್ಮ ಕಷ್ಟಗಳನ್ನು ಸಹಿಸಲಿಕ್ಕೆ ಸಾಧ್ಯವಿಲ್ಲದೆ, ಸಂಘಟಿತರಾಗಿ ಒಂದು ಹೋರಾಟಕ್ಕೆ ಬಂದಾಗ ಅವರ ಸಮಸ್ಯೆಗಳನ್ನು ಪರಿಹರಿಸಲಿಕ್ಕೆ ಸರ್ಕಾರದ ಕಾರ್ಯದರ್ಶಿಯವರೂ ಕೂಡ ಅಲ್ಲಿಗೆ ಹೋಗಿ ಮಾತುಕತೆ ನಡೆಸಿ ಅಲ್ಲಿಂದಲ್ಲಿಗೆ ಸಮಾಧಾನ ಮಾಡಲಿಕ್ಕೆ ಪ್ರಯತ್ನಪಡುತ್ತಾ ಇರುವಾಗ ಸರ್ಕಾರ ಕೂಡ ಯೋಚನೆ ಮಾಡುತ್ತಿದೆ, ಇಲ್ಲವೇ ಹೋದರೆ ಕಾರ್ಯದರ್ಶಿಯವರು ಏನು ಹೋಗುತ್ತಿದ್ದರು? ಇದನ್ನು ಬಗೆ ಹರಿಸೋಣ ಎಂದು ಭರವಸೆ ನೀಡುತ್ತಾ ಇರುವಾಗ, ಈ ಘಟನೆ ನಡೆದಿದೆ. ಈ ಒಂದು ಅನಾಹುತ ನಡೆಯಬಾರದಿತ್ತು, ಇದು ಖಂಡನಾರ್ಹವಾದುದು. ರೈತರ ಸಮಸ್ಯೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುವಾಗ ಅವರು ಏಕೆ ಅಡ್ಡ ಬರಬೇಕಾಗಿತ್ತು? ಜನರನ್ನು ಏಕೆ ಬಲಿ ಕೊಡಬೇಕಾಗಿತ್ತು? ಆದುದರಿಂದ ಈ ವಿಚಾರದಲ್ಲಿ ಖಂಡಿತವಾಗಿ ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಒಪ್ಪಿಕೊಳ್ಳಬೇಕು, ರೈತರ ಸಮಸ್ಯೆಗಳನ್ನು ಪರಿಹರಿಸಲಿಕ್ಕೆ ವಿಶೇಷ ಕಾರ್ಯದರ್ಶಿಯವರು ಅಲ್ಲಿ ಹೋಗಿ ರೈತರ ಜೊತೆಯಲ್ಲಿ ಮಾತುಕತೆ ನಡೆಸಿ ಏನು ಆಶ್ವಾಸನೆ ಕೊಟ್ಟಿದ್ದಾರೆ, ಅದನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ ಎಂದು ರೈತರಿಗೆ ಆಶ್ವಾಸನೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು ನಮ್ಮ ನಾಯಕರಾದ ಶ್ರೀಮಾನ್ ಪಟೇಲ್‌ರವರು ಈ ಸದನದ ಮುಂದಿಟ್ಟಿರುವಂಥ ಎಲ್ಲಾ ಬೇಡಿಕೆಗಳಿಗೂ ಸಂಪೂರ್ಣವಾದಂಥ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಉಪಾಧ್ಯಕ್ಷರೇ, ಭದ್ರಾವತಿ ಸಮೀಪದ ನಾಗಸಮುದ್ರ ಗ್ರಾಮದಲ್ಲಿ ಮೇ ೨೫ನೇ ತಾರೀಖು ನಡೆದಂಥ ಗೋಲೀಬಾರ್ ಹಾಗೂ ಅದರಿಂದ ಉಂಟಾದಂಥ ಸಾವಿನ ಬಗ್ಗೆ ನಾನೂ ಕೂಡ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೆ. ನನಗೆ ಗೊತ್ತಿರುವಂತ, ನನ್ನ ತಿಳುವಳಿಕೆಗೆ ಬಂದಿರುವಂಥ ಸತ್ಯಾಂಶಗಳ ಆಧಾರದ ಮೇಲೆ ಈ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಪ್ರಪ್ರಥಮವಾಗಿ ನಾನು ಈ ಸದನಕ್ಕೆ ಸ್ಪಷ್ಟ ಪಡಿಸುವ ವಿಚಾರವೇನೆಂದರೆ ನನಗೆ ಗೊತ್ತಿರುವಂಥ ಸತ್ಯಾಂಶದ ಆಧಾರದ ಮೇಲೆ, ನನ್ನ ಅಭಿಪ್ರಾಯವನ್ನು ನಾನು ಇಲ್ಲಿ ಕೊಡಲಿಕ್ಕೆ ಬಯಸುತ್ತೇನೆಯೇ ಹೊರತು ಯಾರನ್ನೇ ಸಮರ್ಥನೆ ಮಾಡತಕ್ಕಂಥದ್ದೇ ಆಗಲಿ ಅಥವಾ ಯಾರನ್ನೇ ಖಂಡನೆ ಮಾಡತಕ್ಕಂಥದ್ದೇ ಆಗಲಿ ನನ್ನ ಮಾತಿನ ಗುರಿಯಲ್ಲ. ಈ ರೀತಿಯಾದ ಗುರಿ ಸದನದ ಸದಸ್ಯರಾದ ನಮಗೆ ಇರಬೇಕಾದ್ದೂ ಇಲ್ಲ. ಸನ್ಮಾನ್ಯ ಉಪಾಧ್ಯಕ್ಷರೆ ನಮ್ಮ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ಸ್ನೇಹಿತರು ಈ ಸ್ಥಳಗಳಿಗೆ ಹೋಗುವುದಕ್ಕೆ ಒಂದು ದಿವಸ ಮುಂಚಿತವಾಗಿ ನಾನೂ ಕೂಡ ಈ ಎಲ್ಲಾ ಸ್ಥಳಗಳಿಗೆ ಭೇಟಿ ಕೊಟ್ಟಿದ್ದೇನೆ. ಯಾವ ಕುಟುಂಬಕ್ಕೆ ಸೇರಿದಂಥ ಸದಸ್ಯರು ಈ ದುರ್ಘಟನೆಯಲ್ಲಿ ಮರಣ ಹೊಂದಿದ್ದಾರೋ ಅವರೆಲ್ಲರ ಮನೆಗಳಿಗೂ ಕೂಡ ನಾನು ಖುದ್ದಾಗಿ ಹೋಗಿದ್ದೇನೆ. ಅವರ ಜೊತೆಯಲ್ಲಿ ಮತ್ತು ಗ್ರಾಮದಲ್ಲಿರತಕ್ಕ ಅನೇಕ ರೈತ ಸಮುದಾಯದವರ ಜೊತೆಯಲ್ಲಿ ಅನೇಕ ಮಾತುಕತೆಗಳನ್ನೂ ಕೂಡ ಆಡಿಕೊಂಡು ಬಂದಿದ್ದೇನೆ.

೪-೦೦ ಪಿ. ಎಂ.

ಏತಕ್ಕೆಂದರೆ ಇಂಥಾ ಒಂದು ಘಟನೆಯ ಬಗ್ಗೆ ಮಾತನಾಡಬೇಕಾದರೆ ಕೊನೇಪಕ್ಷ ಆ ಸ್ಥಳಕ್ಕೆ ಹೋಗಿ ವಿಚಾರವನ್ನು ತಿಳಿದುಕೊಳ್ಳದೇ ಮಾತನಾಡುವುದರಲ್ಲಿ ಏನೂ ತಾತ್ಪರ್ಯ ಇರಲಿಕ್ಕೆ ಇಲ್ಲವೆಂದು ನಾನು ಮೊದಲೇ ಸ್ಪಷ್ಟ ಪಡಿಸುತ್ತೇನೆ. ನಾನು ಕೂಡ ಪ್ರಾಮಾಣಿಕವಾಗಿ ಏನು ನಡೆದಿದೆ ಎನ್ನತಕ್ಕದ್ದನ್ನು ತಿಳಿದುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಅಲ್ಲಿಗೆ ಹೋಗಿ ಅವರೊಡನೆ ವಿಚಾರ ಮಾಡಿದೆ. ಅದೂ ಅಲ್ಲದೇನೇ ರೈತ ಸಂಘದ ಮುಖಂಡರೊಡನೆ ಸಾಕಷ್ಟು ಸುಧೀರ್ಘವಾಗಿ ವಿಚಾರ ಮಾಡಿ, ಚರ್ಚೆ ಮಾಡಿ ಬಂದಿರತಕ್ಕವನು. ರೈತರ ಸಮಸ್ಯೆಗಳ ಬಗ್ಗೆ ಅನೇಕ ಸಾರಿ ಈ ಸದನದಲ್ಲಿ ಬಹುಶಃ ಕಳೆದ ೨ ವರ್ಷಗಳಿಂದ ನಾವು ಚರ್ಚೆ ಮಾಡುತ್ತಲೇ ಬಂದಿದ್ದೇವೆ. ಹಾಗೂ ರೈತರ ಸಮಸ್ಯೆಗಳನ್ನು ಪರಿಹರಿಸಬೇಕು ಎನ್ನತಕ್ಕ ಒತ್ತಾಯವನ್ನು ತರುವುದಕೋಸ್ಕರವಾಗಿ ಈ ರಾಜ್ಯದ ರೈತ ಸಂಘದ ನೇತೃತ್ವದಲ್ಲಿ ಅನೇಕ ಕಡೆಯಲ್ಲಿ ಚಳುವಳಿ ಆಗಿದೆ, ಹಿಂದೆ ಅನೇಕ ಘಟನೆಗಳು ಆಗಿವೆ. ಅವರ ಬಗ್ಗೆ ಅನೇಕ ಸಂದರ್ಭದಲ್ಲಿ ಇಲ್ಲಿ ನಾವು ಮಾತನಾಡಿದ್ದೇವೆ. ಇವತ್ತು ರೈತರ ಸಮಸ್ಯೆಗಳ ಬಗ್ಗೆ ಸರ್ಕಾರ ಕೆಲವು ಪ್ರಕಟಣೆಗಳನ್ನು ಮಾಡಿದ್ದು ನಿಜ.

(ಶ್ರೀಮತಿ ಎಸ್. ಪ್ರಮೀಳಾ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದರೂ ಕೂಡ ರೈತರ ಸಮಸ್ಯೆ ಮೂಲಭೂತವಾಗಿ ಏನಿದೆ ಇದು ಪರಿಹಾರವಾಗಿದೆ ಎಂದು ತಿಳಿದುಕೊಳ್ಳುವುದರಲ್ಲಿ ಯಾವ ಲಾಭವೂ ಇಲ್ಲ. ಏತಕ್ಕೆಂದರೆ ರೈತರ ಸಮಸ್ಯೆ ಈ ದೇಶದ ಸಮಸ್ಯೆಯಾಗಿದೆ. ಅದು ಯಾರ ಒಬ್ಬರ ಸಮಸ್ಯೆಯಲ್ಲ. ಇದರಲ್ಲಿ ನೇರವಾಗಿ ಯಾವುದೇ ರಾಜಕೀಯ ವಿಚಾರ ಇಲ್ಲ. ಇವತ್ತು ಏನು ರೈತರ ಸಮಸ್ಯೆ ಎಂದು ಹೇಳಿ ನಮ್ಮ ಮುಂದೆ ಬರುತ್ತಿದೆ, ಇದು ರೈತರ ಚಳುವಳಿಯಾಗಿ ಒಂದಲ್ಲ ಒಂದು ರೂಪದಲ್ಲಿ ನಮ್ಮ ಮುಂದೆ ಬಂದು ನಿಲ್ಲುತ್ತಿದೆ. ಇವನ್ನು ನಾವು ನೀಗಿಸುವುದಕ್ಕೆ ನಡೆಸಿಕೊಂಡು ಬಂದಿರತಕ್ಕ ಕಾರ್ಯಕ್ರಮಗಳಿಂದ ಒಂದು ಕಡೆಯಲ್ಲಿ ಅಭಿವೃದ್ಧಿ ಸಾಧನೆಯಾಗಿದ್ದರೂ ಕೂಡ, ಅದೇ ಸಂದರ್ಭದಲ್ಲಿ ಮತ್ತೊಂದು ಕಡೆಯಲ್ಲಿ ಜೀವನದ ನಾನಾ ರೀತಿ ವಿಷಮ ವೃತ್ತಗಳು ಉಂಟಾಗಿ ರೈತ ಕೂಡ ನಾನಾ ರೀತಿಯ ಸಮಸ್ಯೆಗಳಿಗೆ ಗುರಿಯಾಗಿದ್ದಾನೆ. ನಿಜ. ಸಣ್ಣ ರೈತರ ಸಮಸ್ಯೆ ಬೇರೆ ಇರಬಹುದು. ದೊಡ್ಡ ಪ್ರಮಾಣದಲ್ಲಿ ವ್ಯವಸಾಯ ಮಾಡುತ್ತಿರುವಂಥವರ ಸಮಸ್ಯೆ ಬೇರೆ ಇರಬಹುದು. ಒಟ್ಟಿನಲ್ಲಿ ಸಮಸ್ಯೆ ಏನು ಕಾಣುತ್ತಿದೆ ಅದನ್ನು ಮರೆ ಮಾಡುವ ಪ್ರಯತ್ನ ಸರಿಯಲ್ಲ. ಇಷ್ಟೇ ಅಲ್ಲ. ನಿಜವಾಗಿ ಹೇಳುವುದಾದರೆ, ಈ ಚಳುವಳಿ ನನ್ನ ದೃಷ್ಟಿಯಲ್ಲಿ ಕೇವಲ ಒಂದು ರೈತರ ಸಮಸ್ಯೆ ಅಷ್ಟೇ ಅಲ್ಲ. ಇಡೀ ನಮ್ಮ ಗ್ರಾಮ ಜೀವನವೆಲ್ಲಾ ನಾನಾ ಸಮಸ್ಯೆಗಳಿಂದ ತತ್ತರಿಸುತ್ತಿವೆ. ಗ್ರಾಮ ಜೀವನದಲ್ಲಿ ಎಲ್ಲಾ ಸಂಕಷ್ಟಗಳು ಉಂಟಾಗಿವೆ. ಇದನ್ನು ಇದು ಪ್ರತಿನಿಧಿಸುತ್ತಿದೆ ಎಂದು

ಸರ್ಕಾರ ಭಾವನೆ ಮಾಡಿಕೊಳ್ಳುವುದಾದರೆ, ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ದೃಷ್ಟಿಯಲ್ಲಿ ಸರ್ಕಾರ ಈ ಚಳುವಳಿಯನ್ನು ನೋಡಬೇಕು. ಈ ಸಮಸ್ಯೆಗಳನ್ನೆಲ್ಲಾ ಸರ್ಕಾರ ಒಂದೇ ದಿವಸದಲ್ಲಿ ಬಗೆಹರಿಸುವುದಕ್ಕೆ ಆಗುವುದಿಲ್ಲ. ಇವುಗಳಲ್ಲಿ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಸಮಸ್ಯೆಗಳೂ ಇವೆ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಸಮಸ್ಯೆಗಳೂ ಇವೆ. ಇಬ್ಬರೂ ಕೂಡಿ ಪ್ರಯತ್ನ ಪಟ್ಟರೂ ಕೂಡ ಕೆಲವು ಸಮಸ್ಯೆಗಳನ್ನು ಬಗೆಹರಿಸದೇ ಇರತಕ್ಕಂಥವು ಇರಬಹುದು. ಆದರೆ ಇದನ್ನು ಅರ್ಥ ಮಾಡಿಕೊಂಡು ಪರಿಹರಿಸತಕ್ಕಂಥ ಪ್ರಯತ್ನ ಅತ್ಯಗತ್ಯವಿದೆ. ನಾವು ಈ ಸದನದ ಸದಸ್ಯನಾಗಿ ಈ ಭಾಗದಲ್ಲಿ ಮತ್ತು ಆ ಕಡೆಯ ಭಾಗದಲ್ಲಿ ಕುಳಿತಂಥ ಸಮಯದಲ್ಲಿ ಅನೇಕ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆದರೆ ಆ ಸಂದರ್ಭದಲ್ಲಿ ನಮಗೆ ನೇರವಾಗಿ ರೈತರ ಸಂಘದ ಜೊತೆಯಲ್ಲಿ ಕುಳಿತು ಕೊಂಡು ಮಾತನಾಡತಕ್ಕಂಥ ಅವಕಾಶ ಒದಗಿರಲಿಲ್ಲ. ಅದಕ್ಕೆ ಕಾರಣವನ್ನು ಮಾನ್ಯ ಶ್ರೀ ಜೆ. ಎಚ್. ಪಟೇಲ್‌ರವರು ಹೇಳಿದ್ದಾರೆ. ಅಂದರೆ ರೈತ ಸಂಘದವರು ಯಾವುದೇ ರಾಜಕೀಯ ಪಕ್ಷದವರೊಡನೆ ಸೇರಿಕೊಳ್ಳದೇ ತಮ್ಮ ಸಮಸ್ಯೆಗಳನ್ನು ತಾವೇ ಇತ್ಯರ್ಥ ಮಾಡಿಕೊಳ್ಳುತ್ತೇವೆ ಎನ್ನತಕ್ಕ ಧೋರಣೆಯನ್ನು ಅವರು ಇಟ್ಟುಕೊಂಡಿದ್ದುದರಿಂದ ನಾವು ಅವರ ವಿಷಯದಲ್ಲಿ ನೇರವಾಗಿ ಭಾಗವಹಿಸದೇ ಇದ್ದರೂ ಸಹ ಅವರ ಚಳುವಳಿಯಲ್ಲಿ ಭಾಗವಹಿಸದೇ ಇದ್ದರೂ ಕೂಡ ಅವರ ಪರವಾಗಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅವರಿಗೆ ಈ ಸಭೆಯಲ್ಲಿ ಬೆಂಬಲವನ್ನು ಸೂಚಿಸುವುದರ ಮೂಲಕ ಕೆಲಸ ಮಾಡಿದ್ದೇವೆ. ಹೀಗಾಗಿ ಅವರೊಡನೆ ನಾವು ಯಾವುದೇ ನೇರವಾದ ಸಂಪರ್ಕವನ್ನು ಇಟ್ಟುಕೊಂಡು ಕೆಲಸ ಮಾಡುವಂಥ ಸಂದರ್ಭ ಬಂದಿರಲಿಲ್ಲ. ಆದರೆ ಇತ್ತೀಚೆಗೆ ನಾವು ಶಿವಮೊಗ್ಗಕ್ಕೆ ಹೋಗಿದ್ದಾಗ ನಾನು ರೈತ ಸಂಘದ ಮುಖಂಡರಾದ ಶ್ರೀ ಎಚ್. ಎಸ್. ಶಿವರುದ್ರಪ್ಪನವರು ನಮ್ಮ ಓಖಿಯರ ಮತ್ತು ಹಿಂದೆ ರಾಜಕೀಯದಲ್ಲೂ ಕೂಡ ನಾವು ಅವರೂ ಒಟ್ಟಿಗೆ ಇದ್ದವರು. ನಾನು ಅವರನ್ನು ಭೇಟಿ ಆದಾಗ ನನಗೆ ಸ್ಪಷ್ಟವಾಗಿ ಅನ್ನಿಸಿದ್ದು ಏನೆಂದರೆ ರೈತ ಸಂಘದವರಿಗೆ ಸರ್ಕಾರದವರೊಡನೆ ಸಂಧಾನ ಮಾಡಿ ಬಗೆಹರಿಸಬೇಕು ಎನ್ನತಕ್ಕಂಥ ಮನಸ್ಸು ಇದೆ ಮತ್ತು ಸರ್ಕಾರಕ್ಕೂ ಕೂಡ ಇದನ್ನು ಸಂಧಾನ ಮೂಲಕ ಬಗೆಹರಿಸಬೇಕು ಎನ್ನತಕ್ಕ ಅಭಿಪ್ರಾಯವಿದೆ ಎನ್ನತಕ್ಕದ್ದು ಕಂಡು ಬಂದಾಗ ಎರಡು ಹಂತದಲ್ಲಿ ಅವರನ್ನು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿಸೋಣ ಎಂದರೆ ಮುಖ್ಯಮಂತ್ರಿಗಳವರು [illegible] ಕಾಲಾವಕಾಶವಿಲ್ಲವೆಂದು ಗೊತ್ತಾದಾಗ, ನಾನು ಶ್ರೀ ಶಿವರುದ್ರಪ್ಪನವರಿಗೆ ಈ [illegible] ಉನ್ನತ ಅಧಿಕಾರಿಗಳನ್ನು ಕಳುಹಿಸಿ ಕೊಟ್ಟರೆ ಮಾತನಾಡುವುದಕ್ಕೆ ತಯಾರಾಗಿದ್ದೀರಾ ಎಂದು ಕೇಳಿದಾಗ ಅವರು ಅದಕ್ಕೆ ಸಂತೋಷದಿಂದ ಒಪ್ಪಿಗೆ ಸೂಚನೆ ಮಾಡಿದಾಗ ಅದನ್ನು ನಾನು ಸರ್ಕಾರದ ಗಮನಕ್ಕೆ ತಂದೆ. ಆಗ ಅಡಿಷನಲ್ ಮುಖ್ಯ ಕಾರ್ಯದರ್ಶಿ ಶ್ರೀಮಾನ್ ವೆಂಕಟೇಶ್‌ರವರು ಅಲ್ಲಿಗೆ ಬಂದರು, ಮಾತುಕತೆ ಆಯಿತು. ಸುಮಾರು 4½ ಗಂಟೆಗಳ ಕಾಲ ಮಾತುಕತೆಯಲ್ಲಿ ರೈತ ಸಂಘದವರ [illegible] ಕೊನೆವರೆಗೆ ನಾನು ಕೂಡ ಆ ಸಂದರ್ಭದಲ್ಲಿ ಮಾತುಕತೆಯಲ್ಲಿ ಹಾಜರಿದ್ದೆ. ಹೀಗೆ ನನಗೆ ರೈತ ಸಂಘದವರೊಡನೆ ಸಂಪರ್ಕ ಉಂಟಾಯಿತು. ನಾಲ್ಕುವರೆ ಗಂಟೆಗಳ ಮಾತುಕತೆಯಾದ ನಂತರ ಇನ್ನು ಮುಂದೆ ಕಿರಿಯ ಅಧಿಕಾರಿಗಳ ಮಟ್ಟದಲ್ಲಿ ಸಭೆ ಸೇರಿ ಮಾತುಕತೆ ನಡೆಸುವುದು ಏತಕ್ಕೆಂದರೆ ಅಧಿಕಾರಿಗಳ ಮಟ್ಟದಲ್ಲಿ ಚರ್ಚೆಯಾಗಿ ಈ ವಿಷಯಗಳಿಗೆ ಒಂದು ರೂಪ ಬಂದ ಮೇಲೆ ಮುಖ್ಯಮಂತ್ರಿಗಳವರು ಒಂದು ತೀರ್ಮಾನ ಹೇಳಿದ ಮೇಲೆ ಅಧಿಕಾರಿಗಳು ಮತ್ತು [illegible] ಎಂದರೆ ಏನೇ ಎಂದು ಟಿಪ್ಪಣಿಯನ್ನು ಬರೆಯುವುದರ ಬದಲು, ಕೆಲವೊಂದು ಉಳಿದಿರತಕ್ಕ ಸಮಸ್ಯೆಗಳನ್ನು ಮುಖ್ಯ ಮಂತ್ರಿಗಳವರೇ ಬಗೆಹರಿಸುವುದಕ್ಕೆ ಸಾಧ್ಯ ಎನ್ನತಕ್ಕ ದೃಷ್ಟಿಯಿಂದ. ಇನ್ನೊಂದೆರಡು ಬಾರಿ ಸರ್ಕಾರದ ಉನ್ನತ ಅಧಿಕಾರಿಗಳ ಮಟ್ಟದಲ್ಲಿ ಈ ರೈತ ಸಂಘದವರ ಚರ್ಚೆ ಮುಗಿದ ನಂತರ, ಮುಖ್ಯ ಮಂತ್ರಿಗಳು ಸಭೆ ಕರೆಯತಕ್ಕದ್ದು ಎನ್ನತಕ್ಕ ಒಂದು ತೀರ್ಮಾನವಾಯಿತು. ಆದರೆ, ಅನಿರೀಕ್ಷಿತವಾಗಿ ಈ ಮಧ್ಯದಲ್ಲಿ ಇಂಥಾ ದುರ್ಘಟನೆ ನಡೆಯಿತು. ಆ ಘಟನೆಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಲಕ್ಷ್ಮೀಸಾಗರ್‌ರವರು, ಶ್ರೀ ಜೆ. ಎಚ್. ಪಟೇಲ್‌ರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಏನೋ ಜನಗಳು ಬಂದು ಹೇಳಿದರು ಎಂದು ನಾನು ಜನಗಳ ಹತ್ತಿರ ಮಾತನಾಡಿದ್ದೇನೆ ನಾನು ಇದಕ್ಕಿಂತ ಭಿನ್ನವಾದ ಚಿತ್ರವಿದೆ ಎಂದು ಹೇಳುವುದಕ್ಕೆ ತಯಾರಿಲ್ಲ. ನಾನು ಸಹ ಆ ಹಳ್ಳಿಗಳಿಗೆ ಹೋಗಿ ನೋಡಿದಾಗ ನಿಜಕ್ಕೂ ಕೂಡ ಮನಸ್ಸು ಕರಗುತ್ತೆ. ಚಿತ್ರವೇ ಹೊರತು ಅದಕ್ಕಿಂತ ಉತ್ತಮ ಚಿತ್ರವನ್ನು ಯಾವ ಪ್ರಭುತ್ವವೂ ಕೊಡುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ಪರಿಸ್ಥಿತಿ ಹೀಗಿದೆ. ಇಂಥಾ ದುರ್ಘಟನೆ ಏತಕ್ಕಾಯಿತು? ಎನ್ನುವುದನ್ನೆಲ್ಲಾ ನಾನು ಕ್ಲಿಯರ್ ರಿಕಾರ್ಡ್ ಮಾಡಿಕೊಳ್ಳದೇ ಹೋದರೂ ಕೂಡ ಅಥವಾ ಯಾವುದೇ ಎವಿಡೆನ್ಸ್ ರಿಕಾರ್ಡ್ ಮಾಡಿಕೊಳ್ಳದೇ ಹೋದರೂ ಪ್ರಾಮಾಣಿಕವಾಗಿ ಅವ

ರೆಲ್ಲರ ಹತ್ತಿರ ಚರ್ಚೆ ಮಾಡಿದೆ. ಒಂದು ಹಂತದವರೆಗೆ ನಾವು ಎಲ್ಲರೂ ಸಮರ್ಪಕವಾದ ರೀತಿಯಲ್ಲಿ ಚರ್ಚೆ ಮಾಡಿದ್ದೆವು. ಸುಮಾರು ನಾಲ್ಕೂವರೆ ಗಂಟೆಗಳವರೆಗೆ ಚರ್ಚೆಯಾಯಿತು. ಅಲ್ಲಿದ್ದ ರೈತರು ಪೋಲೀಸಿನವರು ಮತ್ತು ಜನಗಳೆಲ್ಲಾ ಒಟ್ಟಿಗೇ ಸೇರಿ ಕಾಫಿ, ಕುಡಿದು ತಿಂಡಿ ತಿಂದಿದ್ದಾರೆ. ಅಲ್ಲಿಯವರೆಗೂ ಚಿತ್ರ ಸರಿಹೋಗುತ್ತದೆ. ಆನಂತರ ಇದ್ದಕ್ಕಿದ್ದ ಹಾಗೆ ಗೋಲಿಬಾರ್ ಆಯಿತು ಅಂತ ಬಂದಾಕ್ಷಣ ಇವೆಲ್ಲಾ ನಾನು ಏನೇ ಪ್ರಯತ್ನ ಮಾಡಿದರೂ ಕೂಡ ಒಂದೊಂದು ಮಾತಿನಿಂದ ಒಂದೊಂದು ರೀತಿಯ ಭಾವನೆಗೆ ಅವಕಾಶವಾಗುತ್ತದೆ. ಇಲ್ಲಿ ಒಂದು ಪ್ರಶ್ನೆ ಇದೆ ಅಲ್ಲಿ ಏನೂ ದೊಡ್ಡ ಪೋಲೀಸ್ ಫೋರ್ಸ್ ಇರಲಿಲ್ಲ. ಅವರು ಇದ್ದಕ್ಕಿದ್ದ ಹಾಗೆ ಪೋಲೀಸಿನವರು ಉದ್ದೇಶ ಪಟ್ಟು ಜನಗಳ ಮೇಲೆ ಗೋಲಿಬಾರು ಮಾಡಬೇಕೆಂದು ಮಾಡಿದ್ದಾರೆಂದು ಹೇಳತಕ್ಕದ್ದು ಕೂಡ ಬಹಳ ಕಷ್ಟವಾಗುತ್ತದೆ. ಏತಕ್ಕೆಂದರೆ ನಾವು ಸತ್ಯನಿಷ್ಠೆಯಿಂದ ಮಾತನಾಡಿ ಕೆಲಸ ಮಾಡಬೇಕಾಗುತ್ತದೆ. ನಮ್ಮ ಭಾವನೆಗಳು ಎಷ್ಟೇ ಉದ್ವೇಗಗೊಂಡಿದ್ದರೂ ಕೂಡ ಯಾವುದೇ ವ್ಯಕ್ತಿ, ಶಕ್ತಿಯ ಬಗ್ಗೆ ಈಗಲೇ ಅನಾವಶ್ಯಕವಾಗಿ ನಿರಾಧಾರದ ಮಾತನ್ನು ಹೇಳುವುದು ಸಲ್ಲದು. ಮಾನ್ಯ ಸಭಾಧ್ಯಕ್ಷಿಣಿಯವರೇ, ಪೋಲೀಸ್ ವ್ಯವಸ್ಥೆಯನ್ನು ಬಿಟ್ಟು ರಾಜ್ಯವನ್ನು ನಡೆಸತಕ್ಕ ಸ್ಥಿತಿಗೆ ನಾವು ಇವತ್ತು ಮುಟ್ಟಿಲ್ಲ. ಇವತ್ತು ಪೋಲೀಸ್ ವ್ಯವಸ್ಥೆ ಏನಿದೆ ಅದನ್ನು ಇನ್ನೂ ಉತ್ತಮ ರೀತಿಯಲ್ಲಿ ಸುಧಾರಿಸುವ ಪರಿಸ್ಥಿತಿಯಲ್ಲೂ ಇಲ್ಲ.

ಈವತ್ತಿನ ದಿವಸ ಪೋಲೀಸ್ ವ್ಯವಸ್ಥೆಯನ್ನೇ ಬಿಟ್ಟು ಬೇರೆ ವ್ಯವಸ್ಥೆಯ ಮೂಲಕ ನಾವು ರಾಜ್ಯವನ್ನು ನಡೆಸಲು ಸಾಧ್ಯವೇ ಎನ್ನುವ ತತ್ವವನ್ನು ಕೂಡ, ನಾವು ಎದುರುಗಡೆ ಇಟ್ಟುಕೊಳ್ಳಬೇಕು. ಆದರೆ ಇದನ್ನು ಎಷ್ಟರಮಟ್ಟಿಗೆ ಬೆಳೆಸಬೇಕು, ಹೇಗೆ ಬೆಳೆಸಬೇಕು, ಯಾವ ರೀತಿ ಬೆಳೆಸಬೇಕು, ಏನಾದರೂ ವ್ಯತ್ಯಾಸವಾದಾಗ ಏನು ಮಾಡಬೇಕು ಎನ್ನುವ ಬಗ್ಗೆ ಸಿದ್ಧಾಂತದ ಸ್ವರೂಪಕ್ಕೆ ಉತ್ತರವನ್ನು ಹೇಳಲು ಸಾಧ್ಯವಾಗುವುದಿಲ್ಲ. ಘಟನೆಯ ಬಗ್ಗೆ ನಾನು ಹೇಳುವುದೇನೆಂದರೆ ಇಲ್ಲಿ ಬಹಳ ಹೊತ್ತಿನವರೆಗೆ ಪೋಲೀಸ್‌ನವರು ತಾಳ್ಮೆಯಿಂದ ಇದ್ದರು. ಜನರೂ ಕೂಡ ತಾಳ್ಮೆಯಿಂದ ಇದ್ದರು. ಆದರೆ ನಿಜವಾಗಿಯೂ ಜನ ಸಭೆ ನಡೆಯಬಾರದು. ಅದನ್ನು ನಾವು ತಡೆಗಟ್ಟಬೇಕು ಎನ್ನುವ ಮಾತು ಮುಚ್ಚುಮರೆಯಿಲ್ಲದ ಮಾತು. ಅವರಲ್ಲಿ ಏನು ಭಾವನೆ ಇತ್ತು ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ದಿವಸಗಳಿಂದ ಜನರ ಸಂಕಷ್ಟಗಳಿಗೆ ಭಾಗಿಯಾಗಿ, ಸಂಘಟನೆ ಏನು ಮಾಡಿದ್ದಾರೆ ಅದನ್ನು ರಾಜಕೀಯವಾಗಿ ಒಡೆಯಬಾರದು ಎನ್ನುವ ಭಾವನೆ ಅವರಲ್ಲಿ ಇತ್ತು ಎಂದು, ಅದು ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ. ಆ ಒಂದು ದೃಷ್ಟಿಯಿಂದ ಸಭೆಯನ್ನು ತಡೆಗಟ್ಟುವುದು ತಮ್ಮ ಧರ್ಮವೆಂದು ಹೇಳಿ ಗಾಡಿಗಳನ್ನು ಅಡ್ಡ ಹಾಕಿದೆವು ಎಂದು ಅವರು ಹೇಳುತ್ತಾರೆ. ಲಾಟಿಚಾರ್ಜ್ ಆದಮೇಲೆ ಕಲ್ಲನ್ನೂ ಕೂಡ ಹೊಡೆದೆವು ಎಂದು ಅವರು ಒಪ್ಪಿಕೊಳ್ಳುತ್ತಾರೆ. ನಾನು ಮಾನ್ಯ ವಿರೋಧಪಕ್ಷದ ಮಾನ್ಯ ಮಿತ್ರರುಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಾನು ಮಾತನಾಡುವಾಗ ಅವರು ಹೇಳಿದರು, ಲಾಟಿ ಚಾರ್ಜ್ ಮೊದಲು ಶುರುವಾಯಿತು, ಶುರುವಾದಾಗ ನಾವು ಕಲ್ಲು ಎಸೆದದ್ದು ನಿಜವೆಂದು ಅವರು ಒಪ್ಪಿಕೊಳ್ಳುತ್ತಾರೆ. ಲಾಟಿ ಚಾರ್ಜ್ ಯಾವಾಗ ಶುರುವಾಯಿತು ಎನ್ನುವ ಬಗ್ಗೆ ಕೊನೆಗೆ ಹೋಗಿ ನಿಂತರೆ ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂದರೆ, ಎಲ್ಲ ತೀರ್ಮಾನವಾಗಿ ಪೋಲೀಸಿನವರು ವಾಪಸ್ ಹೋಗುತ್ತೇವೆಂದು ವ್ಯಾನ್ ತೆಗೆದುಕೊಂಡರು. ಅವರು ವಾಪಸ್ ಹೋಗುವ ಬದಲು ಅವರು ಮುಂದೆ ನುಗ್ಗಿ ಗಾಡಿಯನ್ನು ಮುಂದುವರಿಸುವುದರಿಂದ ಈ ಪ್ರಕರಣವಾಯಿತು ಎಂದು ಅಲ್ಲಿಗೆ ಈ ಮಾತು ಬಂದು ನಿಲ್ಲುತ್ತದೆ. ಆದರೆ ಪೋಲೀಸ್‌ನವರನ್ನು ಕೇಳಿದರೆ ನಾವು ಮುಂದಕ್ಕೆ ಹೋಗಲಿಲ್ಲ ಹಿಂದಕ್ಕೆ ತರುವುದಕ್ಕೋಸ್ಕರವಾಗಿ ಮುಂದಕ್ಕೆ ಹೋದೆವು ಎಂದು ಹೇಳುತ್ತಾರೆ. ಇದು ತುಂಬಾ ಸೂಕ್ಷ್ಮವಾದ ವಿಚಾರ. ಇಂಥ ಒಂದು ಘಟನೆಯಾದಾಗ ಇದು ಸತ್ಯವೆಂದು ಹೇಳತಕ್ಕಂಥದ್ದು ಅಸಾಧ್ಯ. ಆದರೆ ಮೂರು ಜನರು ಸತ್ತು ಹೋಗಿದ್ದಾರೆ ಎನ್ನುವ ಸತ್ಯಕ್ಕೆ ಬಣ್ಣ ಹಚ್ಚಬೇಕೆಂದು ಇಲ್ಲ. ನಮ್ಮ ಮುಖವನ್ನು ಕರಾಳರೂಪದಲ್ಲಿ ಮಾಡಿಕೊಂಡು ಸತ್ಯವನ್ನು ಮುಚ್ಚಿಹಾಕುವುದಕ್ಕೂ ಕೂಡ ಸಾಧ್ಯವಿಲ್ಲ. ಈವತ್ತು ಈ ಸಮಸ್ಯೆಯನ್ನು ಎರಡು ಬಗೆಯಾಗಿ ನೋಡಬೇಕಾಗಿದೆ. ಒಂದು ರೈತರಬಗ್ಗೆ ಈವತ್ತು ಏನು ಸಂಧಾನ ರೀತಿಯಲ್ಲಿ ಬಗೆಹರಿಸಬೇಕು ಎನ್ನುವ ರೀತಿಯಲ್ಲಿ ಸರ್ಕಾರ ಪ್ರಯತ್ನ ಮಾಡಲಿಕ್ಕೆ ಬಂದರೆ ಆ ಪ್ರಯತ್ನವನ್ನು ಯಾವುದೇ ಕಾರಣವಿದ್ದರೂ ಅದನ್ನೇ ಮುಂದುವರಿಸಿಕೊಂಡು ಹೋಗಿ ರೈತರ ಸಮಸ್ಯೆ ಏನು ಇದೆ ಅದನ್ನು ವ್ಯಾಪಕರೀತಿಯಲ್ಲಿ ಸಂಧಾನದಿಂದ ಬಗೆಹರಿಸಿಕೊಂಡು ಹೋಗತಕ್ಕಂಥ ರೀತಿಯಲ್ಲಿ ಖಂಡಿತವಾಗಿಯೂ ಮುಂದುವರಿಸಿಕೊಂಡು ಹೋಗಬೇಕು. ಈ ದೃಷ್ಟಿಯಿಂದ ನಾವು ನೋಡಬೇಕು. ಈ ಘಟನೆ ಕೇವಲ ಇಲ್ಲಿ ಒಂದು ಕಡೆ ಗೋಲಿಬಾರ್ ಆಯಿತು ಬೇಕಾದರೆ ಸಂಧಾನದಿಂದ

ಎನ್ನುವ ದೃಷ್ಟಿಯಿಂದ ಸರ್ಕಾರ ನಡೆದಿದೆ. ಇಡೀ ಸಮಗ್ರ ರೈತರ ಸಮಸ್ಯೆಗಳನ್ನು ನಾವು ಸಂಧಾನದಿಂದ ಪರಿಹರಿಸಬೇಕಾದರೆ, ಇಂಥ ಒಂದು ವಾತಾವರಣವನ್ನು ನಾವು ಕಾಯ್ದುಕೊಂಡು ಹೋಗಬೇಕಾದರೆ ರೈತ ಸಮುದಾಯದಲ್ಲಿ ಸರ್ಕಾರಕ್ಕೆ ಇರುವ ವಿಶ್ವಾಸ. ಈ ವಿಶ್ವಾಸವನ್ನು ಉಳಿಸಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ ಈ ಘಟನೆಯನ್ನು ನೋಡಬೇಕಾದ್ದು ಅನಿವಾರ್ಯವಾಗಿದೆ. ಈ ದೃಷ್ಟಿಯಿಂದ ಈ ಸಮಸ್ಯೆಯನ್ನು ನಾವು ವಿವೇಚನೆಯಿಂದ ನೋಡಬೇಕು. ಇನ್ನೊಂದು ವಿಚಾರವನ್ನು ಹೇಳಬೇಕಾದರೆ, ಈ ಘಟನೆಗಳಿಗೆಲ್ಲ ಕಾರಣರಾದವರು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರೇ ಎನ್ನುವ ಮಾತುಗಳು ಹೊರಗಡೆಯಲ್ಲೂ ಮತ್ತು ಇಲ್ಲೂ ಕೂಡ ಬಂದಿದೆ. ನನ್ನ ಮಾನ್ಯ ಮಿತ್ರರಾದ ಶ್ರೀ ಬಸವಣ್ಣಪ್ಪನವರು ಈ ವಿಚಾರವಾಗಿ ನಾನು ಅವರ ಹತ್ತಿರ ಖಾಸಗಿಯಾಗಿ ಕೆಲವು ವಿಷಯಗಳನ್ನು ಮಾತನಾಡಿದ್ದೇನೆ. ಅಲ್ಲ ಏನು ಮಾತನಾಡಿದ್ದು ಎನ್ನುವುದನ್ನೂ ಕೂಡ ಬಹಿರಂಗವಾಗಿ ಹೇಳುತ್ತೇನೆ. ಒಂದೇ ಒಂದು ವಿಷಯವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುವುದೇನೆಂದರೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರನ್ನು "ಸೀಸಿ''. ಹೊತ್ತೆಯಬೇಕಾದ ಅಗತ್ಯ ನನಗಿಲ್ಲ. ನಾನು ಯಾವಾಗಲು ಖಂಡಿತವಾಗಿಯೂ "ಜೀಹುಜೂರ್'' ಎಂದು ಹೇಳಿ ಬದುಕನ್ನು ನಡೆಸಬೇಕಾಗಿಲ್ಲ. ಆದರೆ ಯಾರಬಗ್ಗೆ ಅನವಶ್ಯಕವಾಗಿ ಅನಾಧರಣೆಯಾಗಿ ಹೇಳುವುದಕ್ಕೆ ನನ್ನ ಮನಸ್ಸು ಬರುವುದಿಲ್ಲ. ರೈತರ ಸಮಸ್ಯೆ ಉಲ್ಬಣಾವಸ್ಥೆಗೆ ಹೋದಾಗ ನನ್ನ ಗಮನಕ್ಕೆ ಕೇಳಿಬಂದುದು ಏನೆಂದರೆ ಕಾಂಗ್ರೆಸ್ ಐ ಪಕ್ಷದಲ್ಲಿ ಸದಸ್ಯರೆಲ್ಲರೂ ಸುಮ್ಮನೆ ಕುಳಿತುಕೊಂಡಿದ್ದಾರೆ ಎನ್ನುವ ಭಾವನೆ ಇರುತ್ತದೆ. ನೀವು ಜನರ ಹತ್ತಿರಹೋಗಿ ಸರ್ಕಾರ ಏನೇನು ಸವಲತ್ತುಗಳನ್ನು ಈಗಾಗಲೇ ಕೊಟ್ಟಿದೆ ಮತ್ತು ಏನೇನು ಕೊಡಬೇಕಿದೆ ಇದೆ, ಅದನ್ನೆಲ್ಲ ಜನರ ಹತ್ತಿರ ಹೋಗಿ ಪ್ರಚಾರ ಮಾಡಬೇಕು. ಸುಮ್ಮನೆ ಕುಳಿತಿರುವುದರಿಂದ ಜನರಿಗೆ ತಿಳಿಯುವುದಿಲ್ಲ ಎನ್ನುವ ಮಾತು ಬಂದುದರಿಂದ ಕೆಲವು ಸಭೆಗಳನ್ನು ಮಾಡಬೇಕು ಎನ್ನುವ ಆಲೋಚನೆ ಬಂದಿತು. ಆಗ ಮಾನ್ಯ ಶ್ರೀ ವೆಂಕಟೇಶ್ವರವರನ್ನು ಕಳುಹಿಸಿ ಅವರ ಮುಖಾಂತರ ರೈತರ ಜೊತೆಯಲ್ಲಿ ಸಂಧಾನದ ಪೂರ್ವಭಾವಿ ಮಾತುಕತೆಗಳು ಅಗತಕ್ಕಂಥ ವಿಚಾರ ಏನು ಇದೆ ಅದು ಮಾನ್ಯ ಕಾಗೋಡು ತಿಮ್ಮಪ್ಪನವರ ಸಂಪೂರ್ಣವಾದ ಒಪ್ಪಿಗೆಯನ್ನು ಪಡೆದು ಆ ರತಕ್ಕಂಥ ಕೆಲಸ. ಅದನ್ನೆಲ್ಲ ಸ್ಪಷ್ಟವಾಗಿ ವ್ಯಕ್ತಪಡಿಸಬಯಸುತ್ತೇನೆ. ಇದು ಆದಮೇಲೆ ಅದನ್ನೆಲ್ಲ ಮರೆಯಬೇಕೆಂದಾಗಲಿ, ಮತ್ತೊಂದು ಮಾಡಬೇಕೆನ್ನುವುದಾಗಲಿ, ಟೀಕಾಪಣೆ ಮಾಡಬೇಕೆನ್ನುವುದಾಗಲಿ, ಸತ್ಯಕ್ಕೆ ದೂರವಾದ ವಿಚಾರವೆಂದು ನಾನು ಹೇಳುತ್ತೇನೆ. ೨೪ನೇ ತಾರೀಖು ಮಧ್ಯಾಹ್ನದಮೇಲೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಅವರ ಒಂದು ಕೊಠಡಿಯಲ್ಲಿ ಪರಾಹಿ ರಿಹ್ಯಾಬಿಲಿಟೇಷನ್ ಹೈಪವರ್ ಕಮಿಟಿಯ ಸಭೆಯಲ್ಲಿ ಅವರ ಸದಸ್ಯನಾಗಿ ನಾನು ಕೂಡ, ಭಾಗವಹಿಸಿದ್ದೆವು. ಸಭೆಯು ಮುಕ್ತಾಯದ ವೇಳೆಯಲ್ಲಿ ನಾನು ಕೇಳಿದೆ. ನಾಳೆ ಭದ್ರಾವತಿ, ಶಿವಮೊಗ್ಗಕ್ಕೆ ಹೊರಡುತ್ತೀರಾ ಪಾಂಪ್ಲೆಟನ್ನು ನಾನು ಕೂಡ ನೋಡಿದೆ. ನೀವು ಹೋಗುತ್ತೀರೋ ಇಲ್ಲವೋ ಎಂದು ಕೇಳಿದೆ. ಇಲ್ಲ ನನಗೆ ಗೊತ್ತಿಲ್ಲ ನಾನು ಬರುವುದಿಲ್ಲವೆಂದು ಅವತ್ತೇ ಹೇಳಿದೆ. ಜನ ಅದನ್ನು ಪ್ರಿಂಟ್ ಮಾಡಿದ್ದಾರೆ ನಾನು ಈಗಾಗಲೇ ತಿಳಿಸಿದ್ದೇನೆ ಎಂದು ಹೇಳಿದರು. ಎದುರಿನಲ್ಲಿಯೆ ಶಿವಮೊಗ್ಗದ ೩-೪ ಜನರು ಕೂಡ ರೈತ ಸಂಘಟನಾ ಚಳುವಳಿಗೆ ಸಂಬಂಧಪಟ್ಟ ಜನರು ಕೂಡ ನನ್ನ ಎದುರಿನಲ್ಲಿಯೇ ಇದ್ದರು. ಅವರ ಎದುರಿನಲ್ಲಿಯೇ ಸ್ಪಷ್ಟವಾಗಿ ನಾನು ಬರುವುದಿಲ್ಲವೆಂದು ಹೇಳಿರುತ್ತಾರೆ. ಈ ವಿಚಾರವನ್ನು ಪೊಲೀಸ್ ಸೂಪರಿಂಟೆಂಡೆಂಟ್‌ರವರಿಗೂ ತಿಳಿಸಿರುವುದಕ್ಕೆ ನಾನು ಜೀವಂತವಾಗಿ ಸಾಕ್ಷಿ ಇಲ್ಲಿ ಇದ್ದೇನೆ. ನಾನು ನಾಗಸಮುದ್ರಕ್ಕೆ ಹೋದಾಗ ರೈತರು ಕೇಳಿದರು, ಇವಕ್ಕೆಲ್ಲ ತಿಮ್ಮಪ್ಪನವರೇ ಕಾರಣರೆಂದು ಹೇಳಿದರು. ಅವರ ಹತ್ತಿರ ಸ್ಪಷ್ಟವಾಗಿ ಹೇಳಿದ್ದೇನೆ. ಇದು ಸರಿಯಲ್ಲ ದಯವಿಟ್ಟು ಆರೀತಿ ತಿಳಿದುಕೊಳ್ಳಬೇಡಿ, ತಿಮ್ಮಪ್ಪನವರು ಮಾಡಿರತಕ್ಕಂಥದ್ದು ಸರಿಯೋ ತಪ್ಪೋ, ಅದು ಏನೇ ಇರಲಿ ಅದು ಬೇರೆ ವಿಚಾರ ಅದನ್ನೆಲ್ಲ ಸಮರ್ಥನೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ಅವರಿಗೆ ಸೇರಿರತಕ್ಕಂಥದ್ದು, ಅವರೇ ಸಮರ್ಥನೆ ಮಾಡಿಕೊಳ್ಳುತ್ತಾರೆ. ನಾನು ಮಾತ್ರ ಗೊತ್ತಿರತಕ್ಕಂಥ ವಿಚಾರವನ್ನು ಮುಚ್ಚಿಟ್ಟರೆ ಅದು ದ್ರೋಹ ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದ ನಾಗಸಮುದ್ರದಲ್ಲಿ ರೈತರು ಎಲ್ಲ ಸೇರಿಕೊಂಡು ನನ್ನನ್ನು ಜಾಡಿಸಿದರು ಬಿಡಲಿಲ್ಲ. ನಾನು ಅಸಮಾಧಾನದ ಮಾತುಗಳನ್ನು ಹೇಳಿದ್ದು ಇಲ್ಲ. ತಪ್ಪು ತಿಳುವಳಿಕೆಯಿಂದ ಹೇಳಿರುತ್ತಾರೆ. ಮಾನ್ಯ ಗುಂಡೂರಾಯರಾಗಲಿ, ಅಥವಾ ಮಾನ್ಯ ತಿಮ್ಮಪ್ಪನವರಾಗಲಿ ನನಗೆ ಗೊತ್ತಿಲ್ಲದೆ ಇಲ್ಲ. ೨೩ನೇ ತಾರೀಖು ಬೆಳಗಿನ ಪೇಪರಿನಲ್ಲಿ ನೋಡಿದಮನೇ ಅವರ ಮನೆಗೆ ಹೋಗಿ ವಿಚಾರಿಸಿ ಇದ್ದೆ. ಬೆಂಗಳೂರಿನಲ್ಲೂ ಕಾಗೋಡು ತಿಮ್ಮಪ್ಪನವರು, ಶಿವಮೊಗ್ಗದಲ್ಲಿ ಕಾಗೋಡು ತಿಮ್ಮಪ್ಪನವರು ಎರಡು ಕಡೆಗಳಲ್ಲಿ ಕಾಗೋಡು ತಿಮ್ಮಪ್ಪನವರು ಇರಲು ಹೇಗೆ ಸಾಧ್ಯ. ಹಾಗಾದರೆ ಅವರನ್ನು ಯಾವಾಗ ನೋಡಿದ್ದು ಎಂದರೆ ೨೩ನೇ ತಾರೀಖು ಶನಿವಾರದಿಂದ ವಾಪಸ್ ಭದ್ರಾವತಿಗೆ ಬಂದಿದ್ದರು.

ಶ್ರೀ ಪಿ. ರಾಮದೇವ್.—ಪೋಲೀಸ್‌ನವರು ಏತಕ್ಕೆ ಹೋದರು?

ಶ್ರೀ ಕೆ.ಎಚ್. ಶ್ರೀನಿವಾಸ್ —ನನಗೆ ಗೊತ್ತಿರುವ ಮಾತುಗಳನ್ನು ಈ ಸಭೆಗೆ ಹೇಳುತ್ತಿದ್ದೇನೆ. ಪ್ರಶ್ನೆ ಏನಾಗುತ್ತದೆ ಎಂದರೆ ಕಾಗೋಡು ತಿಮ್ಮಪ್ಪನವರು ಹೋಗುವುದಿಲ್ಲ ಎಂದು ಗೊತ್ತಿದ್ದರೆ ಅಲ್ಲಿಗೆ ಪೋಲಿಸ್‌ನವರು ಏತಕ್ಕೆ ಹೋದರು ಎಂದರೆ ಅವರನ್ನೇ ಕೇಳಿ ಸರ್ಕಾರದಲ್ಲಿ ಏನು ಮಾಹಿತಿ ಇದೆಯೋ ನನಗೆ ಗೊತ್ತಿಲ್ಲ. ಅವರು ಏನು ಹೇಳುತ್ತಾರೆಂದರೆ ಕಾನ್‌ಫರೆನ್ಸ್ ನಡೆಯುತ್ತಿದೆ ಎಂದು ಹೇಳಿದರೆ' ಅದನ್ನು ತಡೆಯಲು ಹೋಗುತ್ತಾರೆ. ಅಂಥ ಸಂದರ್ಭದಲ್ಲಿ ಗದ್ದಲವಾಗಬಹುದು. ಎನ್ನುವ ದೃಷ್ಟಿಯಿಂದ ನಾವಲ್ಲಿಗೆ ಹೋಗಿದ್ದೆವು ಹೋದಮೇಲೆ ವಾಪಸ್ ಬರಬೇಕು ಎನ್ನುವ ಸಂದರ್ಭದಲ್ಲಿ ಬರುವುದಕ್ಕೆ ಬಿಡಲಿಲ್ಲ ಏತಕ್ಕೆಂದರೆ ಯೋಗಣ್ಣ ಎನ್ನತಕ್ಕಂಥವರ ಪ್ರಕರಣ ಇದೆಯಲ್ಲ.

ಶ್ರೀ ಪಿ. ರಾಮದೇವ್.— ನಾನು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ನಾಗಸಮುದ್ರದಲ್ಲಿ ಒಂದು ಪಾಂಪ್‌ಲೆಟ್ ಹಾಕಿ ಚಳುವಳಿ ಸಮಿತಿಯಿಂದ ಮಂತ್ರಿಗಳು ಶಾಸಕರು ಬರುತ್ತಾರೆಂದು ಪೋಲೀಸಿನವರು ಹೋಗಿದ್ದರೂ ತಮ್ಮ ವಾದ............

ಶ್ರೀ ಕೆ.ಎಚ್. ಶ್ರೀನಿವಾಸ್.—ವಾದವೇನು ಇಲ್ಲ. ನನ್ನ ವಾದಕ್ಕೆ ಬೆಲೆ ಕೊಡಬೇಡಿ. ನನಗೆ ಗೊತ್ತಿರತಕ್ಕಂಥದ್ದು ಸತ್ಯವಾದ ವಿಷಯವಾಗಿರುತ್ತದೆ. ನನ್ನ ವಾದಕ್ಕೆ ಮನ್ನಣೆಯನ್ನು ಕೊಡಬೇಕೆಂದು ಆಗ್ರಹವಿಲ್ಲ. ಈಗ ಪ್ರಶ್ನೆ ಏನೆಂದರೆ ಈವತ್ತು ಕಾಗೋಡು ತಿಮ್ಮಪ್ಪನವರಮೇಲೆ ಜವಾಬ್ದಾರಿ. ಆ ಜಿಲ್ಲೆಯ ಮಂತ್ರಿಗಳಾದಮೇಲೆ ಅಲ್ಲಿ ಆಗತಕ್ಕಂಥದ್ದಕೆಲ್ಲ ಅವರೇ ಜವಾಬ್ದಾರರೆಂದು ಕೊಂಡಿ ಪೋಣಿಸುತ್ತಾಹೋಗಿ ಆ ಕೊಂಡಿಯನ್ನು ಅವರ ಮನೆಯ ಗೇಟಿಗೆ ಸಾಗಿಸುವುದು ಸಾಧ್ಯವಾದರೂ ಇರಬಹುದು ಆದರೆ ಅವರನ್ನೇ ಮಂತ್ರಿಮಾಡುವುದಕ್ಕೆ ಸಾಧ್ಯವಿಲ್ಲ. ಸ್ಪಷ್ಟವಾಗಿ ನನ್ನ ಸಹಾನುಭೂತಿ ರೈತ ಸಮುದಾಯದ ಪರವಾಗಿ ಇದೆ ಅಂದಮಾತ್ರಕ್ಕೆ ಸರ್ಕಾರದ ಬಗ್ಗೆ ಅನೌದಾರ್ಯ ಇದೆ ಎಂಬುದು ಅರ್ಥವಲ್ಲ. ಯಾವುದು ಸತ್ಯವೋ ಯಾವುದು ಅಸತ್ಯವೋ ಆದರೆ ಮೂರು ಜನ ಮುಗ್ಧ ಜನಗಳು ಸತ್ತುಹೋಗಿದ್ದಾರೆ ಎಂಬುದು ಮಾತ್ರ ಸತ್ಯ. ಇಂಥ ಸಂದರ್ಭದಲ್ಲಿ ವಿಚಾರಣೆ ಆಗಬೇಕು. ಈ ಸದನದಲ್ಲಿ ನಾವು ಎಷ್ಟೋ ಸಾರಿ ವಿಚಾರಣೆ ಆಗಬೇಕು ಎಂದು ಹೇಳಿದ್ದೇವೆ. ಆದರೆ ವಿಚಾರಣೆ ಏತಕ್ಕಾಗಿ ಆಗಬೇಕು ಎಂದು ಹೇಳುತ್ತೇವೆ ಎಂಬುದನ್ನು ಯೋಚನೆ ಮಾಡಬೇಕು. ವಿಚಾರಣೆ ನಡೆಸುವುದರಿಂದ ಎಲ್ಲಾ ಸತ್ಯವನ್ನೂ ಯಾವ ಪರಬ್ರಹ್ಮನೂ ಪತ್ತೆ ಹಚ್ಚುವುದಕ್ಕಾಗುವುದಿಲ್ಲ. ಆದರೆ ಪ್ರಾಮುಖ್ಯವಾದ ಕೆಲವೊಂದು ವಿಚಾರಗಳ ಬಗ್ಗೆ ಸತ್ಯಾಂಶ ಹೊರಗಡೆ ಬರಬೇಕು ಅದರಿಂದಾಗಿ ಮುಂದೆ ಸರ್ಕಾರವನ್ನು ನಡೆಸುವುದಕ್ಕಾಗಲೀ. ಅಥವಾ ಜನರ ಜೊತೆ ವ್ಯವಹಾರ ಮಾಡುವುದಕ್ಕಾಗಲೀ ಮಾರ್ಗದರ್ಶನವಾಗಬೇಕು ಎಂಬ ದೃಷ್ಟಿಯಿಂದ ವಿಚಾರಣೆ ನಡೆಸಬೇಕೆಂದು ಹೇಳುತ್ತೇವೆ. ಆದರೆ ಹಿಂದೆ ವಿಚಾರಣೆಗಳನ್ನು ನಡೆದಿರುವುದನ್ನು ಲೆಕ್ಕ ಹಾಕಿ ಯಾವ ವಿಚಾರಣೆಯಿಂದ ಪಾಠ ಕಲಿತುಕೊಂಡಿದ್ದೇವೆ ಎಂಬುದನ್ನು ನೋಡಿದರೆ ಅದು ವಾದವಿವಾದಕ್ಕೆ ಎಡೆಕೊಡುವಂಥ ವಿಷಯವಾಗುತ್ತದೆ. ಆದರೆ ಪ್ರಾಮುಖ್ಯವಾದ ಅಂಶಗಳ ಬಗ್ಗೆ ಸತ್ಯಾಂಶ ಗೊತ್ತಾಗಬೇಕು ಎಂಬುದು ಎಲ್ಲರ ಉದ್ದೇಶವಾಗಿರುತ್ತದೆ. ಸರ್ಕಾರಕ್ಕೂ ಕೂಡ ಯಾವ ವಿಚಾರವನ್ನೂ ಮುಚ್ಚಿಡಬೇಕು ಎಂಬ ಉದ್ದೇಶವಿಲ್ಲ ಎಂದು ನಾನು ನಂಬುತ್ತೇನೆ ಆದರೆ ವಿಚಾರಣೆ ಆಗಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ವಿಚಾರಣೆ ಎಂದತಕ್ಷಣ ನಾವು ಯಾವಾಗಲೂ ನ್ಯಾಯಾಂಗ ವಿಚಾರಣೆಯಾಗಬೇಕು ಎಂದು ಹೇಳುತ್ತೇವೆ ಕೆಲವು ವಿಚಾರಗಳ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಬಹುದು. ಆದರೆ ವಿಚಾರಣೆ ಎಂದರೆ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕೆಂಬುದು ಪ್ರಾಮುಖ್ಯವಾದುದು ಇನ್ನೊಬ್ಬರ ಹಂಗಿಗೆ ಒಳಪಡದೇ ಇರುವ ವಿಚಾರಣೆಯಾಗಬೇಕು ರೈತ ಸಮುದಾಯಕ್ಕೆ ವಿಶ್ವಾಸ ಬರುವ ರೀತಿಯಲ್ಲಿ ವಿಚಾರಣೆ ಆಗಬೇಕು. ವಿಚಾರಣೆಗಾಗಿ ವಿಶೇಷ ಜಿಲ್ಲಾಧಿಕಾರಿಗಳನ್ನು ನೇಮಿಸಿದ್ದಾರೆ. ನನ್ನ ಅನುಭವದಲ್ಲಿ ಅಲ್ಲಿರುವ ವಿಶೇಷ ಜಿಲ್ಲಾಧಿಕಾರಿಗಳು ಯೋಗ್ಯವಾದ ವ್ಯಕ್ತಿ. ಅವರು ನಿಷ್ಪಕ್ಷಪಾತವಾಗಿ ಯೋಚನೆ ಮಾಡತಕ್ಕ ಅಧಿಕಾರಿಗಳು. ಆದರೆ ಅವರು ರೈತರ ಜೊತೆ ಇತ್ತೀಚೆಗೆ ಉಂಟಾದ ಘರ್ಷಣೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗಿರುವುದರಿಂದ ರೈತರಿಗೆ ಅವರ ಬಗ್ಗೆ ಸ್ವಾಭಾವಿಕವಾಗಿ ಅನುಮಾನ ಬರುತ್ತದೆ. ಆ ದೃಷ್ಟಿಯಿಂದ ಸರ್ಕಾರ ರೈತ ಸಮುದಾಯಕ್ಕೆ ವಿಶ್ವಾಸ ಬರುವ ರೀತಿಯಲ್ಲಿ ವಿಶ್ವಾಸ ಹುಟ್ಟಿಸುವ ಮಟ್ಟದ ಒಂದು ವಿಚಾರಣೆಯನ್ನು ಏರ್ಪಡಿಸಬೇಕಾದುದು ಅತ್ಯಗತ. ವಿಚಾರಣೆ ವಿಷಯ ಬಂದಾಗಲೆಲ್ಲ ಸರ್ಕಾರದ ಮುಂದೆ ಏನು ಸಮಸ್ಯೆ ಬರುತ್ತದೆ ಎಂದರೆ ನಾನೂ ಸ್ವಲ್ಪ ಕಾಲ ಸರ್ಕಾರದಲ್ಲಿದ್ದದ್ದರಿಂದ ಅದರ ಬಗ್ಗೆ ತಿಳಿದವನಾಗಿದ್ದೇನೆ. ಒಂದೇ ಒಂದು ಸಮಸ್ಯೆ ಸರ್ಕಾರದ ಮುಂದೆ ಬರುತ್ತದೆ. ನಾವು ವಿಚಾರಣೆ ಮಾಡುವುದರಿಂದ ಪೋಲೀಸರ ನೈತಿಕ ಸ್ಥೈರ್ಯ ಕೆಟ್ಟುಹೋಗುತ್ತದೆ. ಆಡಳಿತ

ಯಂತ್ರದ ನೈತಿಕ ಸ್ಥೈರ್ಯ ಕೆಟ್ಟುಹೋಗುತ್ತದೆ ಎಂಬ ಭಯ ಬರುತ್ತದೆ. ಆದರೆ ಈ ಸದನದ ಯಾವುದೇ ಸದಸ್ಯರಿಗೂ ನೈತಿಕ ಸ್ಥೈರ್ಯ ಕೆಡಬೇಕು. ಅದರಿಂದ ಪುರುಷಾರ್ಥ ಸಾಧನೆಯಾಗುತ್ತದೆ ಎಂಬ ಉದ್ದೇಶವಿಲ್ಲ. ಅದೇರೀತಿ ಪೋಲೀಸರ ಮನಸ್ಸಿನಲ್ಲಿ ಯಾರನ್ನು ಬೇಕಾದರೂ ಹೇಗೆ ಬೇಕಾದರೂ ಗುಂಡಿನಲ್ಲಿ ಹೊಡೆದು ಸ್ಟ್ಯಾಂಡರ್ಡಾಗಿ ಐದು ಸಾವಿರ ರೂಪಾಯಿ ಪರಿಹಾರವನ್ನು ಕೊಡಬಹುದು ಎಂಬ ಭಾವನೆ ಬಂದರೂ ಅದು ಅಪಾಯಕಾರಿಯಾದ ವಿಷಯ. ಅವರಿಗೆ ಪರಿಹಾರ ಘೋಷಣೆ ಮಾಡಿಲ್ಲ ಎಂದು ನನ್ನ ಸ್ನೇಹಿತರು ಕೆಲವರು ಅಭಿಪ್ರಾಯಪಟ್ಟರು. ನನಗೆ ಗೊತ್ತಿರುವ ಹಾಗೆ ಐದು ಸಾವಿರ ರೂಪಾಯಿ ಪರಿಹಾರವನ್ನು ಘೋಷಣೆ ಮಾಡಿದ್ದಾರೆ. ಆದರೆ ರೈತ ಸಂಘದವರು ಒಬ್ಬ ಮನುಷ್ಯನ ಬೆಲೆ ಕೇವಲ ಐದು ಸಾವಿರ ರೂಪಾಯಿಗಳಾ, ಇದು ಸರ್ಕಾರದ ಸ್ಟ್ಯಾಂಡರ್ಡ್ ರೇಟಾ ಎಂದು ಅಸಂತೃಪ್ತಿ ವ್ಯಕ್ತಮಾಡಿ ಪರಿಹಾರವನ್ನು ನಿರಾಕರಿಸಿದ್ದಾರೆ. ಮತ್ತು ತಾವೇ ಸ್ವತಃ ಹಣವನ್ನು ಸಂಗ್ರಹಮಾಡಿ ರೈತ ಕುಟುಂಬಗಳಿಗೆ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರ ಈ ವಿಚಾರವನ್ನು ಸಹಾನುಭೂತಿಪೂರ್ವಕವಾಗಿ, ನಿಷ್ಕಲ್ಮಶ ಮನಸ್ಸಿನಿಂದ ರೈತ ಸಮುದಾಯದ ವಿಶ್ವಾಸವನ್ನು ಇನ್ನಷ್ಟು ಒಲಿಸಿಕೊಂಡು ಬೆಳೆಸಿಕೊಂಡು ಸಂಧಾನದ ಮೂಲಕವಾಗಿ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಒಳ್ಳೆಯ ವಾತಾವರಣವನ್ನು ಅಲ್ಲಿ ಕಾಯ್ದುಕೊಂಡು ಹೋಗುವ ದೃಷ್ಟಿಯಿಂದ ನಾನು ಹೇಳಿದಹಾಗೆ ರೈತಸಮುದಾಯಕ್ಕೆ ವಿಶ್ವಾಸ ಹುಟ್ಟಿಸುವ ಮಟ್ಟದ ಮನುಷ್ಯರ ಮೂಲಕ ವಿಚಾರಣೆ ನಡೆಸಬೇಕು. ರೈತ ಸಂಘದವರನ್ನು ಕೇಳಿದರೆ, ನಮ್ಮ ಅಡಿಷನಲ್ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ವೆಂಕಟೇಶನ್ ಅವರು ಸರಿಯಾಗಿ ಹೇಳುತ್ತಾರೆ. ಅವರ ಏನು ಹೇಳಿದರೂ ಕೇಳುತ್ತೇವೆ ಎಂದು ಹೇಳುತ್ತಾರೆ. ಅವರು ಎಲ್ಲಾ ಸರ್ಕಾರೀ ಅಧಿಕಾರಿಗಳ ಮೇಲೂ ಅವಿಶ್ವಾಸವನ್ನು ಹೊಂದಿಲ್ಲ. ನ್ಯಾಯಾಧೀಶರೇ ವಿಚಾರಣೆ ಮಾಡಬೇಕು ಎಂಬ ಅಭಿಪ್ರಾಯವನ್ನು ಇಟ್ಟುಕೊಂಡಿಲ್ಲ. ಆದರೆ ಹೇಗೆ ಮಾಡಬೇಕು ಎಂಬುದು ಸರ್ಕಾರದ ಜಾಣ್ಮೆಗೆ, ವಿವೇಚನೆಗೆ ಬಿಟ್ಟಿದ್ದು. ಮೂಲಭೂತವಾದ ನೆಲೆಯಲ್ಲಿ ಈ ವಿಷಯವನ್ನು ಗ್ರಹಿಸಬೇಕು. ರೈತ ಸಮುದಾಯಕ್ಕೆ ವಿಶ್ವಾಸ ಬರತಕ್ಕ ನಿಷ್ಪಕ್ಷಪಾತ ವಿಚಾರಣೆಯನ್ನು ಮಾಡಬೇಕೆಂದು ನಾವು ಒತ್ತಾಯಿಸುತ್ತಿದ್ದೇನೆ. 5 ಸಾವಿರ ರೂಪಾಯಿಯನ್ನು ಅವರು ತಿರಸ್ಕರಿಸಿದ್ದಾರೆ. ಸರ್ಕಾರದವರು ಇನ್ನೂ ಸ್ವಲ್ಪ ಹೆಚ್ಚು ಕೊಡುವುದಕ್ಕೆ ಪ್ರಯತ್ನ ಮಾಡಿ. ಹಾಗೆಲ್ಲಾ ತಪ್ಪಾಗಿ ತಿಳಿದುಕೊಳ್ಳಬೇಡಿ, ದಯವಿಟ್ಟು ಇದನ್ನು ತೆಗೆದುಕೊಳ್ಳಿ ಎಂದು ಒಬ್ಬ ಅಧಿಕಾರಿಯ ಮುಖಾಂತರ ಕಳುಹಿಸಿಕೊಡಿ. ಜನರ ಹತ್ತಿರ ವಿನಯವಾಗಿ ಹೋಗುವುದರಿಂದ ಯಾರ ಗೌರವಕ್ಕೂ ಧಕ್ಕೆ ಬರುವುದಿಲ್ಲ. ಅದರಲ್ಲಿ ಯಾವ ತಪ್ಪೂ ಇಲ್ಲ. ಅವರ ಮನವೊಲಿಸಿ ಪರಿಹಾರ ತೆಗೆದುಕೊಳ್ಳುವಹಾಗೆ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸಂಧಾನದ ಮುಖಾಂತರ ಚರ್ಚೆ ಮಾಡಿ ಅವರಿಗೆ ಕೊಟ್ಟ ರತಕ್ಕ ಭರವಸೆಗಳನ್ನು ಶೀಘ್ರವಾಗಿ ಕಾರ್ಯಗತ ಮಾಡುವುದರ ಮೂಲಕ ಉತ್ತಮ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ರಾಜಶೇಖರ್ (ಭದ್ರಾವತಿ) —ಈ ಘಟನೆ ನಡೆದ ಕ್ಷೇತ್ರ ನನ್ನ ಮಿತ್ರರಾದ ಶ್ರೀ ಪಾಟೀಲ್ ಬಸವಣ್ಣಪ್ಪ ಅವರು ಪ್ರತಿನಿಧಿಸುವ ಕ್ಷೇತ್ರ. ನಡೆದಿರುವ ಘಟನೆಯಿಂದ ಎಲ್ಲರಿಗೂ ವಿಷಾದವಾಗಿದೆ. ಇದುವರೆಗೆ ಮಾನ್ಯ ವಿರೋಧಪಕ್ಷದ ನಾಯಕರು, ಹಿರಿಯ ಶಾಸಕರಾದ ಶ್ರೀ ಜೆ. ಹೆಚ್. ಪಟೇಲ್ ಅವರು ಮತ್ತು ಇತರೆ ಸ್ನೇಹಿತರು ಈ ಬಗ್ಗೆ ಚರ್ಚೆ ಮಾಡುತ್ತಾ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಅದನ್ನು ನೋಡಿ ನನಗೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ಏತಕ್ಕೆಂದರೆ ಅವರು ಹೇಳಿರುವ ಪ್ರತಿಯೊಂದು ವಿಚಾರವೂ ಕೂಡ ನೂರಕ್ಕೆ ನೂರರಷ್ಟು ಸತ್ಯಕ್ಕೆ ಬಹು ದೂರವಾದ ವಿಷಯ. ಜಿಲ್ಲಾ ಮಂತ್ರಿಗಳಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕಳೆದ ತಿಂಗಳ ಎರಡನೇ ವಾರದಲ್ಲಿ ನಮ್ಮ ಜಿಲ್ಲೆಗೆ ಪ್ರವಾಸ ಬಂದಿದ್ದಾಗ ನಾನು ಅಲ್ಲಿದ್ದೆ. ಅಲ್ಲಿ ಏನು ನಡೆಯಿತು, ಯಾರೂ ಯಾವ ಉದ್ದೇಶಕ್ಕಾಗಿ ಮಂಗೋಟೆ ಗ್ರಾಮದಲ್ಲಿ ಸಭೆಯನ್ನು ಕರೆದಿದ್ದರು ಎಂಬುದನ್ನು ತಿಳಿದುಕೊಳ್ಳದೆ ಮಂತ್ರಿಗಳ ಪಾತ್ರವನ್ನು ಮಾನ್ಯ ಸದಸ್ಯರು ತಪ್ಪಾಗಿ ಗ್ರಹಿಸಿದ್ದಾರೆ. ರೈತಾಪಿ ಸಂಘದವರು ಇಟ್ಟ ನಾನಾ ಬೇಡಿಕೆಗಳ ಬಗ್ಗೆ ಮಾನ್ಯ ಮಂತ್ರಿಗಳು ಸಂಪೂರ್ಣವಾಗಿ ಒಪ್ಪಿದ್ದಾರೆ. ನಮ್ಮೊಡನೆ ಹಲವಾರು ಬಾರಿ ಚರ್ಚೆ ಮಾಡುವಾಗ ಇದಕ್ಕೆ ಶಾಶ್ವತವಾದ ಪರಿಹಾರ ಕಂಡುಹಿಡಿಯಬೇಕು. ಮುಖ್ಯಮಂತ್ರಿಗಳ ಜೊತೆಗೆ ವಿಚಾರ ಮಾಡಿ ಕೇವಲ ಒಂದು ಕಡೆಯಲ್ಲಿ ಹಲವಾರು ಭಾಗದಲ್ಲಿ ಇರತಕ್ಕ ರೈತ ಸಮುದಾಯದ ಸಮಸ್ಯೆಯನ್ನು ಪರಿಹಾರ ಮಾಡಬೇಕು ಎಂಬ ಉತ್ಸಾಹ ನನಗಿದೆ ಎಂಬ ಮಾತನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ಆದರೂ ಅವರ ಬಗ್ಗೆ ರೈತ ವಿರೋಧಿ ಎಂಬ ಪದವನ್ನು ಬಳಸಿದ್ದಾರೆ.

ಇದು ಸತ್ಯಕ್ಕೆ ದೂರವಾದ ವಿಚಾರ ರಾಜಕೀಯವಾಗಿ ಅವರ ತೇಜೋವಧೆ ಮಾಡಬೇಕೆಂಬ ಉದ್ದೇಶದಿಂದ ಈ ರೀತಿ ಮಾಡುತ್ತಿರಬಹುದು ಎಂದು ನನಗನ್ನಿಸುತ್ತದೆ. ನಾನು ಕಾಗೋಡು ತಿಮ್ಮಪ್ಪನವರಿಂದ ಏನೂ ಬೇಡುವುದಕ್ಕೆ ಹೋಗಿಲ್ಲ. ನಾನು ಏನೂ ಸಮ್ಮಾನೆ ಅವರನ್ನು ಹೊಗಳುತ್ತಿಲ್ಲ.

ಶ್ರೀ ಜೆ ಹೆಚ್. ಪಟೇಲ್. ಒಂದು ವಿಷಯವನ್ನು ಕೇಳಿ. ನಾವು ಕಾಗೋಡು ತಿಮ್ಮಪ್ಪನವರನ್ನು ರೈತವಿರೋಧಿ ಎಂದು ಹೇಳಿಲ್ಲ ಈ ಕಾರಣದಿಂದ ಸಭೆಯನ್ನು ಕರೆದಿರುವುದರಿಂದ ಕಾಗೋಡು ತಿಮ್ಮಪ್ಪನವರು ರೈತವಿರೋಧಿ ಕೆಲಸ ಮಾಡುತ್ತಾರೆಂದು ಜನ ಹೇಳಿದ್ದಾರೆಂದು ಹೇಳಿದ್ದೇವೆ. ಅದನ್ನು ನೂರಕ್ಕೆ ನೂರರಷ್ಟು ಸತ್ಯ ಅಲ್ಲ ಎಂದು ನೀವು ಹೇಳುತ್ತಿದ್ದೀರಿ.

ಶ್ರೀ ಸಿ. ರಾಜಶೇಖರ್.—ನೀವು ಸಂಗ್ರಹಿಸಿರುವ ವಿವರಣೆ ಸತ್ಯಕ್ಕೆ ದೂರವಾದುದು ಎಂದು ಹೇಳಿದ್ದೇನೆ. ನಿಮ್ಮ ಅಭಿಪ್ರಾಯ ಸರಿಯಿಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮಂಗೋಟಿ. ಸನ್ಯಾಸಿ. ಕೊಡಮಗ್ಗಿ ಹತ್ತಿರ ನಾಗಸಮುದ್ರ ಇದೆ ಎಂದು ಹೇಳಿದ್ದೇವೆ. ಅದು ಸತ್ಯಕ್ಕೆ ದೂರವಾದುದೆ ? ೨೪ನೇ ತಾರೀಖು ಅಲ್ಲಿಗೆ ವ್ಯಾನ್ ಹೋಗಿತ್ತು ಎಂದು ಹೇಳಿದೆವು. ಅದು ಸತ್ಯಕ್ಕೆ ದೂರವೆ ?

೪-೩೦ ಪಿ. ಎಂ.

ಶ್ರೀ ಸಿ. ರಾಜಶೇಖರ್ (ಭದ್ರಾವತಿ).—ಸುಮಾರು ಕಳೆದ ತಿಂಗಳು ೨ನೇ ವಾರದಲ್ಲಿ ಪ್ರವಾಸ ಮಾಡುವಾಗ ಕೆಲವು ಯುವಕ ರೈತರು ಬಂದಿದ್ದರು. ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ರೈತರ ಸಮಸ್ಯೆ ಸುಮಾರು ದಿನಗಳಿಂದ ಇದೆ, ಈ ರೀತಿ ಚಳುವಳಿ ಮಾಡುತ್ತಿದ್ದಾರೆ ಪಕ್ಷದ ಕಾರ್ಯಕರ್ತರು ಶಾಸಕರನ್ನು ಅಡ್ಡಗಟ್ಟುತ್ತಿದ್ದಾರೆ, ಏನಾದರೂ ಪರಿಹಾರ ಕಂಡುಹಿಡಿಯಬೇಕು ಎಂದು ಅವರು ತಮ್ಮ ಅಭಿಪ್ರಾಯವನ್ನು ಹೇಳಿದರು ಅಲ್ಲಯ್ಯಾ ನೀವೆಲ್ಲರೂ ಪಕ್ಷದ ಕಾರ್ಯಕರ್ತರೆಂದು ಹೇಳುತ್ತೀರಿ, ಸರ್ಕಾರ ಈ ಬಗ್ಗೆ ಕೆಲವಾರು ಕಾರ್ಯಕ್ರಮ ಹಾಕಿಕೊಂಡಿದೆ, ಕೊಟ್ಟು ಆಶ್ವಾಸನೆಗಳನ್ನು, ಅಲ್ಪಸ್ವಲ್ಪ ಬೇಡಿಕೆಗಳನ್ನು ನಿವಾರಣೆ ಮಾಡುತ್ತಾ ಬಂದಿದೆ ಕಣ್ಣುಮುಚ್ಚಿಕೊಂಡು ಕುಳಿತಿದ್ದೇವೆಂದು ನೀವು ನನ್ನನ್ನು ಪ್ರಶ್ನೆ ಮಾಡಿದರೆ ಹೇಗೆ ನಾನೇನೂ ರೈತ ವಿರೋಧಿಯೇ ? ಬೇಡಿಕೆ ಈಡೇರುವುದು ಬೇಡವೆಂದು ಹೇಳುತ್ತೀನಾ, ತಾಲ್ಲೂಕು ಮಟ್ಟದಲ್ಲಿ ಒಂದು ಸಭೆ ಕರೆಯೋಣ, ಸಭೆಗೆ ಎಲ್ಲಾ ರೈತಮುಖಂಡರು ಬರಲಿ, ವಿಷಯವನ್ನು ಚರ್ಚೆ ಮಾಡೋಣ, ಅದಕ್ಕೆ ಮುಖ್ಯಮಂತ್ರಿಗಳನ್ನು, ಕಂದಾಯ ಮಂತ್ರಿಗಳನ್ನು ಮತ್ತು ಇನ್ನಿತರ ಮಂತ್ರಿಗಳನ್ನು ಕರೆಸೋಣ ಎಂದು, ಆದಷ್ಟು ತೀವ್ರವಾಗಿ ಪರಿಹಾರ ಮಾಡಬೇಕೆಂದು ಅಭಿಪ್ರಾಯ ಮಾಡಿ ಮಾತುಕತೆ ಭದ್ರಾವತಿಯಲ್ಲಿ ನಡೆದಿದ್ದು ಹೌದು. ಅಷ್ಟೇ ವಿನಹ ಲಂಗೋಡಿಯಲ್ಲಿ ಸಭೆ ಏರ್ಪಡಿಸಿ ಅದಕ್ಕೆ ನಾನು ಬರುತ್ತೇನೆಂದು ಅವರು ಎಂದು ಹೇಳಿರಲಿಲ್ಲ. ಯಾರೋ ಕೆಲವರು ಜನ ಕೇಳಿದರು ಎಂದು ಕೇಳಿಬಂತು ಆಗ ನನಗೆ ಕೇಳಿದರು. ನಾನು ಹೇಳಿದೆ ಆಗುವುದಿಲ್ಲ ಎಂದು. ಸರ್ಕಾರ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದಲ್ಲಿ ಒಂದು ಸಭೆ ಏರ್ಪಡಿಸೋಣ, ಅಲ್ಲಿಗೆ ರೈತ ಪ್ರಮುಖರು ಬಂದು ಸಮಸ್ಯೆಗಳನ್ನು ಇತ್ಯರ್ಥ ಮಾಡಲು ಅನುಕೂಲವಾಗುತ್ತದೆನ್ನುವ ಅಭಿಪ್ರಾಯಕ್ಕೆ ಬಂದವು, ಇಷ್ಟೇ ವಿನಹ ಲಂಗೋಡಿಯಲ್ಲಿ ಸಭೆ ಕರೆಯೋಣ, ಸಭೆಗೆ ಪ್ರಚೋದನೆ ಮಾಡಿದರು ಎಂದು ಹೇಳುವುದು ಸುಳ್ಳು. ಪೋಲೀಸರನ್ನು ಆಹ್ವಾನಿಸಿ, ಪೋಲೀಸರೇ ಮುಂದೆ ಹೋಗಿ ಚಪ್ಪರ ವಗ್ಯೆರೆ ಹಾಕಿ, ಜನ ಬರದಿದ್ದರೂ ಅವರನ್ನೇ ನಿಂತಿರಲು ಹೇಳಿ, ಇವರು ಬಂದು ಭಾಷಣ ಮಾಡುತ್ತಾರೆ ಎನ್ನುವ ವಿಷಯವನ್ನು ಮಾನ್ಯ ವಿರೋಧ ಪಕ್ಷದವರು ಏನು ಸಂಗ್ರಹಿಸಿದ್ದಾರೆಂದು ಸತ್ಯಕ್ಕೆ ದೂರವಾದುದು. ಇಂತಹ ಒಂದು ಅಭಿಪ್ರಾಯ ಅವರಲ್ಲಿ ಇರಲೇ ಇಲ್ಲ. ಇವರು ಮೊದಲಿನಿಂದಲೂ ಕೂಡಾ ಹೋರಾಟವ ಮುಖಾಂತರ ರೈತರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನಪಟ್ಟ ವ್ಯಕ್ತಿ. ಕಾಗೋಡು ಸತ್ಯಾಗ್ರಹ ಇರಲಿ ಮೊನ್ನೆ ಮೊನ್ನೆ ನೂರಾರು ಜನ ಗೇಣಿದಾರರನ್ನು ಸೇರಿಸಿ ಸಾಗರ ತಾಲ್ಲೂಕಿನ ತಹಸೀಲ್ದಾರರವರ ಆಫೀಸಿನ ಮುಂದೆ ಸತ್ಯಾಗ್ರಹ ಮಾಡಿವ ವಿಚಾರ ತಮಗೆ ಗೊತ್ತಿರಬಹುದು. ನಾಗ ಸಮುದ್ರದಲ್ಲಿ ಘಟನೆ ನಡೆದಿದೆ. ಅದು ಯಾವ ರೀತಿ ನಡೆಯಿತು ಎನ್ನುವುದರ ಬಗ್ಗೆ ಸರ್ಕಾರ ಅಧಿಕಾರಿ ಯನ್ನು ನೇಮಿಸಿ ಕಾರ್ಯಕ್ರಮ ಕೈಗೊಂಡಿದೆ. ಆದರೆ ಶ್ರೀ ಕಾಗೋಡು ತಿಮ್ಮಪ್ಪನವರೇ ಇದಕ್ಕೆ ನೇರವಾಗಿ ಸಂಬಂಧಿಸಿದ ವ್ಯಕ್ತಿ, ಇವರೇ ಕಾರಣವೆಂದು ಮಾನ್ಯ ಸ್ನೇಹಿತರು ಹಾಗೂ ಪತ್ರಿಕೆಗಳವರು ವರದಿ ಮಾಡಿದ್ದಾರೆ ಅದು ಸಂಪೂರ್ಣ ಸತ್ಯಕ್ಕೆ ದೂರವಾದುದೆಂದು ನಾನು ಹೇಳುತ್ತೇನೆ. ರೈತರ ಸಮೂಹ ಯಾವಾಗ ನಿರ್ಮಾಣವಾಯಿತೋ ಆಗಿನಿಂದಲೂ ರೈತರ ಸಮಸ್ಯೆ ಇವೆ. ಹಲವಾರು ಸರ್ಕಾರ

ಹಲವಾರು ಕಾರ್ಯಕ್ರಮ ಹಾಕಿಕೊಂಡಿದೆ. ಈಗಲೂ ಸರ್ಕಾರ ಇವರ ಬೇಡಿಕೆಗಳನ್ನು ಇತ್ಯರ್ಥ ಮಾಡಬೇಕೆಂದು. ಅಧಿಕಾರಿಗಳ ಮುಖಾಂತರ, ಶಾಸಕರ ಹಾಗೂ ಮಂತ್ರಿಗಳ ಮುಖಾಂತರ ಸಮಸ್ಯೆಗಳನ್ನು ತಿಳಿದುಕೊಂಡು ಸರ್ಕಾರ ಯಾವ ರೀತಿಯಲ್ಲಿ ಪರಿಹಾರ ಮಾಡಬಹುದೆಂಬುದನ್ನು ನೋಡುತ್ತಿದೆ. ಈ ಸಂದರ್ಭದಲ್ಲಿ ಕಾಗೋಡು ತಿಮ್ಮಪ್ಪನವರೇ ರೈತರ ದಮನ ಮಾಡಬೇಕು ಅಥವಾ ರೈತರ ಬೇಡಿಕೆ ಈಡೇರಿಸಬಾರದೆಂದು ಇದ್ದಾರೆಂದು ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾಯಿತು. ಭದ್ರಾವತಿಯಲ್ಲಿ ರೈತರು ಚಳುವಳಿ ಮಾಡುವಾಗ ಘೆರಾವು ಮಾಡಿದರು, ಗಂಟೆಗಟ್ಟಲೆ ನನ್ನನ್ನು ತೆಗೆದರು, ರಾಜೀನಾಮೆ ಕೊಡಿ ಎಂದರು. ಈ ವಿಷಯವನ್ನು ಹೇಳಿದಾಗ ನಿಜವಾಗಿಯೂ ಸಮಸ್ಯೆ ಇದೆಯೆಂಬುನ್ನು ಅವರು ಒಪ್ಪಿದರು. ಒಂದು ಗಂಟೆಯಲ್ಲಿಯೇ ಜಾದೂ ಮಾಡಿ ತೀರ್ಮಾನ ಮಾಡುವುದಕ್ಕೆ ಆಗುತ್ತದೆಯೇ. ತೀರ್ಮಾನ ಮಾಡುವುದಕ್ಕೆ ರೀತಿನೀತಿ ಇವೆ, ನೀವೆಲ್ಲಾ ಸೇರಿ ತೀರ್ಮಾನ ಮಾಡಿ ಬರವಣಿಗೆಯಲ್ಲಿ ಕೊಡಿ ಸರ್ಕಾರಕ್ಕೆ ಹೋಗೋಣ ರೈತ ಪ್ರಮುಖರೆಲ್ಲಾ ಬರಲಿ ಎಂದು ಹೇಳಿವೆ. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕವರೆಲ್ಲಾ ರೈತರೇ ಅವರೂ ಕೂಡಾ ಕಷ್ಟಸುಖ ಅನುಭವಿಸುವವರೇ ಹೊರತು ರೈತರ ದಮನ ಮಾಡಬೇಕೆಂದು. ಪೋಲೀಸಿನವರಿಂದ ಹೊಡೆಸಬೇಕೆನ್ನುವ ಅಭಿಪ್ರಾಯ ಅವರಲ್ಲಿ ಇರಲಿಲ್ಲ. ಆಕಸ್ಮಿಕವಾಗಿ ಘಟನೆ ನಡೆದಿದೆ. ಸಭೆ ಕರೆಯಬೇಕೆದಾಗ ಈ ಗ್ರಾಮದಲ್ಲಿ ಏಕೆ ಸಭೆ ಬೇಕೆಂದು ಅವರು ವ್ಯಕ್ತ ಮಾಡಿದರು. ಆದರೆ ಅವರ ಅನುಯಾಯಿಗಳು ಒಂದು ಸಭೆಯನ್ನು ಏರ್ಪಡಿಸಿ ಅವರ ತಿಳುವಳಿಕೆ ಬಾರದಹಾಗೆ ಕರಪತ್ರವನ್ನು ಹೊರಡಿಸಿರಬಹುದು. ೨೧ನೇ ತಾರೀಖು ಅವರು ಬೆಂಗಳೂರು ಬಿಟ್ಟರು. ನಾನು ಶಿವಮೊಗ್ಗದಿಂದ ಅವರ ಜೊತೆ ಟೆಲಿಫೋನ್‌ನಲ್ಲಿ ಮಾತನಾಡಿವೆ. ಕಾರ್ಯಕ್ರಮದ ಬಗ್ಗೆ ಕೇಳಲಾಗಿ, ಯಾರು ಹೇಳಿದ್ದು ನಾನು ಒಪ್ಪಿಲ್ಲವೆಂದು ಹೇಳಿದರು. ೨೧ನೇ ತಾರೀಖು ಅವರು ರಾತ್ರಿ ಶಿವಮೊಗ್ಗ ಬಿಟ್ಟು ೫ ಗಂಟೆಗೆ ಕಾರ್ಯವಾರಕ್ಕೆ ಹೋದರು. ಹೋದವರು ೨೨ನೇ ತಾರೀಖು ಬೆಳಿಗ್ಗೆ ಬಂದರು. ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆಂದು ಅವರು ಕೇಳಿದರು. ತಕ್ಷಣ ಟೆಲಿಫೋನ್ ಮಾಡಿ ಭದ್ರಾವತಿಗೆ, ಮಂತ್ರಿಗಳು ಬರುವುದಿಲ್ಲ, ಯಾರು ಕಾರ್ಯಕ್ರಮ ಏರ್ಪಡಿಸಿದ್ದು ಎಂದು ಕೇಳಿದ್ದಕ್ಕೆ ನಮಗ ಗೊತ್ತಿಲ್ಲ ನಮಗೆ ಗೊತ್ತಿಲ್ಲವೆಂದು ಹೇಳಿದರು. ಯಾರೋ ಕರಪತ್ರ ಏರ್ಪಡಿಸಿದ್ದುಂಟು. ಪೋಲೀಸರು ಯಾಕೆ ಹೋದರು ಎಂಬುದನ್ನು ವಿಚಾರ ಮಾಡಬೇಕು. ಸರ್ಕಾರ ಈ ಬಗ್ಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದೆ. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲಿ. ಅದಕ್ಕೆ ವಿರೋಧ ಇಲ್ಲ. ರೈತರ ಸಂಘಟನೆಗೆ ಕಾಗೋಡು ತಿಮ್ಮಪ್ಪನವರು ವಿರೋಧಿ ಎನ್ನುವುದು ಸತ್ಯಕ್ಕೆ ದೂರವಾದ ವಿಷಯ. ಶ್ರೀನಿವಾಸ ಅವರು ಕೂಡ ೨೫ನೇ ತಾರೀಖು ಹೈಪವರ್ ಕಮಿಟಿ ವಿಷಯವಾಗಿ ಅವರ ಜೊತೆ ಇದ್ದ ವಿಷಯವನ್ನು ಹೇಳಿದ್ದಾರೆ. ೨೫ನೇ ತಾರೀಖು ನಾನೂ ಕೂಡಾ ಅವರ ಜೊತೆಯಲ್ಲಿ ಇದ್ದೆ. ನನ್ನ ಕ್ಷೇತ್ರದ ಹಲವಾರು ಕಾರ್ಯಕ್ರಮಗಳ ಬಗ್ಗೆ ಅವರ ಜೊತೆ ಪ್ರಸ್ತಾಪಿಸಿದೆ. ಕೆಲವು ಪತ್ರಿಕೆಗಳಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು 'ಭದ್ರಾವತಿಯಲ್ಲಿ ಕುಳಿತಿದ್ದರು, ಶಿವಮೊಗ್ಗದಲ್ಲಿ ಕುಳಿತಿದ್ದರು' ಎಂದು ಪ್ರಕಟಣೆಗಳು ಬಂದಿವೆ. ಇದು ಸತ್ಯಕ್ಕೆ ದೂರವಾದುದು. ಇದು ಏತಕ್ಕಾಯಿತು ? ಇದಕ್ಕೆ ಹಲವಾರು ಕಾರಣಗಳು ಇರಬಹುದು. ಮಾನ್ಯ ಕಾಗೋಡರು ಇದಕ್ಕೆ ನೇರವಾಗಿ ಸಂಬಂಧಪಟ್ಟವರು ಎನ್ನುಹ ವಿಷಯ ಸತ್ಯಕ್ಕೆ ದೂರವಾದುದು. ಅವರನ್ನು ಈ ಒಂದು ಘಟನೆಗೆ ಉಪಯೋಗಿಸಿಕೊಂಡು ತೇಜೋವಧೆ ಮಾಡುವುದು ಸೂಕ್ತವಲ್ಲವೆಂದು ನಾನು ಹೇಳಿ ರೈತರ ಸಮಸ್ಯೆಗಳ ಬಗ್ಗೆ ಮಾನ್ಯ ವಿರೋಧ ಪಕ್ಷದವರು ಹೇಳಿದ್ದಾರೆ ಆ ಬಗ್ಗೆ ಸ್ಥಿರವಾದ ಪರಿಹಾರ ಕಂಡುಹಿಡಿಯಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ)—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಾಗಸಮುದ್ರದಲ್ಲಿ ನಡೆದ ಘಟನೆ ಬಗ್ಗೆ ನಿಯಮ ೩೧೨ರ ಕೆಳಗೆ ಚರ್ಚೆ ಮಾಡುವುದಕ್ಕೆ ತಾವು ಏನು ಅನುಮತಿ ಕೊಟ್ಟಿದ್ದೀರಿ ಇದರಲ್ಲಿ ಸುಮಾರು ಸದನದ ಎಲ್ಲ ಕಡೆಯ ಜನ ಸ್ನೇಹಿತರು ಏನು ಮಾತನಾಡಿದ್ದಾರೆ, ಎಲ್ಲರ ಅಭಿಪ್ರಾಯ ಈ ಒಂದು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ವಿಚಾರಣೆ ಆಗಬೇಕೆಂದು ಹೇಳಿದ್ದಾರೆ. ಮಾನ್ಯ ಶ್ರೀನಿವಾಸ್ ಅವರು ಸ್ಥಳಕ್ಕೆ ಭೇಟಿ ನೀಡಿ ರೈತ ಸಂಘದ ಮುಖಂಡರನ್ನು ಭೇಟಿ ಮಾಡಿದ್ದಾರೆ. ರೈತರನ್ನು ಭೇಟಿ ಮಾಡಿದ್ದಾರೆ. ಅವರು ಅಲ್ಲಿ ತಾವು ಪಡೆದ ಮಾಹಿತಿಯನ್ನು ಸಭೆಯ ಮುಂದೆ ಚಿತ್ರಿಸಿದ್ದಾರೆ. ಅವರು ಅವರ ಮಾತನ್ನು ಮುಗಿಸುವುದಕ್ಕಿಂತ ಮುಂಚೆ. ರೈತರಿಗೆ ತೃಪ್ತಿ ತರತಕ್ಕ ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕೆಂದು ಹೇಳಿದ್ದಾರೆ. ಮಾನ್ಯ ಮಿತ್ರರಾದ ರಾಜಶೇಖರರವರೂ ಕೂಡ ಶ್ರೀಮಾನ್ ತಿಮ್ಮಪ್ಪನವರು ಆ ದಿನ ಸಭೆಗೆ ಹೋಗುವುದಿಲ್ಲವೆನ್ನುವುದು ಗೊತ್ತಿದ್ದರೂಕೂಡ

ಪೋಲೀಸಿನವರು ಯಾಕೆ ಹೋದರು ಎನ್ನುವ ಬಗ್ಗೆ ವಿಚಾರಣೆಯಾಗಬೇಕೆಂದು ಹೇಳಿದ್ದಾರೆ. ಬಹುಶಃ ಅವರು ತಿಮ್ಮಪ್ಪನವರ ಮೇಲೆ ರಾಜಕೀಯ ಮಾಡುತ್ತಿದ್ದಾರೆಂದು ಯಾರೂ ಹೇಳುವುದಕ್ಕೆ ಸಿದ್ಧರಿಲ್ಲ. ಶ್ರೀ ಬಸವಣ್ಣನವರು ಏನಾದರೂ ಹೇಳಿದರೆ ಅದರಲ್ಲಿ ರಾಜಕೀಯ ಇದೆಯೆಂದು ಭಾವಿಸಬಹುದು. ಶ್ರೀ ತಿಮ್ಮಪ್ಪನವರಿಗೂ, ರಾಜಶೇಖರ್‌ರವರ ಬಗ್ಗೆ ಯಾವುದೇ ವಿರಸ ಇಲ್ಲ. ಮತ್ತು ಶ್ರೀನಿವಾಸ್ ಅವರು ಹೇಳಿದ ಮಾತಿನಲ್ಲಿ ಕೂಡಾ ಯಾವುದೇ ವಿರಸ ಇಲ್ಲವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ರೈತರ ಸಮಸ್ಯೆ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ರೈತರ ಸಮಸ್ಯೆಗಳ ಬಗ್ಗೆ ಬೇರೊಂದು ಕಾಲವನ್ನು ತೆಗೆದುಕೊಂಡು ಚರ್ಚೆ ಮಾಡೋಣ. ೩೧೨ರ ವಿಧಿ ಕೆಳಗೆ ರೈತರ ಸಮಸ್ಯೆ ಚರ್ಚೆ ಮಾಡಿ ಪರಿಹಾರ ಹುಡುಕಲಿಕ್ಕೆ ಸಾಧ್ಯವಿಲ್ಲ. ನಮ್ಮ ಮುಂದೆ ಇರತಕ್ಕ ವಿಷಯ ಐ.ಪಿ.ಸಿ.ಗೆ ಸೀಮಿತವಾದಂತ ಘಟನೆಗೆ ಸಂಬಂಧಪಟ್ಟದ್ದು. ೮೫ ಕೋಟಿ ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೋ, ತೆಗೆದುಕೊಂಡಿದ್ದಾರೋ ಇಲ್ಲವೋ; ಸರ್ಕಾರದ ಆಶ್ವಾಸನೆ ಈಡೇರಿದೆಯೋ ಇಲ್ಲವೋ ಎನ್ನುವುದನ್ನು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾಗಸಮುದ್ರದ ಪ್ರಕರಣದಲ್ಲಿ ಮೂರು ಜನ ನಿರಪರಾಧಿಗಳು ನಿರ್ದೋಷಿಗಳು ಅಪ್ರೋಚ್ಯ ಪೋಲೀಸಿನವರ ಗುಂಡಿಗೆ ತುತ್ತಾಗಿದ್ದಾರೆ. ಇದರ ಬಗ್ಗೆ ವಿಚಾರಣೆ ಆಗಬೇಕೇ ಬೇಡವೇ ಎನ್ನುವುದೇ ಪ್ರಶ್ನೆ. ಬಹುಶಃ ಪಕ್ಷಾತೀತವಾಗಿ ಮಾತನಾಡುವುದಾದರೆ, ನನಗೆ ಇರತಕ್ಕ ಅಲ್ಪ ಅನುಭವದಿಂದ ಈ ಮಾತನ್ನು ಹೇಳುವುದಾದರೆ, ಯಾವುದೇ ಸಂದರ್ಭದಲ್ಲಿ ಪೊಲೀಸರ ಗೋಳಿಬಾರು ನಡೆದಂತ ಸಂದರ್ಭದಲ್ಲಿ ಅಸುನೀಗಿದವರ ಬಗ್ಗೆ ವಿಚಾರಣೆಯಾಗಬೇಕೆಂಬುದರ ಬಗ್ಗೆ ೨೨೪ ಜನ ಸದಸ್ಯರೂ ಕೂಡ ಬೇರೆ ಅಭಿಪ್ರಾಯಕ್ಕೆ ಬರಲಿಕ್ಕೆ ಸಾಧ್ಯವಿಲ್ಲ ಎನುವ ಮಾತನ್ನು ಹೇಳುತ್ತೇನೆ. ಪಕ್ಷದ ರಾಜಕಾರಣದಲ್ಲಿ ಮಾತನಾಡತಕ್ಕ ವಿಷಯ ಬೇರೆ. ಪೋಲೀಸರ ಗೋಳಿಬಾರಿಗೆ ತುತ್ತಾಗಿ ಅಸುನೀಗಿದ ಪ್ರಕರಣದಲ್ಲಿ ವಿಚಾರಣೆಯಾಗಬೇಕೆಂದು ಕೇಳುವುದರಲ್ಲಿ ರಾಜಕೀಯ ಇದೆ ಎಂದು ಭಾವಿಸುವುದಾದರೆ, ಬಹುಶಃ ನಾನು ಅದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಯಾರೂ ಕೂಡ ಆ ಒಂದು ಅಭಿಪ್ರಾಯಕ್ಕೆ ಬರಲಿಕ್ಕೆ ಸಾಧ್ಯವಿಲ್ಲ ಎಂದು ಭಾವಿಸಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರಾದವರೇ ನಾವು ನಿನ್ನೆದಿನ ಈ ಸಭೆಯಲ್ಲಿ ಈ ವಿಷಯವನ್ನು ನಿಲುವಳಿ ಸೂಚನೆ ಆಧಾರದ ಮೇಲೆ ಚರ್ಚೆಗೆ ಅನುಮತಿ ಕೊಡಬೇಕೆಂದು ಕೇಳಿದಾಗ ಇದು ಲಾ ಅಂಡ್ ಆರ್ಡರ್ ಪ್ರಶ್ನೆ ಇದೆ, ನಿಲುವಳಿ ಸೂಚನೆ ರೂಪದಲ್ಲಿ ಬೇಡ ಎಂದು ಹಲವಾರು ರೂಲಿಂಗ್ ಕೊಟ್ಟಿರುವುದನ್ನು ತಾವು ಹೇಳಿದಿರಿ, ಅದಕ್ಕೆ ತಮ್ಮ ಅನುಮತಿ ಕೊಡುವುದನ್ನು ತಡೆಹಿಡಿದಿರಿ. ಈ ವಿಷಯವನ್ನು ೩೧೨ರ ಕೆಳಗೆ ಚರ್ಚೆ ಮಾಡೋಣವೆಂದು ಹೇಳಿದಿರಿ. ಸಭೆಯ ಮುಂದೆ ಇರತಕ್ಕ ವಿಷಯ ಬಹಳ ಪ್ರಾಮುಖ್ಯವಾದುದು; ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದಲೂ ರೈತರ ಚಳುವಳಿ ಯಾವುದೇ ಆತಂಕವಿಲ್ಲದೇ ನಡೆದುಕೊಂಡು ಹೋಗುತ್ತಿದೆ. ಅದಕ್ಕೆ ಪ್ರೇರಕಶಕ್ತಿಯಾಗಿ ನರಗುಂದ ಇರಬಹುದು, ನವಿಲುಗುಂದ ಇರಬಹುದು. ಇದನ್ನು ನಿಲ್ಲಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನ ನಡೆಸಿದೆಯೆಂದು ಮಾನ್ಯ ಶ್ರೀನಿವಾಸ್ ಅವರು ಹೇಳಿದರು. ಅಲ್ಲದೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕೂಡ ಹೋಗಿ ಅವರ ಚರ್ಚೆಯೂ ಕೂಡ ಫಲಪ್ರದವಾಗುವಂತ ಸನ್ನಿವೇಶಕ್ಕೆ ಬಂದಿತ್ತು ಎನ್ನುವುದನ್ನು ಕೂಡ ತಾವು ಹೇಳಿದ್ದೀರಿ. ಇದಾದಮೇಲೆ ೨೫ನೇ ತಾರೀಖು ಸಭೆ ನಡೆಸುವುದರ ಬಗ್ಗೆ ಪ್ರಚೋದನೆ ಯಾರಿಂದಲೋ ಆಗಿದೆ. ಮುಂಗೋಟಿ ಗ್ರಾಮದಲ್ಲಿ ಸಭೆ ನಡೆದಿರುವುದಕ್ಕೂ ತಿಮ್ಮಪ್ಪನವರಿಗೂ ಯಾವುದೇ ಸಂಬಂಧವಿಲ್ಲವೆಂದು ಮಾನ್ಯ ರಾಜಶೇಖರ್‌ರವರು ಹೇಳಿದ್ದಾರೆ. ತಿಮ್ಮಪ್ಪನವರು ಈ ಮಾತನ್ನು ಹೇಳಲಿಲ್ಲ. ರೈತರ ಚಳುವಳಿ ವ್ಯಾಪಕವಾದ ಸನ್ನಿವೇಶದಲ್ಲಿ ನಿಮ್ಮ ಪಕ್ಷದ ಕಾರ್ಯಕರ್ತರು ಸರ್ಕಾರ ಮಾಡಿರತಕ್ಕಂಥ ಅಂದರೆ ರೈತರಿಗಾಗಿ ಉಪಯುಕ್ತವಾದ ನಿರ್ಣಯಗಳನ್ನು ಏನು ತೆಗೆದುಕೊಂಡಿದೆ ಅವನ್ನು ರೈತರಿಗೆ ತಿಳಿಸುವುದರಲ್ಲಿ ವಿಫಲರಾಗಿದ್ದಾರೆಂದೂ, ಇದರ ಬಗ್ಗೆ ಭದ್ರಾವತಿಯಲ್ಲಿ ಮಿಲ್ ಮಾಲೀಕರೊಬ್ಬರ ಮನೆಯಲ್ಲಿ ಸಭೆ ಸೇರಿ ಕಾರ್ಯಕರ್ತರಿಗೆ ಸೂಚನೆ ಕೊಟ್ಟಿದ್ದಾರೆಂದು ವಿಚಾರ ಬಂದಿರುವುದನ್ನು ನಾವುಗಳು ಈ ಸದನದಲ್ಲಿ ಕೇಳಿದ್ದೇವೆ. ೨೫ನೇ ತಾರೀಖು ಸಭೆ ನಡೆಸತಕ್ಕಂಥಾದ್ದು ಅವಶ್ಯಕತೆ ಇತ್ತೇ ಇಲ್ಲವೇ ಎಂಬುದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ವೆಂಕಟೇಶ್ ಅವರು ಸರ್ಕಾರದ ಪ್ರತಿನಿಧಿಯಾಗಿ ರೈತರನ್ನು ಭೇಟಿ ಮಾಡಿ, ಅವರ ಸಮಸ್ಯೆಗಳನ್ನು ಅರಿತು ಸಮಾಧಾನಕರವಾಗಿ ಬಗೆಹರಿಸತಕ್ಕಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದರ ಹಿನ್ನೆಲೆಯಲ್ಲಿ ಕೇಳಬೇಕಾಗುತ್ತೆ; ೨೫ನೇ ತಾರೀಖು ಸಭೆ ಆಗಬೇಕಾಗಿದ್ದು ಉಚಿತವೇ ಅನುಚಿತವೇ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಅದಕ್ಕೆ ಏನೋ ಒಂದು ಪ್ರೇರಕಶಕ್ತಿ ಇರಬೇಕು. ಯಾರು ಎಂಬುದನ್ನು ನೇರವಾಗಿ ಹೇಳುವುದು ಕಷ್ಟ. ನಾನು ಸ್ಥಳಕ್ಕೆ ಹೋಗಿಲ್ಲ. ವಿಷಯಗಳನ್ನು ಸಂಗ್ರಹಣೆ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಮಾನ್ಯ ಲಕ್ಷ್ಮೀಸಾಗರ್

ಅವರು ಮತ್ತು ಜೆ. ಹೆಚ್. ಪಟೇಲರವರು ಹೋಗಿ ವಿಷಯಗಳ ಸಂಗ್ರಹಣೆ ಮಾಡಿಕೊಂಡು ಬಂದಿದ್ದಾರೆ. ಬಸವಣ್ಣಪ್ಪನವರು ಅದೇ ಭಾಗದವರು, ರಾಜಶೇಖರ್‌ರವರು ಹೋಗಿದ್ದಾರೆ. ಅವರುಗಳು ಹೇಳಿದಂತೆ ಪ್ರತಿಯೊಂದು ಮಾತುಗಳನ್ನು ಅರ್ಥಮಾಡಿಕೊಳ್ಳುವುದಾದರೆ, ೨೫ನೇ ತಾರೀಖಿನ ಘಟನೆಗೆ ಕಾಗೋಡು ತಿಮ್ಮಪ್ಪನವರು ಜವಾಬ್ದಾರರಲ್ಲ. ಹಾಗಾದರೆ, ಕೆಲವು ಶಕ್ತಿಗಳು, ಕೆಲವು ಜನರು ಸೇರಿ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಬಹುಶಃ ಈ ಅಭಿಪ್ರಾಯವನ್ನು ತಳ್ಳಿಹಾಕುವುದಕ್ಕೆ ಸಾಧ್ಯವಿಲ್ಲ. ಈ ಒಂದು ಶಕ್ತಿ ಯಾವುದು ಎಂದು ತಿಳಿದುಕೊಳ್ಳಬೇಕಿಲ್ಲ. ಈ ಸಮಸ್ಯೆ ಇಷ್ಟಕ್ಕೆ ನಿಲ್ಲುವುದಿಲ್ಲ. ೨೪ನೇ ತಾರೀಖು ಮಾನ್ಯ ಕಾಗೋಡು ತಿಮ್ಮಪ್ಪನವರು ಜಿಲ್ಲಾ ಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೆ ಮತ್ತು ಪೋಲೀಸ್ ಅಧಿಕಾರಿಗಳಿಗೆ ದೂರವಾಣಿ ಮೂಲಕ ಈ ಕಾರ್ಯಕ್ರಮಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ; ಇದು ಸತ್ಯ. ಇದನ್ನು ಅಲ್ಲಗಳೆಯುವುದಕ್ಕೆ ಹೋಗಿಲ್ಲ. ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಈ ಮಾತನ್ನು ಹೇಳಿದ್ದಾರೆ. ದೂರವಾಣಿ ಮೂಲಕ ತಿಳಿಸಿದ್ದೀರಿ. ನಮ್ಮ ಹಾಗೆ ಆ ಕ್ಷೇತ್ರದಿಂದ ಮಾನ್ಯ ಬಸವಣ್ಣಪ್ಪನವರು ಗೆದ್ದು ಬಂದಿದ್ದಾರೆ, ಅವರು ಕೂಡ ನೇರವಾಗಿ ಆಪಾದನೆ ಮಾಡಿದ್ದಾರೆ ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ನಮಗೆ ಯಾವ ರೀತಿ ಜನತೆ ಬೆಂಬಲ ಕೊಟ್ಟು ಕಳುಹಿಸಿದ್ದಾರೋ; ಅವರಿಗೂ ಕೂಡ ಅದೇ ರೀತಿ ಜನತೆ ಬೆಂಬಲ ಕೊಟ್ಟು ಕಳುಹಿಸಿದ್ದಾರೆ. ಈ ಒಂದು ವಿಷಯ ಕೂಡ ಪ್ರಾಮುಖ್ಯವಾದುದು. ಮಾನ್ಯ ಕಾಗೋಡು ತಿಮ್ಮಪ್ಪನವರು ೨೫ನೇ ತಾರೀಖಿನ ಸಭೆ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದ ಮೇಲೆ ೨೦ ಜನ ಪೋಲೀಸಿನವರ ಸಿಬ್ಬಂದಿಯನ್ನು ನಾಗಸಮುದ್ರ ಗ್ರಾಮಕ್ಕೆ ಕಳುಹಿಸತಕ್ಕಂಥ ಅವಶ್ಯಕತೆ ಏನಿತ್ತು ಎನ್ನುವಂತ ಪ್ರಶ್ನೆ ಉದ್ಭವವಾಗುತ್ತದೆ. ಮುಂಗೋಟಿ ಗ್ರಾಮದಲ್ಲಿ ಸಭೆ ಇಲ್ಲ ಎಂದು ಜಾಹಿರಾತು ಆಗಿದ್ದರೂ ಕೂಡ ೨೦ ಜನ ಶಸ್ತ್ರ ಸಜ್ಜಿತ ಪೋಲೀಸ್ ಸಿಬ್ಬಂದಿಯನ್ನು ಕಳುಹಿಸತಕ್ಕಂಥ ಔಚಿತ್ಯ ಏನಿತ್ತು? ಇದರ ಬಗ್ಗೆ ತನಿಖೆಯಾಗಬೇಕಾಗುತ್ತೆ. ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ರಾಜ್ಯದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಪೋಲೀಸಿನವರ ಸಹಾಯ ಇಲ್ಲದೇ ರಾಜ್ಯದ ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ. ಪೋಲೀಸಿನವರ ಪ್ರಶ್ನೆ ಏಕೆ, ಸರ್ಕಾರದಲ್ಲಿರುವ ಎಲ್ಲ ಸಿಬ್ಬಂದಿಗಳ ಸಹಕಾರ ಇಲ್ಲದೇ ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ, ಎಲ್ಲರ ಸಹಕಾರ ಬೇಕು. ಸರ್ಕಾರದ ಆಡಳಿತ ಯಂತ್ರವನ್ನು ನಡೆಸಿಕೊಂಡು ಹೋಗತಕ್ಕಂಥ ಸನ್ನಿವೇಶದಲ್ಲಿ ಎಲ್ಲರ ಸಹಕಾರವೂ ಬೇಕಾಗುತ್ತದೆ. ಇಲ್ಲಿ ಮಂತ್ರಿಯವರೇ ಈ ಸಭೆಗೆ ಹೋಗುವುದಿಲ್ಲವೆಂದು ಒಂದು ದಿನ ಮುಂಚಿತವಾಗಿ ತಮ್ಮ ಅಭಿಪ್ರಾಯವನ್ನು ಸೂಚಿಸಿದರೂ ೨೦ ಜನ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಹೋಗತಕ್ಕಂಥ ಔಚಿತ್ಯ ಏನು? ಇದರ ಬಗ್ಗೆ ತನಿಖೆಯಾಗಬೇಕೆಂಬುದನ್ನು ಬಹುಶಃ ತಿಮ್ಮಪ್ಪನವರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಪೋಲೀಸ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡುವಂತ ಸಂದರ್ಭದಲ್ಲಿ ಸರಿಯಾಗಿ ವರ್ತಿಸಿಲ್ಲ ಎನ್ನುವುದು ಇದರಿಂದ ದೃಢವಾಗುತ್ತದೆ — ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ೨೫ನೇ ತಾರೀಖು ನಾಗಸಮುದ್ರ ಗ್ರಾಮದಲ್ಲಿ ರೈತರ ಸಂಘದ ಪರವಾಗಿ ಮಂತ್ರಿಗಳಿಗೆ ಮತ್ತು ಶಾಸಕರಿಗೆ ತಮ್ಮ ಅಸಮಾಧಾನ ಮತ್ತು ಅತೃಪ್ತಿಯನ್ನು ವ್ಯಕ್ತಪಡಿಸಬೇಕೆಂದು ಕರೆಕೊಟ್ಟಂತ ಸನ್ನಿವೇಶದಲ್ಲಿ ರೈತರ ಸಮಸ್ಯೆ ಬಗ್ಗೆ ಮಾತ್ರವೇ ಅಲ್ಲ ಗೋಕಾಕ್ ಸಮಿತಿ ಬಗ್ಗೆ ಕೂಡ ಹೇಳಿದ್ದಾರೆ. ಮಂತ್ರಿಗಳು ಮತ್ತು ಶಾಸಕರು ನಮ್ಮ ಮನಸ್ಸಿಗೆ ತೃಪ್ತಿಯಾಗುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವುದಕ್ಕೋಸ್ಕರ ನಾಗಸಮುದ್ರ ಮತ್ತು ಮುಂಗೋಟಿ ಗ್ರಾಮದಲ್ಲಿ ಸೇರುವುದಕ್ಕಾಗಿ ಪೂರ್ವಭಾವಿಯಾಗಿಯೋ ನಿರ್ಣಯ ಮಾಡಿದ್ದರು. ನಾನು ಆ ಎರಡು ಗ್ರಾಮಗಳನ್ನು ನೋಡಿಲ್ಲ. ಮುಂಗೋಟಿ ಗ್ರಾಮಕ್ಕೆ ಹೋಗಿದ್ದ ನಾಗಸಮುದ್ರ ನೋಡಿರಬಹುದು ಅಥವಾ ಮರೆತಿರಬಹುದು, ಅಲ್ಲಿಗೆ ದೂರ ಎಷ್ಟು ಆಗುತ್ತದೆ ಎನ್ನುವುದನ್ನು ಮಾನ್ಯ ಜೆ. ಎಚ್. ಪಟೇಲರು ತಿಳಿಸಬೇಕು.

ಶ್ರೀ ಜೆ. ಎಚ್. ಪಟೇಲ್.—ಮೂರು ಗ್ರಾಮಗಳ ಅಂತರ ಒಂದೂವರೆ ಕಿಲೋಮೀಟರ್ ದೂರ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.-- ಮುಂಗೋಟಿ ಗ್ರಾಮದಲ್ಲಿ ಸಭೆ ಇಲ್ಲ ಎಂದ ಗೊತ್ತಾದ ಮೇಲೆ ನಾಗಸಮುದ್ರ ಗ್ರಾಮಕ್ಕೆ ಹೋಗಬೇಕಾದ ಔಚಿತ್ಯ ಏನಿತ್ತು. ಪೋಲೀಸ್ ಅಧಿಕಾರಿಗಳಿಗೆ ಅಲ್ಲಿ ಯಾವುದಾದರೂ ಒಂದು ಶಕ್ತಿ ಇರಲೇಬೇಕು. ನೀವು ಅಲ್ಲಿ ಹೋಗಿ, ಅಲ್ಲಿ ರೈತರು ಸೇರಿರುತ್ತಾರೆ. ಅವರು ಸೇರತಕ್ಕ ಉದ್ದೇಶ, ಶಾಸಕರಿಗೆ, ಮಂತ್ರಿಗಳಿಗೆ ಘೇರಾವೋ ಮಾಡಬೇಕೆಂದು ಸೇರಿದ್ದಾರೆ ಅವರನ್ನು ಬಗ್ಗುಬಡಿಯಬೇಕು ಎಂದು ಹೇಳುವಂಥ ಶಕ್ತಿ ಅವರಿಗೆ ಇದೆ. ಇಲ್ಲದಿದ್ದರೆ ಅವರು ೨೦ ಜನ

ಹೋಗಲಿಕ್ಕೆ ಸಾಧ್ಯವಿರಲಿಲ್ಲ. ಬಹುಶಃ ಮಂತ್ರಿಗಳು ಹೋಗದೇ ಇರತಕ್ಕ ಸಭೆಗಳಿಗೆ ಸಾಮಾನ್ಯವಾಗಿ ಒಬ್ಬ ಪೋಲೀಸ್ ಪೇದೆ ಹೋದರೆ ಬಹಳ ಪುಣ್ಯ. ಅದರಲ್ಲೂ ಯಾರಾದರೂ ವಿರೋಧ ಪಕ್ಷದ ಮುಖಂಡರು ಹೋದರೆ ಎರಡು ಜನ ಪೋಲೀಸರು ಹೆಚ್ಚು ಬರಬಹುದು. ಇದು ನಮ್ಮ ನಿಮ್ಮ ಅನುಭವ. ಅಲ್ಲಿ ಯಾರು ಮಂತ್ರಿಗಳು ಇಲ್ಲ. 20 ಜನ ಪೋಲೀಸ್ ಅಧಿಕಾರಿಗಳು ಸರ್ವ ಸುಸಜ್ಜಿತವಾದಂಥ ಆಧುನಿಕ ರೀತಿಯ ಯಂತ್ರೋಪಕರಣಗಳನ್ನು ವ್ಯಾನ್‌ನಲ್ಲಿ ತೆಗೆದುಕೊಂಡು ಹೋಗಿದ್ದಾರೆ. ಇವರೇನು ರೈತರಿಗೆ ರಕ್ಷಣೆ ಕೊಡಲಿಕ್ಕೆ ಹೋದವರಲ್ಲ. ಅದನ್ನು ರಾಜಶೇಖರಪ್ಪನವರು ಒಪ್ಪಿದ್ದಾರೆ. ಇವರು ಅಲ್ಲಿ ಏತಕ್ಕೆ ಹೋದರು ? ನಾಗಸಮುದ್ರ ಗ್ರಾಮದಿಂದ ಮುಂಗೋಟಿ ಗ್ರಾಮಕ್ಕೆ ದಂಡೆತ್ತಿ ಬರುತ್ತೇವೆಂದು ಏನಾದರೂ ಹೇಳಿದ್ದರಾ ? ಇವರು ಏತಕ್ಕೆ ಹೋಗಿದ್ದರು ? ಇದರ ಬಗ್ಗೆ ವಿಚಾರಣೆ ಆಗುವುದು ಬೇಡ ಅಂದರೆ ಆತ್ಮ ವಂಚನೆ ಮಾಡಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಕಾಗೋಡು ತಿಮ್ಮಪ್ಪನವರು ಬೇಡ ಅಂಥ ಹೇಳಲಿಕ್ಕೆ ಸಾಧ್ಯವಿಲ್ಲ, ಸರ್ಕಾರ ಕೂಡ ಬೇಡ ಅಂಥ ಹೇಳಲಿಕ್ಕೆ ಸಾಧ್ಯವಿಲ್ಲ. ಮತ್ತೊಂದು ಮುಖ್ಯ ವಿಷಯ ಹೇಳಬೇಕೆಂದರೆ ಕೊಲೆ ಮಾಡಿಸತಕ್ಕ ಸಂಚು ನಡೆದಿದೆ ಎನ್ನುವ ಆಪಾದನೆಯನ್ನು ರೈತರು ಮಾಡಿದ್ದಾರೆ. ಅದೇ ರೀತಿಯಲ್ಲಿ ಸಚಿವರು ಕೂಡ ನನ್ನ ಪ್ರಾಣಕ್ಕೆ ಸಂಚು ತರತಕ್ಕ ರೀತಿಯಲ್ಲಿ ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಒಂದು ಕಡೆ ಹೆಚ್.ಎಸ್. ರುದ್ರಪ್ಪನವರು ಆಪಾದನೆ ಮಾಡಿದ್ದಾರೆ, ಮತ್ತೊಂದು ಕಡೆ ಮಾನ್ಯ ಸಚಿವ ಕಾಗೋಡು ತಿಮ್ಮಪ್ಪನವರು ಆಪಾದನೆ ಮಾಡಿದ್ದಾರೆ. ಆರೋಪ, ಪ್ರತ್ಯಾರೋಪ ಎರಡು ಇದೆ. ಇದು ಸ್ಥಳೀಯ ಪತ್ರಿಕೆಯಾದ ಪ್ರಜಾವಾಣಿ ಪತ್ರಿಕೆಯಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಬಂದಿದೆ ಅದನ್ನು ನಾವೆಲ್ಲಾ ಓದಿದ್ದೇವೆ. ಒಂದು ವೇಳೆ ಮಾನ್ಯ ಮಂತ್ರಿಗಳ ಮೇಲೆ ಮಾಡಿರತಕ್ಕ ಆಪಾದನೆ ಸತ್ಯಕ್ಕೆ ದೂರವಾದದ್ದಾಗಿದ್ದರೆ ಹೆಚ್. ಎಸ್. ರುದ್ರಪ್ಪನವರು ಚಳುವಳಿಯ ಮುಖಂಡತ್ವ ವಹಿಸುವುದಕ್ಕೆ ಅಶಕ್ತರಾಗುತ್ತಾರೆ. ಏಕೆಂದರೆ ಅವರು ಬಹಳ ಜವಾಬ್ದಾರಿ ಮನುಷ್ಯರು. ಇವತ್ತು ಒಬ್ಬ ಮಂತ್ರಿ ನನ್ನ ಕೊಲೆ ಸಂಚು ನಡೆದಿದೆ ಎಂದು ಹೇಳಬೇಕಾದರೆ ಅದು ವಿಚಾರಣೆಯಾಗಬೇಕು ಅದು ನ್ಯಾಯಾಂಗ ವಿಚಾರಣೆಯಿಂದ ಸಾಬೀತು ಆದರೆ ಅಂತಹವರ ಮುಖಂಡತ್ವ ಒಪ್ಪಿಕೊಳ್ಳುವುದಕ್ಕೆ ಯಾವ ರೈತರು ತಯಾರಿರುವುದಿಲ್ಲ. ಆದೇ ರೀತಿಯಲ್ಲಿ ರೈತರು ಹೇಳಿರತಕ್ಕದ್ದು ನ್ಯಾಯಾಂಗ ವಿಚಾರಣೆಯಾಗಬೇಕು ಇವೊತ್ತು ಮಾನ್ಯ ಮಂತ್ರಿಗಳಿಗೆ ಹಲವಾರು ಮಾಹಿತಿಗಳನ್ನು ಸಂಗ್ರಹ ಮಾಡಲಿಕ್ಕೆ ಯಂತ್ರ ಇದೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಕಳುಹಿಸಬಹುದು ಎಸ್.ಪಿ. ಹೇಳಿರಬಹುದು. ಪಕ್ಷದ ಕಾರ್ಯಕರ್ತರು ಹೇಳಿರಬಹುದು. ಅದೇ ರೀತಿ ರೈತ ಸಮುದಾಯ, ರೈತ ಸಂಘದ ಕೆಲವು ಪ್ರತಿನಿಧಿಗಳು ತಮ್ಮ ಕೊಲೆ ಸಂಚು ಮಾಡಿದ್ದಾರೆಂದು ಏನು ಹೇಳಿದ್ದಾರೆ ಅವರ ಹತ್ತಿರ ಕೂಡ ಸಾಕಷ್ಟು ಮಾಹಿತಿ ಇರಬಹುದು, ತೀರ್ಮಾನ ಕೊಡತಕ್ಕವರು ನಾವಲ್ಲ. ಇದರ ಬಗ್ಗೆ ನಿಷ್ಪಕ್ಷಪಾತವಾದಂಥ ವಿಚಾರಣೆಯಾಗಬೇಕು. ಈ ಮಾತನ್ನು ಮಾನ್ಯ ಸ್ನೇಹಿತರಾದಂಥ ಶ್ರೀನಿವಾಸ್ ಅವರು ಹೇಳಿದ್ದಾರೆ. ರೈತ ಸಮುದಾಯಕ್ಕೆ ತೃಪ್ತಿಯಾಗುವಂಥ ವಿಚಾರಣೆಯಾಗಬೇಕೆಂದು ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದಾರೆ. ರೈತ ಸಮುದಾಯದ, ಸಂಘದ ಪ್ರತಿನಿಧಿಗಳು ನಮಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ಹೇಳಿದ್ದಾರೆ. ಇದು ನಾವು ಕೇಳತಕ್ಕ ಪ್ರಶ್ನೆಯಲ್ಲ, ಅದನ್ನು ತಾವು ಒಪ್ಪುತ್ತೀರಾ ?

ಶ್ರೀ ಕೆ ಹೆಚ್. ಶ್ರೀನಿವಾಸ್.—ಅವರು ಸಹಜವಾಗಿ ನ್ಯಾಯಾಂಗ ವಿಚಾರಣೆ ಕೇಳಿದ್ದಾರೆ. ಅವರಿಗೆ ನ್ಯಾಯಾಂಗದಲ್ಲಿ ಮಾತ್ರ ವಿಶ್ವಾಸ ಇದೆ. ಅಷ್ಟೇ ಸರ್ಕಾರಿ ಅಧಿಕಾರಿಗಳ ಪರವಾಗಿ ವಿಶ್ವಾಸವನ್ನು ವ್ಯಕ್ತಮಾಡಿದ್ದಾರೆ ಅದನ್ನು ಪ್ರಸ್ತಾಪ ಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರಿ ಅಧಿಕಾರಿಗಳ ಬಗ್ಗೆ ವಿಶ್ವಾಸ ಇಲ್ಲ ಅಂಥ ಹೇಳಲಿಲ್ಲ. ತಾವೇ ತಮ್ಮ ಭಾಷಣದ ಕೊನೆಯಲ್ಲಿ ಪ್ರತಿಯೊಂದು ಪದಗಳನ್ನು ಚೆನ್ನಾಗಿ ಪ್ರಯೋಗ ಮಾಡಿದಿರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನ್ನ ಪದಗಳಲ್ಲಿ ನ್ಯಾಯಾಂಗ ತನಿಖೆ ಆದರೆ ಸರಿ ಅಂಥ ದೃಷ್ಟಿಯಲ್ಲ, ಇದರಲ್ಲಿ ರೈತರಿಗೆ ವಿಶ್ವಾಸ ಉಂಟಾಗತಕ್ಕ ಬೇರೆ ರೀತಿಯ ತನಿಖೆ ಏರ್ಪಾಡು ಮಾಡಬಹುದು ಈ ದೃಷ್ಟಿಯಿಂದ ಸ್ಪಷ್ಟವಾಗಿ ಹೇಳಿದೆ.

ಶ್ರೀ ಲಕ್ಷ್ಮೀಸಾಗರ್.—ರೈತ ಸಮುದಾಯದ ನಾಯಕರು ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ —ಮಾನ್ಯ ಶ್ರೀನಿವಾಸ್ ಅವರು ಹೇಳುವಂತಾದ್ದು ನಾನು ಬಹಳ ಎಚ್ಚರಿಕೆಯಿಂದ ಕೇಳಿದ್ದೇನೆ. ತಾವು ಏನು ಹೇಳಿದಿರಿ ಎಂದರೆ ರೈತರಿಗೆ ಸಮಾಧಾನ ತರತಕ್ಕ ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕೆನ್ನುವ ಮಾತನ್ನು ಹೇಳಿದಿರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಹೇಳಲಿಲ್ಲ ಅಂಥ ಹೇಳಿಲ್ಲ. ರೈತರಿಗೆ ನ್ಯಾಯಾಂಗ ತನಿಖೆಯಲ್ಲದೇ ಇರತಕ್ಕ ತನಿಖೆಗಳಲ್ಲೂ ವಿಶ್ವಾಸವಿಡತಕ್ಕದ್ದು ಇದೆ ಎಂದು ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಿಷ್ಪಕ್ಷಪಾತವಾದ ತನಿಖೆಯಾಗಬೇಕು ಎನ್ನುವುದನ್ನು ತಾವು ಒಪ್ಪಿದ್ದೀರಿ.

ಶ್ರೀ ಜೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಾದಂಥ ಶ್ರೀನಿವಾಸ್ ಅವರು ಅವರ ಅಭಿಪ್ರಾಯವನ್ನು ಹೇಳಿದ್ದು, ನಾವಿಬ್ಬರು ಹೇಳಿದ್ದು ನ್ಯಾಯಾಂಗ ತನಿಖೆಯಾಗಬೇಕೆಂದು. ಅವರ ಅಭಿಪ್ರಾಯ ಬೇರೆ ತನಿಖೆಯಾದರೂ ಒಪ್ಪಬಹುದು ಅಂಥ ಅವರ ಅಭಿಪ್ರಾಯ ಹೇಳಿದರು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ವಕೀಲ ಅಲ್ಲ, ಅದು ನ್ಯಾಯಾಂಗ ವಿಚಾರಣೆಯಾಗಬೇಕಾಗುತ್ತದೆ. Impartial enquiry should not be conducted by a Government Officer who is subordinate to the Government. Even the Chief Secretary, when he works under the Government, if he conducts an enquiry, it cannot be an impartial enquiry. He may be an honest officer - I do not want to comment upon it. It cannot be called an impartial enquiry unless it is a judicial enquiry. ಆದ್ದರಿಂದ ಮಾನ್ಯ ಸಭಾಧ್ಯಕ್ಷರಾದವರೆ ತಮ್ಮ ಮುಖಾಂತರ ಸರ್ಕಾರಕ್ಕೆ ಸೂಚನೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಈ ಒಂದು ಪ್ರಕರಣದಲ್ಲಿ ನಾನು ರೈತರ ಸಮಸ್ಯೆ ಮಿಕ್ಸ್ ಮಾಡಲಿಕ್ಕೆ ಹೋಗುವುದಿಲ್ಲ.

5 ಪಿ. ಎಂ.

ಈ ಪ್ರಕರಣದಲ್ಲಿ ಅದನ್ನು ಜುಡಿಷಿಯಲ್ ಎನ್‌ಕ್ವೈರಿಗೆ ಒಳಪಡಿಸಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾಗಸಮುದ್ರದಲ್ಲಿ ನಟರಾಜ, ಬಸವನಗೌಡ, ಹಾಗೂ ಮಲ್ಲಪ್ಪ ಎಂಬ ಈಕೆ ಜನರು ಏನು ತಮ್ಮ ಅಸುವನ್ನು ನೀಗಿದ್ದಾರೆ ಈ ಬಗ್ಗೆ ವಿಚಾರಣೆಯಾಗಬೇಕು. ಯಾವುದೇ ಪೋಲೀಸ್ ಅತಿರೇಕವಾದರೂ ಕೊಲೆ ಆದಲ್ಲಿ ಅದರ ಬಗ್ಗೆ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಏರ್ಪಡಿಸುವುದು ಸರ್ವೇ ಸಾಮಾನ್ಯ. ಯಾವುದೇ ಒಂದು ಜನಾಭಿಪ್ರಾಯಕ್ಕೆ ಮಣಿದು ವಿಚಾರಣೆ ಮಾಡುವಂಥಾದ್ದಲ್ಲ. ಮೆಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುವುದು ಸರ್ವೆ ಸಾಧಾರಣ. ಒಬ್ಬ ಸ್ಪೆಷಲ್ ಡೆಪ್ಯುಟಿ ಕಮೀಷನರನ್ನು ಮೆಜಿಸ್ಟೀರಿಯಲ್ ಎನ್‌ಕ್ವೈರಿಗೆ ಹಾಕಿದರು ಎಂದರೆ ಅವರು ಅದನ್ನು ಮಾಡಲೇಬೇಕಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಈ ಕೆ ವಿಚಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಿರ್ಧಿಷ್ಟವಾಗಿ ಆಗಲೇಬೇಕು. ೨೪ನೇ ತಾರೀಖು ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಸಭೆಗೆ ನಾನು ಬರುವುದಿಲ್ಲವೆಂದು ಹೇಳಿದರೂ ಕೂಡ ಅಧಿಕಾರಿಗಳು ಸುಮಾರು ೭೦ ಜನ ಸಿಬ್ಬಂದಿಯನ್ನು ಕಳುಹಿಸುವ ಔಚಿತ್ಯವಾದರೂ ಏನಿತ್ತು? Whether they have acted judiciously or not is to be considered ಇದನ್ನು ವಿಚಾರಣೆ ಮಾಡಬೇಕು. ಇದನ್ನು ಬೇಡವೆಂದು ಹೇಳುವುದಕ್ಕೆ ಸಾಧ್ಯವಿಲ್ಲ? ಇದರಲ್ಲಿ ಯಾವ ತಪ್ಪು ಇಲ್ಲ. ಅಲ್ಲಿಗೆ ಹೋದಮೇಲೆ ಮುಂಗೋಟಿ ಗ್ರಾಮದಲ್ಲಿ ಸಭೆ ಇಲ್ಲವೆಂದಮೇಲೆ ನಾಗಸಮುದ್ರಕ್ಕೆ ಹೋಗುವ ಒಂದು ಪ್ರೇರಕ ಶಕ್ತಿ ಆ ಅಧಿಕಾರಿಗಳಿಗೆ ಇತ್ತೇ, ಇಲ್ಲವೆ? ಎಂಬುದು ವಿಚಾರಣೆಯಾಗಬೇಕು. Whether they have acted on their own or whether they have acted according to the instructions given by somebody? ಏತಕ್ಕೆ ಹೇಳಿದರು? ಸ್ವಾಮಿ, ಪೋಲೀಸರು ಇಲ್ಲದೆ ರಾಜ್ಯವನ್ನು ಆಳುವುದು ಸಾಧ್ಯವೇ ಇಲ್ಲವೆಂದು ತಾವು ಹೇಳುವುದಾದರೆ, ಅವರು ಮಾಡಿದ್ದೆಲ್ಲಾ ಸರಿ ಎಂದು ಒಪ್ಪಿಕೊಳ್ಳುವುದಕ್ಕೆ ನಾವು ಸಿದ್ಧರಿಲ್ಲ. ಆ ರೀತಿ ಆಗುವುದಾದರೆ ಪರಿಸ್ಥಿತಿಯೇ ಬೇರೆಯಾಗುತ್ತದೆ. ಪೋಲೀಸರು ಲಾಠಿ ತಂದರೆ ನಾವು ಕಲ್ಲು ತೆಗೆದುಕೊಂಡು ಹೋಗಬೇಕಾಗುತ್ತದೆ. ರಾಷ್ಟ್ರ ಮಟ್ಟದಲ್ಲಿ ನಿಮ್ಮ ನಾಯಕರು ಹೇಳುತ್ತಾರಲ್ಲಾ ಆ ರೀತಿ ಪೋಲೀಸರು ಲಾಠಿ ತಂದರೆ ನಾವು ಕಲ್ಲನ್ನೋ ಇಲ್ಲ ದೊಣ್ಣೆಯನ್ನೋ ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ ನಾವು ಈ ಒಂದು ಪರಿಸ್ಥಿತಿಗೆ ಹೋಗಬೇಕೆ? ನಾಗಸಮುದ್ರ ಗ್ರಾಮದಲ್ಲಿ ಅವರು ಸೇರಿದ ಸಭೆಯೇ ಬೇರೆ. Whether there were any instructions by the higher officer or from any other force? ಅದು ಎತ್ತಿನಗಾಡಿಯನ್ನು ಹಿಂದಕ್ಕೆ ಮುಂದಕ್ಕೆ ತಿರುಗಿಸಿಕೊಳ್ಳುವುದಕ್ಕೆ ಹೋದಾಗ ಅದು ತಗುಲಿರಬಹುದು.

ಅದು ಬೇರೆ ಪ್ರಶ್ನೆ. ಆದರೆ ಇದರ ಹಿಂದೆ ಇರತಕ್ಕ ಸತ್ಯಾಂಶ ಹೊರಬೀಳಬೇಕಾಗುತ್ತದೆ. ಇದನ್ನು ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಹಾಕಬೇಕು. ಇನ್ನು ಮೂರನೆಯ ವಿಷಯ ಎಂದರೆ ಮಾನ್ಯ ಕಾಗೋಡು ತಿಮ್ಮಪ್ಪನವರ ಹತ್ತಿರ ರೈತ ಸಮುದಾಯ ಸಂಚು ನಡೆಸಿತ್ತೆ? ಇದನ್ನು ಜುಡಿಷಿಯಲ್ ಎನ್‌ಕ್ವೈರಿಗೆ ಒಳಪಡಿಸಬೇಕು. ಇನ್ನು ನಾಲ್ಕನೆಯದು ಎಂದರೆ ಶ್ರೀಮಾನ್ ರುದ್ರಪ್ಪನವರು ಹೇಳಿದ ಪ್ರಕಾರ ಸರ್ಕಾರ ಅವರ ಕೊಲೆಗೆ ಸಂಚು ನಡೆಸಿತ್ತು ಎಂಬುದರಲ್ಲಿ ಸತ್ಯಾಂಶ ಇದೆಯೆ? ಈ ನಾಲ್ಕೂ ವಿಷಯಗಳ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ರೈತರ ವಿರೋಧಿ, ಅವರು ರೈತರ ಪರವಾಗಿ ಇಲ್ಲ, ಎಂದು ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ನಮ್ಮ ಮುಂದಿರತಕ್ಕ ಈ ನಾಲ್ಕೂ ಅಂಶಗಳ ಬಗ್ಗೆ ಸತ್ಯಾಂಶ ಹೊರಬೀಳಬೇಕಾಗುತ್ತದೆ.

ಆದುದರಿಂದ ಮಾನ್ಯ ಸಭಾಧ್ಯಕ್ಷಿಣಿಯವರೆ, ತಮ್ಮಲ್ಲಿ ಹಾಗೂ ಎಲ್ಲ ಸದಸ್ಯರಲ್ಲೂ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಒಂದು ರಾಜಕೀಯ ಅನಿಶ್ಚಿತ ವಾತಾವರಣದಲ್ಲಿ ಪರಿಸ್ಥಿತಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈ ರಾಜಕೀಯ ಜೀವನ ಶಾಶ್ವತವಲ್ಲ. ಆದರೆ ಪೋಲೀಸರ ಅಧೀನದಲ್ಲಿ ಯಾರೋ ಒಬ್ಬ ಅಧಿಕಾರಿ ತನ್ನ ಕರ್ತವ್ಯವನ್ನು ನಿರ್ವಹಿಸುವಾಗ ಎಚ್ಚರ ತಪ್ಪಿ ನಡೆದಾಗ, ಅದಕ್ಕೆ ಈ ಸದನ ಅಥವಾ ನಾವುಗಳು ತಲೆಬಾಗಬೇಕೆಂದು ಹೇಳುವ ಅಭಿಪ್ರಾಯಕ್ಕೆ ಇಲ್ಲಿ ಯಾವ ಸದಸ್ಯರೂ ಬರಲಾರರೆಂದು ಅಂದುಕೊಂಡಿದ್ದೇನೆ. ಪರಿಸ್ಥಿತಿ ಅಷ್ಟೊಂದು ಹದಗೆಟ್ಟಿದೆ ಎಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಒಂದುವೇಳೆ ಪರಿಸ್ಥಿತಿ ಹದಗೆಟ್ಟಿದ್ದರೂ ಅದನ್ನು ಸರಿಪಡಿಸುವುದಕ್ಕೆ ಸಾಧ್ಯತೆ ಇದೆ. ಅದಕ್ಕಾಗಿ ನಿರಾಶೆಪಡಬೇಕಾಗಿಲ್ಲ.

ಆದ್ದರಿಂದ ನಾನು ಕೊನೆಯದಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈ ನಾಲ್ಕು ವಿಷಯಗಳ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಲೇಬೇಕೆಂದು ಒತ್ತಾಯಮಾಡಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಡಾ. ಹೆಚ್. ಎಲ್. ತಿಮ್ಮೇಗೌಡ (ಬಸವನಗುಡಿ).— ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ವಿಚಾರದಲ್ಲಿ ನಮ್ಮ ನಾಯಕರಾದ ಲಕ್ಷ್ಮೀಸಾಗರ್‌ರವರೂ, ಶ್ರೀಮಾನ್ ಪಾಟೀಲ್‌ರವರೂ, ಮಾನ್ಯ ದೇವೇಗೌಡರೂ ಹೇಳಬೇಕಾದ ವಿಷಯವನ್ನೆಲ್ಲಾ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ನನ್ನ ಮನಸ್ಸಿಗೆ ಒಂದು ವ್ಯಥೆ ಏನೆಂದರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಹಿಂದೆ ನಮ್ಮ ಪಕ್ಷದಲ್ಲಿದವರು, ಜನತಾ ಪಕ್ಷದಲ್ಲಿದ್ದಾಗ ಸೋಷಿಯಲಿಸ್ಟ್ ಪಕ್ಷದಲ್ಲಿದ್ದಾಗ ರೈತರ ಚಳುವಳಿಯಲ್ಲಿ ಭಾಗವಹಿಸಿದ್ದವರು, ರೈತರ ಬಗ್ಗೆ ಕಳಕಳಿ ಇರುವವರು ಇವತ್ತು ಈ ರೀತಿ ವಿತಕ್ಕೆ ವರ್ತಿಸುತ್ತಿದ್ದಾರೆ ಎಂಬುದು ಈಗ ಮಾನ್ಯ ತಿಮ್ಮಪ್ಪನವರ ಮೇಲೆ ಇರತಕ್ಕ ಅಪಾದನೆಗಳು ಸರಿಯೋ ತಪ್ಪೋ, ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ರೈತರ ಮನಸ್ಸಿಗೆ ಸಂತೋಷವಾಗುವ ರೀತಿಯಲ್ಲಿ ನ್ಯಾಯಾಂಗ ವಿಚಾರಣೆಯಾಗಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಮಾನ್ಯ ದೇವೇಗೌಡರು ರೈತರ ಸಮಸ್ಯೆಗಳನ್ನು ಇದರಲ್ಲಿ ಚರ್ಚೆಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದರೂ ಕೂಡ ನಾಗಸಮುದ್ರದ ಘಟನೆಗೆ ಮುಖ್ಯ ಕಾರಣ ಏನು ಎಂಬುದನ್ನು ಯೋಚನೆ ಮಾಡುವುದು ಬಹಳ ಮುಖ್ಯವಾದುದು. ನರಗುಂದ, ನವಲಗುಂದದಿಂದ ಹಿಡಿದು ಅಂದರೆ ಅಲ್ಲಿ ಜನರು ಸತ್ತಿದ್ದು, ಅದಾದಮೇಲೆ ಹಾಸನದಲ್ಲಿ ಜನರು ಸತ್ತಿದ್ದು ಇದನ್ನೆಲ್ಲಾ ನೋಡಿದಮೇಲೆ ರೈತರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸರ್ಕಾರದವರು ಏನೇನು ಕ್ರಮಗಳನ್ನು ಕೈಗೊಂಡಿದ್ದಾರೆ. ಸರ್ಕಾರದವರು ಕೊಟ್ಟಿದಂಥ ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ಈಡೇರಿಸಿದ್ದಾರೆ ಎಂಬುದನ್ನು ನೋಡಬೇಕು. ಮಾನ್ಯ ಮುಖ್ಯ ಮಂತ್ರಿಯವರು ಬಹಳ ಸುಲಭವಾಗಿ ಹೇಳಿದ್ದಾರೆ. ಅದು ಏನೆಂದರೆ, ಈ ಚಳುವಳಿ ಬಡ ರೈತರದ್ದಲ್ಲ, ಶ್ರೀಮಂತ ರೈತರ ಚಳುವಳಿ ಎಂದು. ಇನ್ನೊಂದು ಸಾರಿ ಪತ್ರಿಕಾ ಕರ್ತರು ಶಿವಮೊಗ್ಗಾಕ್ಕೆ ಹೋದಾಗ ಇದು ಬಡ ರೈತರ ಚಳುವಳಿಯೋ, ಶ್ರೀಮಂತ ರೈತರ ಚಳುವಳಿಯೋ ಎಂಬುದು ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಶಿವಮೊಗ್ಗದಲ್ಲಿರುವ ರೈತರು ಸಾಲವನ್ನು ವಾಪಸು ಕೊಡಲಿಲ್ಲವೆಂದು ಅವರ ಮನೆ ಮಠಗಳನ್ನೆಲ್ಲಾ ಜಫ್ತಿ ಮಾಡಿ ವಸೂಲುಮಾಡುತ್ತಿದ್ದರು ಸ್ವಾಮಿ, ಬಡವರ ಮನೆಗಳನ್ನಾದರೆ ತಾವು ಜಫ್ತಿ ಮಾಡಿಸುತ್ತೀರಿ. ಆದರೆ ಶ್ರೀಮಂತ ರೈತರ ಹತ್ತಿರ ತಾವು ಹೋಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಶಿವಮೊಗ್ಗಾದಲ್ಲಿ ಒಬ್ಬ ದೊಡ್ಡ ಹೋಟೆಲ್ ಮಾಲೀಕ ೧೭ ಸಾವಿರ ರೂ. ಸರ್ಕಾರಕ್ಕೆ ಕೊಡಬೇಕಾದ ಸಾಲವನ್ನು ಬಾಕಿ ಉಳಿಸಿಕೊಂಡಿದ್ದಾರೆ. ಇನ್ನೊಬ್ಬರು ಈಶ್ವರಪ್ಪ ಕೋಡಿ ಬಿಟ್ಟನಹಳ್ಳಿ ಎನ್ನುವವರು ೧ ಲಕ್ಷ ೬೦ ಸಾವಿರ ರೂ.ಗಳನ್ನು ಬಾಕಿ ನಿಲ್ಲಿಸಿಕೊಂಡಿ

ದ್ದಾರೆ. ಆದರೆ ಈ ಈಶ್ವರಪ್ಪ ಎನ್ನುವವರು ರಾಜಕೀಯ ವ್ಯಕ್ತಿಗಳಾಗಿರುವುದರಿಂದ ಅವರ ಮನೆಯನ್ನು ಜಫ್ತಿ ಮಾಡಿಲ್ಲ. ಶ್ರೀಮಂತರಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಬಡವರಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ಈ ಎರಡು ನಿದರ್ಶನಗಳಿಂದಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದು ೨೯ನೆ ತಾರೀಖು ಪತ್ರಿಕೆಯಲ್ಲಿ ಬಂದಿದೆ. ಇದು ಬಡರೈತರ ಚಳುವಳಿಯಲ್ಲ. ಶ್ರೀಮಂತ ರೈತರ ಚಳುವಳಿ ಎಂದು ಯಾರ ಮನೆಯಲ್ಲಿ ಒಂದು ಅಲ್ಯೂಮಿನಿಯಂ ಪಾತ್ರೆ, ಒಂದು ಮಣ್ಣಿನ ಪಾತ್ರೆಯನ್ನೂ ಇಟ್ಟುಕೊಳ್ಳುವುದಕ್ಕೆ ಶಕ್ತಿ ಇಲ್ಲದ ಬಡ ರೈತರ ಮನೆಗಳಮೇಲೆ ನಿಮ್ಮ ಅಧಿಕಾರಿಗಳು ಧಾಳಿ ನಡೆಸಿ ಜಫ್ತಿ ಮಾಡಿದ್ದಾರೆ. ಅಂದರೆ ಆ ಸಂದರ್ಭದಲ್ಲಿ ಆ ಜನರ ಮನಸ್ಸು ಎಷ್ಟು ನೊಂದಿದೆ ಎಂಬುದನ್ನು ತಾವೇ ಯೋಚನೆ ಮಾಡಿನೋಡಿ. ತಾವು ರೈತರನ್ನು ಪ್ರಚೋದನೆ ಮಾಡುವುದು ಬಹಳ ಸುಲಭ. ಆದರೆ ಅನಂತರ ಅವರನ್ನು ಶಮನಗೊಳಿಸುವುದು ಅಷ್ಟೇ ಕಷ್ಟ ಎಂಬುದನ್ನು ಮರೆಯಬಾರದು. ಈಗ ಏನೋ ಒಂದು ಚಳುವಳಿ ನಡೆಯುತ್ತಿದೆ, ಇದು ನಮ್ಮನ್ನು ಏನೂ ಮಾಡುವುದಿಲ್ಲ, ಎಂದು ಸರ್ಕಾರದವರು ನಿರ್ಲಕ್ಷ್ಯಭಾವನೆಯಿಂದ ಏನಾದರೂ ಮುಂದುವರಿದಿದ್ದೇ ಆದರೆ ಬಂಗಾಳದಲ್ಲಿ ಇರುವಂತೆ ನಮ್ಮ ರಾಜ್ಯದಲ್ಲೂ ನಕ್ಸಲೈಟ್ಸ್ ಜಾಸ್ತಿಯಾಗಬಹುದು. ಆದ್ದರಿಂದ ಈರೀತಿ ನಕ್ಸಲೈಟ್ಸ್ ಬೆಳೆಯುವುವಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ರಾಜಕೀಯ ಚಳುವಳಿಯಲ್ಲಿ ಮಾತನಾಡುತ್ತಾ ಹೇಳಿದ್ದಾರೆ. I may be permitted to quote the following sentences from Deccan Herald dated 18-10-1980. ಕೆಲವು ವಿಚಾರಗಳನ್ನು ಓದಲಿಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ.

> "CM's OFFER TO LEAD RYOTS TEAM TO DELHI: Apart from conceding the demands of the farmers he was also prepared to lead a delegation of farmers to Delhi to persuade the Centre to meet certain demands that were within the purview of the Union Government, Mr Rao said.
>
> Mr. Rao also said" I am revolution ary, brought up in that manner, whether I am Chief Minister or not, I would remain so "Mr Rao said and assured the farmers: "My Government will not lag behind in solving your problems. "Mr. Rao felt that many of the problems of the farmers could have been solved by now, had the previous Governments attempted to solve them.

(MR. DEPUTY SPEAKER IN THE CHAIR)

ಶ್ರೀಮಾನ್ ಗುಂಡೂರಾಯರು ನಮ್ಮ ರಾಜ್ಯ ಸರ್ಕಾರದ ವ್ಯಾಪ್ತಿಗೆ ನಮ್ಮ ರಾಜ್ಯ ಸರ್ಕಾರದವರು ತೀರ್ಮಾನ ಮಾಡತಕ್ಕಂಥ ಪ್ರಾಬ್ಲಮ್ಸ್ ಏನೇನು ಇವೆ ಅವನ್ನೆಲ್ಲಾ ಒಂದು ಒಳ್ಳೆಯ ವಾತಾವರಣದಲ್ಲಿ ಯೋಗ್ಯ ರೀತಿಯಲ್ಲಿ ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ. ಹಿಂದಿನ ಸರ್ಕಾರ ಮಾಡಬೇಕಾಗಿತ್ತು. ಅವರು ಮಾಡಲಿಲ್ಲ. ನಾವು ಪರಿಹಾರ ಮಾಡುತ್ತೇವೆಂದು ಹೇಳಿದ್ದರು. ಒಂದು ಸಮಸ್ಯೆಯನ್ನೂ ಕೂಡ ಪರಿಹಾರ ಮಾಡಲಿಲ್ಲ. ನಾನು ತಿಳಿದುಕೊಂಡಿದ್ದೇನೆ, ಪರಿಹಾರ ಮಾಡಿದ್ದಿದ್ದರೆ ಶಿವಮೊಗ್ಗದಲ್ಲಿ ವ್ಯಾಪಕವಾದ ಚಳುವಳಿ ಆಗುತ್ತಲೇ ಇರಲಿಲ್ಲ. ಈಗಲೇ ಮಾನ್ಯ ಬಂಗಾರಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಅವರು ಇನ್‌ಟೀರಿ ರಿಪೋರ್ಟ್ ಕೊಟ್ಟಿರುತ್ತಾರೆ. ಅದಾದಮೇಲೆ ಮಾನ್ಯ ಬೊಮ್ಮಾಯಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದರು. ಅವರೂ ಕೂಡ ಇನ್‌ಟೀರಿಮ್ ರಿಪೋರ್ಟ್‌ನ್ನು ಕೊಟ್ಟರು. ಈ ಎರಡೂ ರಿಪೋರ್ಟ್‌ಗಳನ್ನು ರದ್ದು ಮಾಡಿದಿರಿ. ಜನತಾ ಸರ್ಕಾರದವರು ೧೫ ಡಿಮ್ಯಾಂಡ್‌ಗಳನ್ನು ಸರ್ಕಾರದ ಮುಂದೆ ಇಟ್ಟಿರುವುದು ಇವೆ. ಅವನ್ನೆಲ್ಲ ಕೂಲಂಕಷವಾಗಿ ಪರಿಶೀಲನೆ ಮಾಡಿ ಅದನ್ನು ಯಾವ ರೀತಿ ಜಾರಿಗೆತಂದು ಪರಿಹಾರ ಮಾಡಬೇಕೋ ಆ ರೀತಿ ಮಾಡಲು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವ ಮನೋಭಾಗ ಸರ್ಕಾರಕ್ಕೆ ಇಲ್ಲ. ಸರ್ಕಾರಕ್ಕೆ

ಆ ಸೀರಿಯಸ್‌ನೆಸ್ಸೇ ಇಲ್ಲವೇದು ಹೇಳಿದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ. ಇದೇ ರೀತಿ ಬಿಟ್ಟು ಕೊಂಡು ಹೋಗುತ್ತಿದ್ದರೆ ಒಳ್ಳೆಯದಲ್ಲವೆಂದು ನನ್ನ ಅಭಿಪ್ರಾಯವಾಗಿರುತ್ತದೆ. ನಾಗಸಮುದ್ರದಲ್ಲಿ ನಡೆದಂಥ ಘಟನೆಯ ಬಗ್ಗೆ ಹೇಳುವುದಾದರೆ ನಿಜವಾಗಿಯೂ ಕೂಡ ನಾಚಿಕೆ ಪಡತಕ್ಕಂಥ ಘಟನೆಯಾಗಿರುತ್ತದೆ. ಮೂರು ಜನ ಬಡ ರೈತರುಗಳನ್ನು ನಗರದಲ್ಲಿಯೇ ಪೋಲೀಸ್ ಅಧಿಕಾರಿಗಳು ಕೊಲೆಮಾಡಿದ್ದಾರೆ. ಪತ್ರಿಕಾಕರ್ತರು ಹೋಗಿನೋಡಿ ತಮ್ಮ ಸ್ಟೇಟ್‌ಮೆಂಟ್ ಕೊಟ್ಟಿರುತ್ತಾರೆ. "So far we have treated them as Satyagrahis. Now, we will treat them as Dacoits" ಪತ್ರಿಕೆಗಳಲ್ಲಿ ರಿಪೋರ್ಟ್ ಆಗಿರತಕ್ಕಂಥದ್ದು. ದೇಶಕ್ಕೆ ಅಕ್ಕಿ ಕೊಡತಕ್ಕಂಥ ರೈತನನ್ನು ದೇಶದ ಬೆನ್ನೆಲಬು ಎಂದು ಭಾಷಣ ಮಾಡಿ ಅವರಿಂದ ಓಟನ್ನು ತೆಗೆದುಕೊಂಡು ಅಂಥವರನ್ನು ಈವತ್ತಿನದಿವಸ ಡಕಾಯಿತರೆಂದು ಹೇಳತಕ್ಕಂಥದ್ದು ಸೂಕ್ತವಲ್ಲ. ನಮ್ಮ ಸರ್ಕಾರದಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳು ರೈತರನ್ನು ಡಕಾಯಿತರ ರೀತಿಯಲ್ಲಿ ಟ್ರೀಟ್‌ಮೆಂಟ್ ಮಾಡುತ್ತಿರುವುದನ್ನು ನೋಡಿದರೆ ನಮ್ಮ ರಾಜ್ಯದ ಆಡಳಿತದ ಪರಿಸ್ಥಿತಿ ಯಾವರೀತಿ ಹದಗೆಟ್ಟಿದೆ ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ. ಶ್ರೀಮಾನ್ ಜೆ ಎಚ್. ಪಟೇಲ್‌ರವರು ಮತ್ತು ಶ್ರೀಮಾನ್ ಕೆ. ಎಚ್. ಶ್ರೀನಿವಾಸ್‌ರವರು ಮಾತನಾಡುವಾಗ ಪೋಲೀಸ್‌ನವರನ್ನು ಬಿಟ್ಟು ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿರುತ್ತಾರೆ. ಇದನ್ನು ನಾನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತೇವೆ. ಪೋಲೀಸ್‌ನವರ ಸಹಕಾರಬೇಕೆಂದು ಈರೀತಿ ಪೋಲೀಸ್‌ನವರು ಅಕ್ರಮಗಳನ್ನು ನಡೆಸುತ್ತಿದ್ದರೂ ಕೂಡ ಅದನ್ನು ಸಹಿಸಿಕೊಂಡು ಯಾವ ಕ್ರಮವನ್ನು ತೆಗೆದುಕೊಳ್ಳದೆ ಹೀಗೆ ಮುಂದುವರಿಸಿಕೊಂಡು ಹೋಗುತ್ತಿದ್ದರೆ, ಅವರು ಹದ್ದುಮೀರಿ ಸರ್ಕಾರಕ್ಕೆ ತೊಂದರೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳ ತಕ್ಕಂಥದು ಅತ್ಯಂತ ಅವಶ್ಯಕ. ನಾಗಸಮುದ್ರದಲ್ಲಿ ನಡೆದಂಥ ಘಟನೆ, ಹೀನಾಯವಾದ ಘಟನೆಯಾಗಿದ್ದು ಈ ವಿಚಾರದಲ್ಲಿ ಮಾನ್ಯ ದೇವೆಗೌಡರು ನಾಲ್ಕು ವಿಚಾರಗಳ ಬಗ್ಗೆ ಪರಿಹಾರ ಸೂಚಿಸಿದ್ದಾರೆ. ಮೊದಲನೆಯದಾಗಿ ಜ್ಯುಡಿಶಿಯಲ್ ಎನ್‌ಕ್ವಯರಿ ಆಗಬೇಕೆನ್ನುವುದು ಈಗಾಗಲೇ ರೈತ ಮುಖಂಡರುಗಳನ್ನು ವಿವಿಧ ರಾಜಕೀಯ ಬಂದಿಗಳಾಗಿ ಮಾಡಿಕೊಂಡುಅವರನ್ನು ಬಿಡುಗಡೆ ಮಾಡತಕ್ಕಂಥದ್ದು ಎರಡನೆಯದು. ಮೂರನೆಯದಾಗಿ ಬೆಟರ್‌ಮೆಂಟ್ ಲೆವಿಯನ್ನು ತೆಗೆದುಹಾಕುತ್ತೇವೆಂದು ಹೇಳಿ ಬೆಟರ್‌ಮೆಂಟ್ ಲೆವಿಯನ್ನು ತೆಗೆದುಹಾಕುವುದಕ್ಕೆ ಬದಲಾಗಿ ೨೫ ರೂಪಾಯಿಗಳಿಗೆ ೧೫೦ ರೂಪಾಯಿಗಳನ್ನು ವಾಟರ್‌ರೇಟ್‌ನ್ನು ಸೇರಿಸಿ ೧೭೫ ರೂಪಾಯಿಗಳಿಗೆ ನಿಗದಿಮಾಡಿದ್ದೀರಿ. ಮಾನ್ಯ ಕಂದಾಯಮಂತ್ರಿಗಳು ದೇವೇಗೌಡರು ಹೇಳಿದ ಹಾಗೆ ಬೆಟರ್‌ಮೆಂಟ್ ಲೆವಿಯನ್ನು ರಿಟ್ರಾಸ್ಪೆಕ್ಟೀವ್ ಎಫೆಕ್ಟೀವ್‌ನಿಂದ ತೆಗೆದು ಹಾಕಿದ್ದೇವೇದು ಗೊಂದಲವನ್ನು ಕೂಡ ಉಂಟುಮಾಡಿದ್ದಾರೆ. ಇಷ್ಟೇ ಅಲ್ಲದೆ ರೈತರು ಬೆಳೆಯತಕ್ಕಂಥ ಬೆಳೆ ಏನು ಇದೆ ಅದಕ್ಕೆ ಕೇಂದ್ರ ಸರ್ಕಾರದವರು ಬೆಲೆಯನ್ನು ನಿಗದಿ ಮಾಡತಕ್ಕಂಥ ಕ್ರಮ ಇರುತ್ತದೆ. ಆದರೆ ರೈತರಿಗೆ ಸಾಗುವಳಿಗೆ ಬೇಕಾದಂಥ ಮುರಮುಟ್ಟುಗಳು ಗೊಬ್ಬರ ಇವೇ ಮುಂತಾದ ವಸ್ತುಗಳ ಬೆಲೆ ಕಡಿಮೆ ಮಾಡತಕ್ಕಂಥ ಬೇಡಿಕೆ ಸರ್ಕಾರದ ಮುಂದೆ ಇದ್ದು ಅದನ್ನು ಪರಿಹಾರ ಮಾಡತಕ್ಕಂಥ ಸೂಚನೆ ಇದುವರೆಗೆ ಕಂಡು ಬರಲಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಸರ್ಕಾರದವರು ಫಾರ್ಮರ್ಸ್ ಕಮಿಷನ್‌ನ್ನು ನೇಮಕಮಾಡಬೇಕೆಂದು ಹೇಳುತ್ತೇನೆ. ಈವತ್ತಿನದಿವಸ ದೇಶದಲ್ಲಿ ತಯಾರಾಗತಕ್ಕಂಥ ಕಾರುಗಳ ಬೆಲೆಯನ್ನು ವರ್ಷವರ್ಷ ನಿಗದಿ ಮಾಡಲು ಒಂದು ಸ್ಟ್ಯಾಚುಟರಿ ಬಾಡಿಯನ್ನು ನೇಮಕ ಮಾಡಿರುತ್ತಾರೆ. ಇದರ ಬೆಲೆ ವರ್ಷವರ್ಷಕ್ಕೆ ಬದಲಾವಣೆಯಾಗುತ್ತಲೇ ಇರುತ್ತದೆ. ಆರು ತಿಂಗಳಿಗೆ ಒಂದು ಸಲ ಇದರ ಖರ್ಚುವೆಚ್ಚಗಳನ್ನು ಲೆಕ್ಕಾಚಾರ ಮಾಡುತ್ತಾರೆ, ೧೦೦ ಕ್ಕೆ ೨೦ ಭಾಗ ತಯಾರು ಮಾಡತಕ್ಕಂಥವರಿಗೆ ಲಾಭವನ್ನು ಕೊಡಬೇಕಾಗಿರುತ್ತದೆ. ಈ ರೀತಿ ಕಾರಿನ ಬೆಲೆಯನ್ನು ಹೆಚ್ಚು ಮಾಡತಕ್ಕಂಥದ್ದು ತಮಗೆ ಗೊತ್ತಿರುತ್ತದೆ. ೧೯೭೫ ನೇ ಇಸವಿಯಲ್ಲಿ ಫಿಯೆಟ್‌ಕಾರ್‌ನ ಬೆಲೆ ೧೫ ಸಾವಿರ ರೂಪಾಯಿಗಳಿದ್ದುದು ಈವತ್ತಿನದಿವಸ ೮೦ ಸಾವಿರ ರೂಪಾಯಿಗಳಾಗಿರುತ್ತದೆ. ೧೮ ಸಾವಿರ ಅಂಬ್ಯಾಸಡರ್ ಕಾರು ಇದ್ದುದು, ಈವತ್ತಿನದಿವಸ ೭೫–೮೦ ಸಾವಿರ ರೂಪಾಯಿಗಳವರೆಗೆ ಬೆಲೆ ಜಾಸ್ತಿಯಾಗಿರುತ್ತದೆ. ಅದೇರೀತಿ ರೈತರು ಬೆಳೆದಂಥ ಬೆಳೆಗೆ ಬೆಲೆಯನ್ನು ಹೆಚ್ಚು ಮಾಡಲಿಕ್ಕೆ, ಪರಿಹಾರವನ್ನು ಒದಗಿಸಲಿಕ್ಕೆ ಮತ್ತು ಪರಿಶೀಲನೆ ಮಾಡುವುದಕ್ಕೆ ಒಂದು ಸ್ಟ್ಯಾಚುಟರಿಬಾಡಿಯನ್ನು ನೇಮಕಮಾಡಬೇಕು. ರೈತರು ಬೆಳೆಯತಕ್ಕಂಥ ಆಹಾರಧಾನ್ಯಗಳಿಗೆ ಎಷ್ಟು ಖರ್ಚುಮಾಡುತ್ತಾರೆ, ಖರ್ಚಿನ ಜೊತೆಗೆ ಅವರು ಜೀವನ ಮಾಡುವುದಕ್ಕೆ ಏನು ಮಾಡಬೇಕು, ಎಷ್ಟು ಬೆಲೆ ಕೊಡಬೇಕು ಎನ್ನುವ ಬಗ್ಗೆ ತೀರ್ಮಾನ ಮಾಡುವುದಕ್ಕೆ ಒಂದು ಫಾರ್ಮರ್ಸ್ ಕಮಿಷನ್ ನೇಮಕ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈಗ ನಮ್ಮ ಮುಂದಿರತಕ್ಕಂಥ ಪ್ರಶ್ನೆ ನಾಗಸಮುದ್ರದಲ್ಲಿ ನಡೆದಂಥ ಘಟನೆ. ಈ ವಿಚಾರವನ್ನು ಆದಷ್ಟು ಜಾಗ್ರತೆಯಾಗಿ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು. ನರಗುಂದ, ನವಲಗುಂದ ಪ್ರಕರಣದಲ್ಲಿ ತಪ್ಪಿಗೆ ಒಳಗಾದ ಅಧಿಕಾರಿಗಳು ಜಾಮೀನಿನಮೇಲೆ ಬಿಡುಗಡೆ ಹೊಂದಿದರು. ಇಲ್ಲಿಯವರೆಗೆ ಸಂಬಂಧಪಟ್ಟ ಅಧಿಕಾರಿಗಳಮೇಲೆ ಯಾವ ವಿನಯವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ರೆವಿನ್ಯೂ ಸೆಕ್ರೆಟರಿಯವರು ಐ.ಜಿ.ಪಿ. ಯವರಿಗೆ ಹೇಳಿದ್ದಾರೆಯೇ ಹೊರತು ಏನು ಕ್ರಮ ತೆಗೆದುಕೊಂಡಿಲ್ಲ. ಪೊಲೀಸ್ ಅಧಿಕಾರಿಗಳೇ ಇರಲಿ, ಯಾರೇ ಇರಲಿ ಈ ಕೃತ್ಯಕ್ಕೆ ಕಾರಣಕರ್ತರು ಯಾರು ಇರುತ್ತಾರೆ. ಅವರನ್ನು ಜ್ಯುಡಿಷಿಯಲ್ ಎನ್‌ಕ್ವಯರಿಗೆ ಒಳಪಡಿಸಬೇಕೆಂದು ಸರ್ಕಾರದ ಮುಂದೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಶ್ರೀನಿವಾಸ್‌ರವರು ೨೫ ನೇ ತಾರೀಖು ಮಾನ್ಯ ಕಾಗೋಡುತಿಮ್ಮಪ್ಪನವರು ಬೆಂಗಳೂರಿನಲ್ಲಿಯೇ ಇದ್ದರು ಎಂದು ಹೇಳಿರುತ್ತಾರೆ. ೨೫ ನೇ ತಾರೀಖು ಬೆಳಿಗ್ಗೆ ಅವರ ಮನೆಗೆ ಹೋಗಿದ್ದೆ. ಪೊಲೀಸ್‌ನವರು ಹೋಗತಕ್ಕಂಥ ಅವಶ್ಯಕತೆಯೇ ಇರಲಿಲ್ಲವೆಂದು ಹೇಳಿರುತ್ತಾರೆ. ಎಲ್ಲಕ್ಕಿಂತಲೂ ಮೊದಲು ಸ್ವಾತಂತ್ರ್ಯ ಕಾಲದ ಚಳವಳಿ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಆರ್ಕಾಟ್ ರಾಮಸ್ವಾಮಿಯವರ ಸರ್ಕಾರವಿದ್ದಾಗ ಕಾಂಗ್ರೆಸ್‌ನವರು ಏನಾದರೂ ಪಿಕೆಟಿಂಗ್ ಮಾಡುತ್ತೇವೆಂದು ಹೇಳಿದರೆ ಸರ್ಕಾರಿ ಗೂಂಡಗಳನ್ನು ಕಳುಹಿಸಿ ನಮ್ಮನ್ನು ಹೊಡೆಸುತ್ತಿದ್ದರು. ಅದೇರೀತಿ ರೈತರು ಚಳವಳಿ ನಮ್ಮ ದೇಶದಲ್ಲಿ ನಡೆಯುತ್ತಿದ್ದರೆ ಪ್ರತಿಕೂಲವಾಗಿ ಅದನ್ನು ಹತ್ತಿಕ್ಕಲಿಕ್ಕೆ ಸೂಚನೆಗಳನ್ನು ನೀಡುವುದು ಯಾರಿಗೂ ಒಳ್ಳೆಯದಲ್ಲವೆಂದು ಹೇಳುತ್ತೇನೆ. ಅದಲ್ಲದೆ ಸ್ವರಾಜ್ಯ ಬಂದಮೇಲೆ ಶ್ರೀಮಾನ್ ಕಾಗೋಡುತಿಮ್ಮಪ್ಪನವರ ಜಿಲ್ಲೆಯವರೇ ರೈತ ಸಂಘದ ಮುಖಂಡರಾಗಿರುವುದರಿಂದ ಅವರು ಏನಾದರೂ ತಪ್ಪು ಮಾಡಿದ್ದರೆ ಅವರನ್ನು ಕರೆಯಿಸಿ ಅವರ ಕಷ್ಟಸುಖಗಳನ್ನು ವಿಚಾರಿಸಿ ಒಂದು ತೀರ್ಮಾನಕ್ಕೆ ಬರಬಹುದಾಗಿತ್ತು. ಕೆಲವು ಜನ ಕಾರ್ಯಕರ್ತರನ್ನು ಕರೆಸಿಕೊಂಡು ಸರ್ಕಾರದ ನಿಲುವನ್ನು ಹೇಳುವ ರೀತಿಯಲ್ಲಿ ಮಾಡಿ ಕಾರ್ಯಕರ್ತರ ಮಟ್ಟದಲ್ಲಿಯೇ ಸಭೆಯನ್ನು ಮಾಡಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಕಾಗೋಡುತಿಮ್ಮಪ್ಪನವರು ೨೪ ನೇ ತಾರೀಖು ಸಭೆಗೆ ಬರುವುದಿಲ್ಲವೆಂದು ಹೇಳಿದ್ದರೆ ನಾಗಸಮುದ್ರದಲ್ಲಿ ೨೫ ನೇ ತಾರೀಖಿನಲ್ಲಿ ನಡೆದ ಘಟನೆ ಖಂಡಿತಾ ನಡೆಯುತ್ತಿರಲಿಲ್ಲ. ಇನ್ನು ಮುಂದೆ ರೈತರ ಚಳುವಳಿ ನಡೆದಾಗಲಿಲ್ಲ, ಸಭೆ ನಡೆದಾಗಲೇ ಆಗಲಿ ಶಾಂತಿಯಿಂದ ಕಾನೂನು ಪಾಲನೆ ಮಾಡಬೇಕು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಡೆದಿರುವ ಘಟನೆಯಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ನೊಂದ ಬಡ ರೈತರಿಗೆ ಪರಿಹಾರ ಶೀಘ್ರವಾಗಿ ಮಾಡಬೇಕು. ಪ್ರಾಣಹಾನಿಯಾಗಿರುವ ಸಂಬಂಧಿಕರಿಗೆ ೫ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುವ ಹಾಗೆ ಮನವೊಲಿಸಬೇಕು. ಅವರು ನಮಗೆ ಹಣ ಬೇಡವೆಂದು ಹೇಳಿದ್ದಾರೆ, ಹೇಗಾದರೂ ಮಾಡಿ ಅವರ ಮನವೊಲಿಸಿಕೊಂಡು ಅವರಿಗೆ ೫ ಸಾವಿರ ರೂಪಾಯಿ ಸಿಗುವಂತೆ ಏರ್ಪಾಡು ಮಾಡುವುದು ಒಳ್ಳೆಯದೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಉಪಾಧ್ಯಕ್ಷರೆ, ಈ ದಿವಸ ಶಿವಮೊಗ್ಗ ಜಿಲ್ಲೆಯ ನಾಗಸಮುದ್ರದಲ್ಲಿ ನಡೆದಿರತಕ್ಕ ಗೋಲಿಬಾರ್ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಬೇಕೆಂದು ಅದರ ಬಗ್ಗೆ ನಮ್ಮ ಹಿರಿಯ ಸದಸ್ಯರು ಎಲ್ಲಾ ವಿಚಾರವನ್ನು ಹೇಳಿದ್ದಾರೆ. ಆ ವಿಷಯಕ್ಕೆ ನಾನು ಕೂಡ ಧ್ವನಿಗೂಡಿಸುತ್ತೇನೆ. ಗೋಲಿಬಾರ್ ಮಾಡುವುದು ನ್ಯಾಯಾಂಗ ತನಿಖೆ ವಿಚಾರಮಾಡುವುದು ಇದೇ ಆಗಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬೇರೆ ಕೆಲಸವೇ ಇಲ್ಲ ಗೋಲಿಬಾರ್ ಮಾಡುವುದೇ ಒಂದು ಕೆಲಸವಾಗಿದೆ. ಅವರು ಗೋಲಿಬಾರ್ ಮಾಡುತ್ತಾನೆ ಇರುತ್ತಾರೆ, ನಾವು ನ್ಯಾಯಾಂಗ ತನಿಖೆಯಾಗಬೇಕೆಂದು ಹೇಳುತ್ತಾನೆ ಇರುತ್ತೇವೆ, ಗೋಲಿಬಾರ್ ಆಗದ ಹಾಗೆ ತಡೆಯುವ ಶಕ್ತಿ ಈ ಸರ್ಕಾರಕ್ಕೆ ಇಲ್ಲವೆ ಎನ್ನುವುದು ನಮ್ಮ ಮುಂದೆ ಇರತಕ್ಕ ಪ್ರಶ್ನೆ. ನಾಗಸಮುದ್ರದಲ್ಲಿ ಗೋಲಿಬಾರ್ ಆಗದಂತೆ ಇವತ್ತು ತಡೆಯಬಹುದಾಗಿತ್ತು. ಶಿವಮೊಗ್ಗದ ರೈತರು ಚಳವಳಿ ಮಾಡುವುದಕ್ಕೆ ಪ್ರಾರಂಭಮಾಡಿ ತಿಂಗಳಾನುಗಟ್ಟಲೆ ಆಗಿದೆ ನಿನ್ನೆ ಮೊನ್ನೆ ಚಳವಳಿ ಪ್ರಾರಂಭ ಮಾಡಿಲ್ಲ. ಅವರ ಬೇಡಿಕೆಗಳಾದರೂ ಏನು ? ಸರ್ಕಾರ ಕೊಟ್ಟಂತಹ ಆಶ್ವಾಸನೆಗಳನ್ನು ಈಡೇರಲಿಲ್ಲ ಎನ್ನುವುದು. ಸಾಮಾನ್ಯ ಜನಗಳನ್ನು ಕೊಡಬೇಕಾದ ಸಾಲಕ್ಕೆ ಜಫ್ತಿಮಾಡಿ ಅವರಿಗೆ ತೊಂದರೆಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ ಎನ್ನುವುದು ಇನ್ನೊಂದು, ಸರ್ಕಾರ ಆಶ್ವಾಸನೆ ಕೊಟ್ಟು ಕಾನೂನುಗಳನ್ನು ಜಾರಿಗೆ ಮಾಡಿದಮೇಲೆ ಅವನ್ನು ಅಧಿಕಾರಿಗಳು ಪಾಲನೆ ಮಾಡಿಲ್ಲ, ಕ್ರಮಕೈಗೊಂಡಿದ್ದರೆ ಇವತ್ತು ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ

ವೆಂದು ನನ್ನ ಅಭಿಪ್ರಾಯ. ಸಾಮಾನ್ಯ ಜನರ ಮೇಲೆ ಸರ್ಕಾರಕ್ಕೆ ಕಳಕಳಿ ಇದೆ, ಅಭಿಮಾನವಿದೆ, ಅವರಿಗೆ ಸಹಾಯ ಮಾಡುವುದಕ್ಕೆ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯ ಸಾಮಾನ್ಯ ಜನಗಳ ಮೇಲೆ ಅದೇಕೋ ಹದ್ದಿನ ಕಣ್ಣು. ಸರ್ಕಾರದ ಧೋರಣೆಗಳನ್ನು ಅಧಿಕಾರಿಗಳು ಅನುಸರಿಸುತ್ತಿಲ್ಲವೆಂದು ಕಾಣುತ್ತದೆ. ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಹೇಳುವುದಕ್ಕೆ ಸಾಧ್ಯವಾಗಿಲ್ಲ ಇದೇನು ಒಂದು ಗೊತ್ತಾಗುತ್ತಿಲ್ಲ. ನಮ್ಮ ಜಿಲ್ಲೆಯ ಪಕ್ಕದ ಜಿಲ್ಲೆಯಾದ ಶಿವಮೊಗ್ಗ ಜಿಲ್ಲೆಗೂ ದಾವಣಗೆರೆಗೂ ತುಂಬಾ ಸಂಪರ್ಕವಿದೆ. ಪ್ರತಿ ದಿವಸ ಅಲ್ಲಿಯ ವಿಷಯವನ್ನು ತಿಳಿದುಕೊಳ್ಳುತ್ತಾರೆ. ಇವತ್ತು ಚಳುವಳಿ ಮಾಡತಕ್ಕ ಕಾಲದಲ್ಲಿ ಶ್ರೀಮಂತ ರೈತರು ಬಡ ರೈತರು ಎಲ್ಲರೂ ಒಟ್ಟಿಗೆ ಸೇರಿಕೊಂಡು ಸರ್ಕಾರ ಸಾಮಾನ್ಯ ಜನರ ಮೇಲೆ ಮಾಡತಕ್ಕ ಕ್ರೂರಶಾಸನವನ್ನು ನಿಲ್ಲಿಸುವುದಕ್ಕೋಸ್ಕರ ಚಳುವಳಿಯನ್ನು ಮಾಡುತ್ತಿದ್ದಾರೆ. ನಮ್ಮ ಸರ್ಕಾರದ ಅಧಿಕಾರಿಗಳಿದ್ದಾರೆ ಅವರು ತಕ್ಷಣ ಅವರನ್ನು ಕರೆಸಿ ಮಾತನಾಡಿ ಅಲ್ಲಿ ಆಗತಕ್ಕ ಅಕ್ರಮ ಮತ್ತು ಅನ್ಯಾಯಗಳನ್ನು ತಡೆಗಟ್ಟಿದ್ದರೆ ನಾಗಸಮುದ್ರದಲ್ಲಿ ಈ ಗಲಾಟೆಯೇ ಆಗುತ್ತಿರಲಿಲ್ಲ ಆಗುವಂತಹ ಅವಶ್ಯಕತೆಯೂ ಇರಲಿಲ್ಲ. ಹಿಂದೆ ನವಲಗುಂದ, ನರಗುಂದದಲ್ಲಿ ಗಲಾಟೆ ಹೇಗಾಯಿತು? ತಿಂಗಳುಗಟ್ಟಲೆ ತಹಶೀಲ್ದಾರರವರ ಕಛೇರಿಯ ಮುಂದೆ ಅಲ್ಲಿರತಕ್ಕ ರೈತರು ನಮಗೆ ನೀರು ಕೊಡದಿದ್ದರೂ ನೀರು ಕಂದಾಯ ಹಾಕಿದ್ದೀರಿ. ನಮ್ಮ ಜಮೀನು ಕಾಲುವೆ ಮಾಡಲಿಕ್ಕೆ ಹೋದರ ಅವಕ್ಕೆ ಪರಿಹಾರ ಕೊಡದೆ ಅದಕ್ಕೂ ಕೂಡ ಕಂದಾಯ ಹಾಕಿದ್ದೀರಿ ಇದನ್ನೆಲ್ಲಾ ಸರಿಪಡಿಸಿ ನಮಗೆ ನ್ಯಾಯಬೇಕೆಂದು ತಿಂಗಳಾನುಗಟ್ಟಲೆ ತಹಶೀಲ್ದಾರ್‌ರವರ ಕಛೇರಿಯ ಮುಂದೆ ಉಪವಾಸ ಕುಂತಾಗ ಕೊನೆಗೆ ಅವರಿಗೆ ಸಿಕ್ಕಿದ್ದು ಏನು? ಗುಂಡು. ರೈತರು ಇದ್ದಕಿದ್ದ ಹಾಗೆ ಯಾವುದೋ ಒಂದು ಪ್ರಚೋದನೆಗೆ ಒಳಗಾಗಿ ಚಳುವಳಿ ಮಾಡಿ ಗಲಾಟೆ ಮಾಡಿದರು ಎಂದು ರೈತರು ಹಿಂಸೆಗೆ ಇಳಿದರು ಎಂದು ಅವರ ಮೇಲೆ ಗುಂಡು ಹಾರಿಸುವುದು ಸರಿಯಲ್ಲ. ರೈತರು ಎಲ್ಲಿ ಚಳುವಳಿ ಮಾಡಿದರೂ ಕೂಡ ಶಾಂತಿಯುತವಾಗಿ ಮಾಡಿದ್ದಾರೆ ಇದನ್ನು ಅಧಿಕಾರಿಗಳು ವಿಚಾರ ಮಾಡದೆ ಬಿಟ್ಟಿದ್ದರಿಂದ ಈ ಪರಿಸ್ಥಿತಿ ಉಂಟಾಯಿತು. ಶಿವಮೊಗ್ಗದಲ್ಲೂ ಕೂಡ ಅದೇ ರೀತಿ ಆಗಿದೆ. ಶಿವಮೊಗ್ಗದಲ್ಲಿ ಸಂಬಂಧಪಟ್ಟ ಮಂತ್ರಿಗಳು ಮುಖ್ಯಮಂತ್ರಿಗಳು ಅಲ್ಲಿರತಕ್ಕ ಅಧಿಕಾರಿಗಳು ಅವರ ಕಷ್ಟಗಳ ಕಡೆಗೆ ಗಮನಹರಿಸಬೇಕಾಗಿತ್ತು. ಇದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಯಾರು ಸಾಮಾನ್ಯ ಜನರಿಗೆ ತೊಂದರೆ ಕೊಡುತ್ತಿದ್ದರು., ಮನೆಗಳನ್ನು ಜಪ್ತಿ ಮಾಡುತ್ತಿದ್ದರು ಶ್ರೀಮಂತ ರೈತರು ೪೦ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದ್ದರು ಅವರ ಮನೆಯ ಹತ್ತಿರ ಈ ಅಧಿಕಾರಿಗಳು ಹೋಗುತ್ತಿರಲಿಲ್ಲ. ಅವರನ್ನು ನೀವು ಹಣವನ್ನು ಕೊಡಿ ಎಂದು ಕೇಳಲಿಲ್ಲ. ಸಾಲ ಕೇಳಬಾರದೆಂದೂ ಯಾರು ಹೇಳುವುದಿಲ್ಲ ಸರ್ಕಾರ ಈ ವಿಷಯದಲ್ಲಿ ವಿಫಲವಾಗಿದೆ. ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನಪಟ್ಟಿಲ್ಲ. ಅಲ್ಲಿ ಕಾಗೋಡು ತಿಮ್ಮಪ್ಪನವರಿಂದ ಜನಗಳಿಗೆ ತಿಳುವಳಿಕೆ ಹೇಳಿಸಬೇಕೆಂದು ಕೆಲವರು ಅಭಿಪ್ರಾಯ ಪಟ್ಟರು ಅಲ್ಲಿ ಒಂದು ಸಭೆಯನ್ನು ವ್ಯವಸ್ಥೆ ಮಾಡಿದರು ಆ ಸಭೆ ನಡೆಯದಂತೆ ತಡೆಗಟ್ಟಿದರು. ನನಗೆ ಅನುಭವವಿದೆ ಕಾರ್ಮಿಕರ ಸಂಘಟನೆ ಕಟ್ಟುವಾಗ ಆಡಳಿತವರ್ಗದವರು ಆ ಸಂಘಟನೆಯ ವಿರುದ್ಧ ಎತ್ತಿ ಕಟ್ಟಿ ಕಾರ್ಮಿಕರು ಹೊಡೆದಾಟ ಮಾಡುವಹಾಗೆ ಪ್ರಚೋದನೆ ಮಾಡತಕ್ಕದ್ದನ್ನು ನಾನು ಅನೇಕ ಸಂದರ್ಭಗಳಲ್ಲಿ ಕಂಡಿದ್ದೇನೆ. ಇಲ್ಲಿ ನಾವು ಏನು ಕಾಣುತ್ತಿದ್ದೇವೆ ರೈತರು ತಮ್ಮ ನ್ಯಾಯವಾದಂತಹ ಬೇಡಿಕೆಗಳನ್ನು ಸಾಮಾನ್ಯ ಜನರ ಅನುಕೂಲಕ್ಕೋಸ್ಕರ ಪ್ರಯತ್ನ ಪಡುವಾಗ, ಅಲ್ಲಿರತಕ್ಕ ರೈತರು ಹೊಡೆದಾಟ ನೀತಿಯನ್ನು ಅನುಸರಿಸತಕ್ಕ ಘಟನೆ ನಡೆದಿವೆ ಎಂದು ಮನಗಾಣಬೇಕಾಗಿದೆ. ಈ ಘಟನೆ ನಡೆದಿದೆ ಗೋಲಿಬಾರ್ ಕೂಡ ಆಗಿದೆ ೩ ಜನ ಸತ್ತು ಹೋಗಿದ್ದಾರೆ ಮಾನ್ಯ ಪಟೇಲರು ಹೇಳಿದರು ಪೋಲೀಸ್‌ನವರೇ ತಮ್ಮ ವ್ಯಾನು ಮತ್ತು ಜೀಪಿಗೆ ಬೆಂಕಿ ಇಡುತ್ತಿದ್ದುದನ್ನು ಕದ್ದು ನೋಡುತ್ತಿದ್ದವನನ್ನು ಕಂಡು ಅತನಿದ್ದರೆ ಮುಂದೆ ಸಾಕ್ಷಿ ಹೇಳುತ್ತಾನೆಂದು ಅತನನ್ನು ಗುಂಡಿಕ್ಕಿ ಕೊಂದುಹಾಕಿದ್ದಾರೆಂದು ಹೇಳಿದರು. ನಮ್ಮ ಅಧಿಕಾರಿಗಳ ಮನಸ್ಸು ಯಾವ ಮಟ್ಟದ್ದು ಇರಬಹುದು?. ಜನಗಳು ಮಾಡುತ್ತಿರುವ ವಿಷಯ ಸರಿಯಲ್ಲವೆಂದು ಇವರು ಕ್ರಮ ಕೈಗೊಳ್ಳಬಹುದಾಗಿತ್ತು ಆದರೆ ಇವರೇ ಇಂತಹ ಕೆಲಸ ಮಾಡಿದರೆ ಸರಿಯೇ ಎನ್ನತಕ್ಕದ್ದು ನಮ್ಮ ಮುಂದೆ ಇರತಕ್ಕ ವಿಷಯ. ಈ ಗಲಾಟೆಯಲ್ಲಿ ಬಸವನಗೌಡ ಎಂಬುವರು ಸತ್ತುಹೋದರು. ಯಾರೋ ಒಬ್ಬ ಸಬ್‌ಇನ್ಸ್‌ಪೆಕ್ಟರ್, ರೈತರ ಪರವಾಗಿ ಚಳುವಳಿ ನಡೆಸುತ್ತಿರುವಾಗ ಮಾತನಾಡುತ್ತಿದ್ದ ಒಬ್ಬರನ್ನು ಇದೇ ಸಮಯವೆಂದು ತಿಳಿದು ಗುಂಡಿಕ್ಕಿ ಕೊಲ್ಲಲಾಯಿತು. ಲಕ್ಷಾಂತರ ಜನಗಳು ಸೇರಿದಾಗಲೂ ಯಾವ ಘಟನೆಯೂ ನಡೆಯಲಿಲ್ಲ. ಇಂತಹ ಕೆಲಸಗಳು ಉದ್ದೇಶಪೂರ್ವಕವಾಗಿ ಆಗುತ್ತವೆಂದು ನಾನಂತೂ ಹೇಳುವುದಕ್ಕೆ ತಯಾರಾಗಿಲ್ಲ. ಯಾವ

ಅಧಿಕಾರಿ ಈ ರೀತಿ ವರ್ತನೆ ಮಾಡಿದ್ದಾನೆ ಆತನನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಸರ್ಕಾರ ಉರುಳಿ ಹೋಗುವಂತಹ ಪರಿಸ್ಥಿತಿ ಬಂದೀತು. ಇದು ಸರ್ಕಾರಕ್ಕೆ ಎಚ್ಚರಿಕೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

೫-೩೦ ಪಿ.ಎಂ.

ಇವೊತ್ತು ಶಿವಮೊಗ್ಗದಲ್ಲಿ ಮಾತ್ರ ಚಳುವಳಿ ನಡೆಯುತ್ತಿದೆ. ಇದನ್ನು ಸರ್ಕಾರದವರು ನಿಲ್ಲಿಸಲು ಪ್ರಯತ್ನ ಮಾಡದಿದ್ದರೆ ಮುಂದೆ ಇದು ಚಿತ್ರದುರ್ಗ, ಚಿಕ್ಕಮಂಗಳೂರು, ಮಂಗಳೂರು ಮುಂತಾದ ಜಿಲ್ಲೆಗಳಿಗೂ ಹಬ್ಬಬಹುದು. ಕೊನೆಗೆ ಇಡೀ ರಾಜ್ಯದ್ಯಂತ ರೈತ ಚಳುವಳಿ ಹರಡಬಹುದು. ನಮ್ಮ ಸ್ನೇಹಿತರು ಪೋಲೀಸರನ್ನು ಬಿಟ್ಟು ಆಡಳಿತ ನಡೆಸುವುದಕ್ಕಾಗುವುದಿಲ್ಲವೆಂಬುದನ್ನು ಒಪ್ಪಿಕೊಂಡರು ಆದರೆ ಇನ್ನೊಂದು ಕಡೆ ಯೋಚನೆ ಮಾಡುವುದಾದರೆ, ರೈತರು ಇಲ್ಲದೆ ಈ ದೇಶದಲ್ಲಿ ಯಾರಿಗೂ ಅಧಿಕಾರ ನಡೆಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಅವರು ಮರೆಯಬಾರದು. ಆದಕಾರಣ ಕೂಡಲೇ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ಮೊದಲು ಅಧಿಕಾರಿಗಳಿಗೆ ಸರಿಯಾಗಿ ತಾಕೀತು ಮಾಡುವುದರ ಮೂಲಕ ನಮ್ಮ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಪ್ರಜೆಗಳಿಗೆ ಸಿಗಬೇಕಾದಂಥ ನ್ಯಾಯ ಸಮ್ಮತ ಹಕ್ಕುಭಾದ್ಯತೆಗಳಿಗೆ ಚ್ಯುತಿ ಬರದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡುವುದು ಸರ್ಕಾರದ ಕರ್ತವ್ಯ. ಆದರೆ ಈ ಕರ್ತವ್ಯದಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ ಅಲ್ಲಿನ ಪೋಲೀಸರು ೩ ಜನ ನಿರಪರಾಧಿ ರೈತರನ್ನು ಅವರು ಯಾವುದೇ ಅಪರಾಧ ಮಾಡದಿದ್ದರೂ ಸಹ ಗುಂಡಿಟ್ಟು ಕೊಂದಿದ್ದಾರೆ. ಈಗ ಅವರ ಕುಟುಂಬದವರಿಗೆ ಪರಿಹಾರ ಕೊಡುವ ಕೆಲಸ ನಡೆದಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸುಮಾರು ೭೫ ಜನರು ಸತ್ತಿದ್ದಾರೆ ಇನ್ನು ೬ ತಿಂಗಳಲ್ಲಿ ಎಷ್ಟು ಜನರು ಸಾಯುತ್ತಾರೋ ಗೊತ್ತಿಲ್ಲ. ಈ ರೀತಿ ಆಗಬಾರದು. ಇಂತಹ ಸಮಸ್ಯೆಗಳು ಅಂದರೆ ಕಾರ್ಮಿಕರ ಸಮಸ್ಯೆಗಳು, ವಿದ್ಯಾರ್ಥಿಗಳ ಸಮಸ್ಯೆಗಳು, ರೈತರ ಸಮಸ್ಯೆಗಳು ಬಂದಾಗ ಅಧಿಕಾರಿಗಳು ಮತ್ತು ಮಂತ್ರಿಗಳು ಸಂಬಂಧಪಟ್ಟವರನ್ನು ತಕ್ಷಣವೇ ಬರಮಾಡಿಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡಿ ಅವರ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಹಿಡಿದರೆ ಖಂಡಿತವಾಗಿಯೂ ಇಂತಹ ಒಂದು ದುರಂತ ನಡೆಯುವುದಿಲ್ಲ. ಈ ರೀತಿ ಮಾಡುವುದರಿಂದ ಶಾಂತಿಯುತವಾದ ವಾತಾವರಣವನ್ನು ಉಂಟುಮಾಡುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಇವೊತ್ತು ಶಿವಮೊಗ್ಗ ಜಿಲ್ಲೆಯಲ್ಲಿ ರೈತರು ತುಂಬಾ ಬೇಸತ್ತಿದ್ದಾರೆ. ಅವರು ಸರ್ಕಾರದ ಧೋರಣೆಯನ್ನು ಖಂಡಿಸುತ್ತಿದ್ದಾರೆ. ಆದಕಾರಣ ಅವರನ್ನು ತಕ್ಷಣವೇ ಕರೆಸಿಕೊಂಡು ಮಾತನಾಡುವುದರ ಮೂಲಕ ಅಲ್ಲಿರುವಂತಹ ಪರಿಸ್ಥಿತಿಯನ್ನು ಶಾಂತಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ಪ್ರಕರಣದ ಬಗ್ಗೆ ವಿರೋಧಪಕ್ಷದ ನಾಯಕರು ಹೇಳಿದಂತೆ ನ್ಯಾಯಾಂಗ ವಿಚಾರಣೆಯಾಗಬೇಕು. ರೈತರ ಮೇಲೆ ಅಧಿಕಾರಿಗಳು ಕಳಂಕ ಹೊರಿಸಿದ್ದಾರೆ ಆದಕಾರಣ ನ್ಯಾಯಾಂಗ ವಿಚಾರಣೆಯಾದರೆ ಯಾರದು ತಪ್ಪು ಎಂದು ತಿಳಿದುಬರುತ್ತದೆ. ಇಲ್ಲಿ ತಪ್ಪು ಮಾಡಿರುವ ಅಧಿಕಾರಿಗೆ ಖಂಡಿತವಾಗಿಯೂ ಶಿಕ್ಷೆಯಾಗಬೇಕು. ತಾವು ಶಿಕ್ಷೆ ವಿಧಿಸಿದ್ದೇ ಆದರೆ ಇನ್ನು ಮುಂದೆ ಬೇರೆ ಅಧಿಕಾರಿಗಳು ಇಂತಹ ಅನಾಹುತಗಳಿಗೆ ಎಡೆ ಕೊಡದಂಥ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ಸರಿಯಾಗಿ ಹಾಗೂ ಜವಾಬ್ದಾರಿಯಿಂದ ನಿರ್ವಹಣೆ ಮಾಡುತ್ತಾರೆ. ಮಾನ್ಯ ದೇವೇಗೌಡರು ಹೇಳಿದಂತೆ ಇಲ್ಲಿ ೨-೩ ವಿಚಾರಗಳು ಬಹಳ ಮುಖ್ಯವಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ತಮ್ಮನ್ನು ಕೊಲೆ ಮಾಡುವಂತಹ ಸಂಚು ನಡೆದಿದೆ ಎನ್ನುವ ಹೇಳಿಕೆ ಕೊಟ್ಟಿದ್ದರೆ ರೈತರ ಮುಖಂಡರಾದ ಮಾನ್ಯ ರುದ್ರಪ್ಪನವರು ತಮ್ಮ ಜೀವಕ್ಕೆ ಭಯ ಬಂದಿದೆ ಎಂದು ಹೇಳಿದ್ದಾರೆ. ಇದನ್ನೆಲ್ಲಾ ನೋಡಿದರೆ ನಾವು ಎಲ್ಲಿಗೆ ಹೋಗುತ್ತಿದ್ದೇವೆಂಬುದು ಅರ್ಥವಾಗುತ್ತಿಲ್ಲ. ದಿವಸ ದಿವಸ ನಾವು ಮುಂದೆ ಹೋಗುವುದಕ್ಕೆ ಬದಲು ಹಿಂದೆ ಹೋಗುತ್ತಿದ್ದೇವೆಂದು ಕಾಣುತ್ತಿದೆ. ನಮ್ಮ ಈ ಸಮಾಜದಲ್ಲಿ ಒಬ್ಬರನ್ನೊಬ್ಬರು ಕೊಲೆ ಮಾಡಿಸುವ ಪ್ರಯತ್ನದಲ್ಲಿ ಯೋಚನೆ ಮಾಡುವುದಾದರೆ ನಾವು ಬಹಳ ಹಿಂದೆ ಹೋದಂತೆ ಆಗುತ್ತದೆ. ಆದ್ದರಿಂದ ಇದರಲ್ಲಿ ಯಾರದು ತಪ್ಪು, ಯಾರದು ಸರಿ. ಯಾರು ಪ್ರಚೋದನೆ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ನ್ಯಾಯಾಂಗ ವಿಚಾರಣೆ ಆಗಲೇ ಬೇಕು. ಆಗ ಸತ್ಯಾಂಶ ಹೊರಬೀಳುತ್ತದೆ. ಇದಕ್ಕೂ ಮೊದಲು ಗುಂಡೇಟಿನಿಂದ ಯಾರು ಯಾರು ಸತ್ತಿದ್ದಾರೆ, ಅವರ ಕುಟುಂಬದವರಿಗೆ ಕೂಡಲೇ ಪರಿಹಾರವನ್ನು ಒದಗಿಸಬೇಕೆಂದು ಕೇಳಿಕೊಂಡು, ಈ ರೈತ ಚಳುವಳಿ ಇಡೀ ರಾಜ್ಯಕ್ಕೆ ಹರಡುವುದಕ್ಕೆ ಮೊದಲೇ ಅವರನ್ನು ಕರೆಸಿಕೊಂಡು ಮಾತನಾಡಿ ಅವರಿಗೆ ನ್ಯಾಯ

ದೊರಕಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ ರಾಮದೇವ್ (ಮಲ್ಲೇಶ್ವರಂ).—ಸ್ವಾಮಿ, ನಾನು ಈ ಒಂದು ಘಟನೆ ನಡೆದ ಸ್ಥಳಕ್ಕೆ ಹೋಗಿಲ್ಲ ಮತ್ತು ನಾನು ರೈತನಲ್ಲ. ಆದರೂ ಸಹ ಅಲ್ಲಿ ನಡೆದ ಗೋಲಿಬಾರ್ ಬಗ್ಗೆ ಹೇಳಬೇಕಾಗಿದೆ. ನನಗೆ ಏನು ಸಂತೋಷವೆಂದರೆ, ಶ್ರೀ ಶ್ರೀನಿವಾಸ್ ಅವರು ಇದಕ್ಕೆ ಬೆಂಬಲ ಕೊಟ್ಟು, ಇದರ ಬಗ್ಗೆ ವಿಚಾರಣೆಯಾಗಬೇಕೆಂದು ಹೇಳಿದ್ದು ಮತ್ತು ಶ್ರೀ ಬಸವಣ್ಣಪ್ಪನವರು ಈ ಘಟನೆಯ ಬಗ್ಗೆ ಸರ್ಕಾರ ರಾಜೀನಾಮೆ ಕೊಡಬೇಕೆಂದು ಕೇಳಿದ್ದು. ಆಳುವ ಪಕ್ಷದಲ್ಲಿರುವ ಸದಸ್ಯರೇ ಧೈರ್ಯ ಮಾಡಿ ಈ ರೀತಿ ಮಾತನಾಡುವುದು ಅಪರೂಪ, ಅಂಥಾದ್ದರಲ್ಲಿಯೂ ಈ ಇಬ್ಬರು ಸದಸ್ಯರುಗಳು ಆ ರೀತಿ ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಶ್ರೀ ಶ್ರೀನಿವಾಸ್ ಅವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಯಾವ ಸರ್ಕಾರವೇ ಆಗಲಿ ಪೋಲೀಸರು ಇಲ್ಲದೆ ಆಡಳಿತ ನಡೆಸುವುದಕ್ಕಾಗುವುದಿಲ್ಲ ಎಂದು,

ಶ್ರೀ ಕೆ ಎಚ್. ಶ್ರೀನಿವಾಸ್.—ಎರಡು ಮೂರು ಜನ ಸದಸ್ಯರು ಇದೇ ವಿಚಾರ ಹೇಳಿದರು. ಆದರೆ ನಾನು ಹೇಳಿದ್ದೇನೆಂದರೆ, ಸರ್ಕಾರದ ಮುಂದೆ ಯಾವಾಗಲೂ ಇಂತಹ ವಿಚಾರಗಳು ಬಂದಾಗ ಪೋಲೀಸರ ನೈತಿಕ ಧೈರ್ಯವನ್ನು ಕೆಡಿಸಬಾರದು ಎಂದು ಮತ್ತು ಯಾವ ಸರ್ಕಾರವೇ ಆಗಲಿ, ಪೋಲೀಸರ ಸಹಕಾರವಿಲ್ಲದೆ ಆಡಳಿತ ನಡೆಸುವುದಕ್ಕಾಗುವುದಿಲ್ಲ ಎಂದು; ಇದರ ಜೊತೆಗೆ ಪೋಲೀಸರು ಯಾವುದೇ ಸಂದರ್ಭದಲ್ಲಿಯಾಗಲಿ ಒಬ್ಬ ಮನುಷ್ಯನನ್ನು ಕೊಂದು ನಂತರ ೫ ಸಾವಿರ ರೂಪಾಯಿಗಳ ಪರಿಹಾರ ಕೊಡುವುದು ಏನಿದೆ ಇದು ಅಪಾಯ ಎಂದು ಎಲ್ಲವನ್ನೂ ಜೋಡಿಸಿ ಹೇಳಿದ್ದೇವೆ. ಆದ ಕಾರಣ ತಾವು ನಾನು ಹೇಳಿದ್ದನ್ನು ಪ್ರತ್ಯೇಕ ಮಾಡಿ ಹೇಳಬೇಡಿ.

ಶ್ರೀ ಪಿ ರಾಮದೇವ್.—ತಾವು ಕ್ಲಾರಿಫೈ ಮಾಡಿರಿ. ಈ ಪೋಲೀಸರು ಮನೆ ಕಾಯುಲು ವಾಚ್‌ಮನ್ ಇದ್ದಂತೆ ಇರಬೇಕು. ಮನೆಕಾಯಲು ವಾಚ್‌ಮನ್‌ಗೆ ದೊಣ್ಣೆ ಮತ್ತು ಗನ್ ಕೊಟ್ಟಿರುತ್ತಾರೆ. ಆದರೆ ವಾಚ್‌ಮನ್ ಆದವನು ಮನೆ ಮಾಲೀಕರ ಮೇಲೆ ತಿರುಗಿ ಬಿದ್ದರೆ ಹೇಗೆ? ಇಂತಹ ಒಂದು ಕೆಲಸವನ್ನು ನಿಮ್ಮ ಪೋಲೀಸಿನವರು ಮಾಡುತ್ತಿದ್ದಾರೆ. ಈ ಸರ್ಕಾರಕ್ಕೆ ಮಸಿ ಬಳಿಯುವಂತಹ ಕೆಲಸವನ್ನು ಪೋಲೀಸ್ ಅಧಿಕಾರಿಗಳು ಮಾಡುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯ ಎಸ್ ಪಿ. ಆದಂಥ ಶ್ರೀ ಅಧೀಪ್‌ಕುಮಾರ್ ಸಿಂಗ್ ಅಖಿಲೇಶ್ ಅವರು ರೈತರೇ ಗುಂಡು ಹಾರಿಸಿದರೆಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಒಂದು ವೇಳೆ ರೈತರೇ ಗುಂಡು ಹಾರಿಸಿದ್ದರ ಅವರ ಮೇಲೆ ಮೊಕದ್ದಮೆ ಹೂಡಬೇಕಾಗಿತ್ತು, ಈ ಕೆಲಸ ಏತಕ್ಕೆ ಮಾಡಲಿಲ್ಲ? ಅವರು ಎಷ್ಟು ಸುಳ್ಳು ಹೇಳುತ್ತಾರೆಂಬುದು ಇದರಿಂದಲೇ ತಿಳಿಯುತ್ತದೆ. ರೈತರು ಗುಂಡು ಹಾರಿಸಿದರು ಎಂದು ಹೇಳುವುದಾದರೆ, ರೈತರಿಗೆ ಏನಾದರು ಕೋವಿಗಳನ್ನು ಇಟ್ಟುಕೊಳ್ಳಲು ಲೈಸನ್ಸ್ ಕೊಟ್ಟಿದ್ದೀರಾ? ಈ ಘಟನೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ರಕ್ಷಣೆ ಕೊಡಲು ಅವರು ಈ ರೀತಿ ಬೇಜವಾಬ್ದಾರಿಯಿಂದ ಹೇಳಿಕೆ ಕೊಟ್ಟಿದ್ದಾರೆ; ಇವೊತ್ತಿನ ದಿವಸ ಮಂತ್ರಿಗಳು ಜನಸಾಮಾನ್ಯರಿಂದ ಬಹಳ ದೂರ ದೂರ ಹೋಗಿದ್ದಾರೆ. ಇವರು ಹೋದ ಕಡೆಗಳಿಗೆಲ್ಲಾ ೫ ಜನರ ಪೋಲೀಸ್ ಬಾಡಿಗಾರ್ಡ್ ಇರುತ್ತದೆ. ಶ್ರೀ ಕಾಗೋಡು ತಿಮ್ಮಪ್ಪನವರು ಎಲ್ಲಿಗಾದರೂ ಹೊರಟರೆ ಅವರ ಹಿಂದೆ ೨ ಪೋಲೀಸ್ ವ್ಯಾನ್‌ಗಳಿರುತ್ತವೆ. ಹೀಗೆ ಇವರನ್ನು ಕಾಯಲು ಮತ್ತು ವಿಧಾನಸೌಧ ಕಾಯಲು ಪೋಲೀಸರು ಇದ್ದಾರೆಯೇ ಹೊರತು ಜನಸಾಮಾನ್ಯರ ಹಿತ ಕಾಯುವುದನ್ನು ಬಿಟ್ಟು ಬಿಟ್ಟಿದ್ದಾರೆ. ಈ ಪೋಲೀಸರನ್ನು ಮಂತ್ರಿಗಳು ತಮ್ಮ ಸೇವಕರನ್ನಾಗಿ ಇಲ್ಲವೇ ಆಳುಗಳನ್ನಾಗಿ ಮಾಡಿಕೊಂಡಿದ್ದಾರೆ. ಈ ಪ್ರಕರಣದ ಬಗ್ಗೆ ತನಿಖೆ ಮಾಡಲು ಈಗ ನಾಲ್ಕು ಟರ್ಮ್ಸ್ ಆಫ್ ರೆಫರೆನ್ಸ್ ಏನು ಕೊಟ್ಟಿದ್ದೀರಿ? ಅದರ ಜೊತೆಗೆ ಅಲ್ಲಿನ ಎಸ್ ಪಿ. ಅವರು ಏನು ಹೇಳಿಕೆ ಕೊಟ್ಟಿದ್ದಾರೆ, ಅದನ್ನು ಸಹ ಸೇರಿಸಬೇಕು ಮತ್ತು ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ಏಕೆಂದರೆ, ಇವರು ರೈತರೇ ಗುಂಡು ಹಾರಿಸಿದರೆಂದು ಹೇಳಿಕೆ ಕೊಟ್ಟಿದ್ದಾರೆ. ಈ ಅಧಿಕಾರಿಗಳ ಕೆಲಸವೇನೆಂದರೆ, ಮಂತ್ರಿಗಳು ಹೋದ ಕಡೆಗಳಲ್ಲಿ ಅವರಿಗೆ ಬೇಕಾಗಿರುವುದನ್ನು ಸರಬರಾಜು ಮಾಡುವುದು. ಒಂದು ವೇಳೆ ಈ ಒಂದು ಕೆಲಸವನ್ನು ಯಾರಾದರೂ ಮಾಡದಿದ್ದರೆ, ಅಂತಹವರನ್ನು ಯು.ಪಿ.ಗೋ ಇಲ್ಲವೇ ನಾಗಾಲ್ಯಾಂಡ್‌ಗೋ ಕಳಿಸುತ್ತೀರಿ. ಈ ಪೋಲೀಸರ ಕೆಲಸವೇನೆಂದರೆ, ಮಂತ್ರಿಗಳ ಸಭೆಗೆ ಸಭಿಕರನ್ನು ಕರೆದುಕೊಂಡು ಹೋಗುವುದು. ೨೦ ಅಂಶಗಳ ಕಾರ್ಯಕ್ರಮದ ಸಭೆಗೆ ಮಂತ್ರಿಗಳು ಹೋದಾಗ ಜನರು ತಾವಾಗಿಯೇ ಬರುವುದಿಲ್ಲವೆಂದುಕೊಂಡು ಪೋಲೀಸಿನವರು ಜನರನು ಕರೆದುಕೊಂಡು ಹೋಗುತ್ತಾರೆ. ಇಂತಹ ಒಂದು

ದುರ್ಗತಿ ಬಂದಿರುವುದಕ್ಕೆ ಏನು ಹೇಳಬೇಕೋ ಗೊತ್ತಿಲ್ಲ. ನಿಮ್ಮ ಪಕ್ಷದಲ್ಲಿರುವಂಥಹ ಶ್ರೀ ಇಬ್ರಾಹಿಂ ಅವರು ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರು ನಿಮ್ಮ ಪಕ್ಷಕ್ಕೆ ಎಷ್ಟು ಕೀರ್ತಿ ತಂದಿದ್ದಾರೆಂಬುದು ಅವರ ಕಾರ್ಯಕ್ರಮಗಳಿಂದಲೇ ತಿಳಿದುಬರುತ್ತದೆ. ಅವರು ರಾಜೀನಾಮೆ ಕೊಡುವುದಕ್ಕೆ ಏತಕ್ಕೆ ಹಿಂಜರಿಯುತ್ತಾರೋ ಗೊತ್ತಿಲ್ಲ. ನೀವು ಅವರಿಗೆ ಔದಾರ್ಯ ತೋರಿಸುತ್ತಿದ್ದೀರಿ. ಕ್ರಿಯಾತ್ಮಕವಾಗಿ ಹೇಳುವುದಾದರೆ ಅವರು ರಾಜೀನಾಮೆ ಕೊಡಲೇಬೇಕು. ನಾವೇನಾದರೂ ಚಳುವಳಿ ಮಾಡಿದರೆ ನಮ್ಮನ್ನೆಲ್ಲಾ ಅದನು ಮಾಡುತ್ತೀರಿ. ಅವರು ಇದರಲ್ಲಿ ಭಾಗಿಯಾಗಿ ಎಷ್ಟು ಕೆಲಸಮಾಡಿಸಿದ್ದರೂ ಕೂಡ ಇವರನ್ನೇಕೆ ಅರೆಸ್ಟ್ ಮಾಡಿಸಲಿಲ್ಲಾ ? ನಾವು ಇಂಥಾ ಕೆಲಸ ಏನಾದರೂ ಮಾಡಿದರೆ ನಮ್ಮ ಮೇಲೆ ಕೇಸು ಹಾಕಿಸುತ್ತೀರಾ ? ಮಂತ್ರಿಗಳು ಈ ಕೆಲಸ ಮಾಡಿದ್ದಾರಲ್ಲಾ ಅವರ ಮೇಲೆ ಏತಕ್ಕೆ ಕೇಸು ಹಾಕಿಲ್ಲ? ಅವರು ೩ ಜನರ ಪ್ರಾಣ ತೆಗೆದುಕೊಂಡಿದ್ದಾರಲ್ಲಾ ಅವರನ್ನೇಕೆ ಅರೆಸ್ಟ್ ಮಾಡಿಸಲಿಲ್ಲ? ಅವರನ್ನೇಕೆ ಹೊಣೆಗಾರಿಕೆಯನ್ನಾಗಿ ಮಾಡಲಿಲ್ಲ? ಅವರ ಮೇಲೆ ಏತಕ್ಕೆ ಕೇಸ್ ಹಾಕಿಲ್ಲ? Why he has not been arrested so fa ? Is he not the instigator? Is he not the Conspirator? ೧೩ನೇ ತಾರೀಕಿನಿಂದಲೂ ಅಲ್ಲಿ ಸಭೆ ನಡೆಸಿದ್ದಾರೆ. ಆದರೆ ಮುಂಗೋಟಿಯಲ್ಲಿ ೨೫ನೇ ತಾರೀಕು ಸಭೆ ಮಾಡುತ್ತೇವೆಂದು ಹೇಳಿದ್ದಾರೆ ಆಮೇಲೆ ಇವರು ನಾನು ಅಲ್ಲಿಗೆ ಹೋಗಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಸಭೆ ಮಾಡಬೇಕೆಂದು ಮೊದಲೇ ತೀರ್ಮಾನ ಮಾಡಿದ್ದಾರೆ ನಾನು ಕೇಳುತ್ತೇನೆ ಅಲ್ಲಿ ಏತಕ್ಕೆ ಸಭೆ ಮಾಡಬೇಕಾಗಿತ್ತು ಎಂದು. ರೈತರ ಬಗ್ಗೆ ಕನಿಕರ ಇದ್ದಂಥಾವರು ಆ ಕೆಲಸ ಮಾಡಬೇಕು. ಅವರು ಯಾವುದರ ಬಗ್ಗೆ ಚಳುವಳಿ ಮಾಡುತ್ತಿದ್ದಾರೆ ಎಂದು ಇವರು ವಿಚಾರಿಸಬೇಕಾಗಿತ್ತು. ಹಾಗೆ ಮಾಡಲಿಲ್ಲಾ. ಆ ರೈತರ ಚಳುವಳಿಯನ್ನು ಮುರಿಯಬೇಕು ಎನ್ನುವ ದೃಷ್ಟಿಯಿಂದ ಇವರು ಮತ್ತೊಂದು ಸಭೆ ಕರೆಯುವುದಕ್ಕೆ ಪ್ರಯತ್ನಪಟ್ಟಿದ್ದಾರೆ ಇಂಥಾ ಮಂತ್ರಿಗಳನ್ನು ಅರೆಸ್ಟ್ ಮಾಡದೇ ಹಾಗೇ ಬಿಟ್ಟಿದ್ದೀರಲ್ಲಾ. ಅದೇ ಬಡ ರೈತರು ಬಡ ಜನರು ಆ ಕೆಲಸ ಮಾಡಿದ್ದರೆ ಅವರನ್ನು ಅರೆಸ್ಟ್ ಮಾಡಿ ಕೇಸು ಹಾಕುತ್ತಿದ್ದೀರಿ. ಈ ರೀತಿ ತೊಂದರೆ ಮಾಡಿದ ಇವರನ್ನು ಹಾಗೆಯೇ ಬಿಟ್ಟಿದ್ದೀರಲ್ಲಾ ಇದು ನ್ಯಾಯವೇ? ಮೊದಲು ಇವರನ್ನು ಅರೆಸ್ಟ್ ಮಾಡಬೇಕಾಗಿತ್ತು ಎಂದು ಹೇಳುತ್ತೇನೆ. ಸ್ವಾಮಿ ಇನ್ನೊಂದು ವಿಚಾರ ಏನೆಂದರೆ ಗುಂಡು ಹಾರಿಸುವುದಕ್ಕೆ ಅನೇಕ ವಿಧಾನಗಳು ಇವೆ. ಮೊದಲು ಹುಸಿಗುಂಡು ಹಾರಿಸುತ್ತಾರೆ, ಇದು ಪತ್ರಿಕೆಯಲ್ಲೂ ಸಹ ಬಂದಿದೆ. ಆದರೆ ಈ ಗುಂಡು ಹಾರಿಸಿರುವುದು ಆ ರೀತಿ ಇಲ್ಲ. ಯಾರು ತೊಂದರೆ ಮಾಡುತ್ತಾರೋ ಅವರನ್ನು "ಷೂಟ್ ಟು ಕಿಲ್" ಅಂತ ಆರ್ಡರ್ ಮಾಡಿದ್ದಾರೆ. ಆ ರೈತರಿಗೆ "ಷೂಟ್ ಟು ಕಿಲ್" ಎಂದರೆ ಏನು ಅನ್ನುವುದು ಗೊತ್ತಿಲ್ಲ, ಮೇಲಾಗಿ ತಾವು ಮೊದಲು ಅಶ್ರುವಾಯು ಉಪಯೋಗಿಸಿದ್ದೇವೆ ಅಂತ ಹೇಳುತ್ತೀರಿ, ಆ ಬಡ ರೈತರಿಗೆ ಅಶ್ರು ಯಾವುದೋ ವಾಯು ಯಾವುದೋ ಅನ್ನುವುದು ಮೊದಲೇ ಗೊತ್ತಿಲ್ಲ. ಮೊದಲೇ ಮಂತ್ರಿಗಳು ಆಗಲಿ ಅಥವಾ ಎಸ್ ಪಿ. ಅವರಾಗಲಿ ಮನಸ್ಸು ಮಾಡಿದ್ದರೆ ಈ ಗುಂಡು ಹಾರಿಸುವುದನ್ನು ತಪ್ಪಿಸಬಹುದಾಗಿತ್ತು. ಅವರ ಕೈಯಲ್ಲಿತ್ತು. ಈವಾಗ ನೀವು ಈ ಕೆಲಸ ಮಾಡಿರುವುದರಿಂದ ಪೂರ್ವಯೋಜಿತವಾಗಿ ಉದ್ದೇಶ ಇಟ್ಟುಕೊಂಡು ಆ ರೈತರ ಚಳುವಳಿಯನ್ನು ಮುರಿಯಬೇಕು ಎಂದು ಮನಸ್ಸು ಮಾಡಿದಿರಿ ಅನ್ನುವ ಭಾವನೆ ನಮಗೆ ಬರುತ್ತದೆ. ಆದುದರಿಂದ ನಾನು ಈಗ ತಮ್ಮಲ್ಲಿ ಕೇಳುವುದೇನೆಂದರೆ, ಮಾನ್ಯ ದೇವೇಗೌಡರು ೪ ಆಧಾರಗಳನ್ನು ಏನು ಹೇಳಿದರೋ ಅದರಲ್ಲಿ ೫ನೇ ಐಟಂ ಆಗಿ ಅಲ್ಲಿರುವ ಎಸ್.ಪಿ. ಪಾತ್ರ ಏನು ಆ ಅಧಿಕಾರಿಯ ಹೆಸರನ್ನೂ ಸಹ ಇದರಲ್ಲಿ ಸೇರಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ಮತ್ತು ತಕ್ಷಣವಾಗಿ ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇಲ್ಲವೇ ಅವರನ್ನು ಮಂತ್ರಿ ಪದವಿಯಿಂದ ತೆಗೆದುಹಾಕಬೇಕೆಂದು ಕೇಳುತ್ತೇನೆ. ಆ ಜನರ ಮೇಲೆ ಕೇಸುಗಳನ್ನು ಆ ಪೊಲೀಸ್ ಅಧಿಕಾರಿ ಏನು ಹಾಕಿದ್ದಾನೆ ಆ ಅಧಿಕಾರಿಯನ್ನು ಈ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಲೋಕೋಪಯೋಗಿ ಇಲಾಖೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಮೇಲೆ ನೇರವಾಗಿ ಬಂದಂಥಾ ಆಪಾದನೆಗಳನ್ನು ಅಲ್ಲಗಳೆಯಬೇಕಾದ ಜವಾಬ್ದಾರಿ ನನ್ನ ಮೇಲೆ ಇರುವುದರಿಂದ ಅದಕ್ಕೆ ಉತ್ತರವನ್ನು ಕೊಡುತ್ತಿದ್ದೇನೆ. ಕೊನೆಯದಾಗಿ ಮಾತನಾಡಿದ ಶ್ರೀ ಪಿ. ರಾಮದೇವ್‌ರವರು ಮಂತ್ರಿಗಳ ಮೇಲೆ ಕೇಸ್ ಹಾಕಬೇಕಾಗಿತ್ತು. ಮಂತ್ರಿಗಳು ರಾಜೀನಾಮೆ ಕೊಡಬೇಕು ಮಂತ್ರಿಗಳನ್ನು ಓಡಿಸಬೇಕು ಈ ಮಾತನ್ನು ಹೇಳುವಾಗ ನಾನೂ ಸಹ ಅವರನ್ನು ಕೇಳ

ಬೇಕಾಗುತ್ತದೆ. ಅವರು ಸ್ವಿಮ್ಮಿಂಗಪೂಲ್ ಅಧ್ಯಕ್ಷರಾಗಿದ್ದಾರೆ. ಅದರ ಹೆಸರಿನಲ್ಲಿ ಇಂಟರ್‌ನ್ಯಾಷನಲ್ ಕಾನ್‌ಫರೆನ್ಸ್ ಹೋಗುತ್ತಾರೆ ಅವರು ಬಹಳ ದಿವಸದಿಂದಲ್ಲೂ ಅಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆದಿಲ್ಲ ಇದನ್ನು ತಿಳಿದುಕೊಂಡರೆ ನಾನು ರಾಜೀನಾಮೆ ಕೊಡುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಪಿ ರಾಮದೇವ್.—ಸ್ವಾಮಿ, ಸ್ವಲ್ಪ ವಿಷಯಗಳನ್ನು ತಿಳಿದುಕೊಂಡು ಮಾತನಾಡಬೇಕು ಸ್ವಾಮಿ. ನಾನು ಸ್ವಿಮ್ಮಿಂಗ್ ಪೂಲ್ ಅಧ್ಯಕ್ಷನೂ ಅಲ್ಲ I am the General Secretary of the Swimming Federation of India. ಈ 22ನೇ ತಾರೀಖು ಅವರ ಕಾನ್‌ಫರೆನ್ಸ್ ಇದೆ. ಏನಾದರೂ ಮಾತನಾಡಿದರೆ ಜವಾಬ್ದಾರಿಯಿಂದ ಮಾತನಾಡಬೇಕು, ಬೇಜವಾಬ್ದಾರಿಯಿಂದ ಮಾತನಾಡಬಾರದು. ತಾವು ಹೇಳಿದ ಸ್ವಿಮ್ಮಿಂಗ್ ಪೂಲ್‌ಗೆ ನಾನು ಅಧ್ಯಕ್ಷನೂ ಅಲ್ಲ ಸೆಕ್ರೆಟರಿನೂ ಅಲ್ಲ. ಅದಕ್ಕೆ ಲಕ್ಷ್ಮಣರಾವ್ ಅವರು ಅಧ್ಯಕ್ಷರಾಗಿದ್ದಾರೆ. ಸ್ವಲ್ಪ ತಿಳಿದುಕೊಂಡು ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಶಾಸಕರಾಗಿ ಏನು ಕೆಲಸಮಾಡುತ್ತಿದ್ದೀರಿ ಅನ್ನುವುದು ನನಗೆ ಗೊತ್ತಿದೆ.

ಶ್ರೀ ಪಿ. ರಾಮದೇವ್.—ನೀವೇನು ಮಾಡುತ್ತಿದ್ದೀರಿ ಅನ್ನುವುದೂ ನನಗೆ ಗೊತ್ತಿದೆ. ರೈತರನ್ನು ಏನು ಗೋಳುಹುಯ್ದುಕೊಳ್ಳುತ್ತಿದ್ದೀರಿ ಅನ್ನುವುದೂ ನನಗೆ ಗೊತ್ತಿದೆ. ನೀವು ಹಣ ಹೇಗೆ ಸಂಪಾದನೆ ಮಾಡುತ್ತಿದ್ದೀರಿ ಅನ್ನುವುದೂ ಗೊತ್ತಿದೆ. ಒಬ್ಬರ ಮೇಲೆ ಮಾತನಾಡುವಾಗ ಸುಮ್ಮಸುಮ್ಮನೆ ಅಪಾದನೆ ಮಾಡಬಾರದು.

ಶ್ರೀ ಕಾಗೋಡುತಿಮ್ಮಪ್ಪ.—ದಯವಿಟ್ಟು ಸಿಟ್ಟಾಗ ಬೇಡಿ. ಶ್ರೀಮಾನ್ ಬಸವಣ್ಣಪ್ಪನವರೂ ಕೂಡ ರಾಜೀನಾಮೆ ಕೊಡಬೇಕೆಂದು ಹೇಳಿದ್ದಾರೆ. ನಾನು ರಾಜೀನಾಮೆ ಕೊಟ್ಟರೆ ಅವರು ಮಂತ್ರಿಗಳು ಆಗೋದಾದ್ರೆ ರಾಜೀನಾಮೆ ಕೊಡಲು ಸಿದ್ಧ.

ಶ್ರೀ ಜಿ ಬಸವಣ್ಣಪ್ಪ.—ನನಗೆ ಮಂತ್ರಿಯಾಗುವ ಆಸೆ ಇಲ್ಲ. ನೀವು ಮಂತ್ರಿ ಆಗಬೇಕು ಎಂದರೂ ನಾನು ಮಂತ್ರಿಯಾಗುವುದಿಲ್ಲ. ನಾನು ದುರುದ್ದೇಶವನ್ನಿಟ್ಟುಕೊಂಡು ಮಾತನಾಡಿಲ್ಲಾ. ಆ ಕ್ಷೇತ್ರವಲ್ಲಿನ ಜನರ ಕಷ್ಟವನ್ನು ತಿಳಿದು ಬಂದು ಹೇಳುತ್ತಿದ್ದೇನೆ. ಅವರ ಬಗ್ಗೆ ತಾವು ' ಎನ್‌ಕ್ವೈರಿ ಮಾಡಿಸಿದರೆ ಸತ್ಯವಾದ ಘಟನೆ ಏನು ಅನ್ನುವುದು ಗೊತ್ತಾಗುತ್ತದೆ, ಬೇರೆ ಯಾವ ದುರುದ್ದೇಶವೂ ಇಲ್ಲ.

ಶ್ರೀ ಕಗೋಡುತಿಮ್ಮಪ್ಪ.—ಆದುದರಿಂದ ಶ್ರೀ ಬಸವಣ್ಣಪ್ಪನವರು ಅಲ್ಲಿ ವಿಷಯಗಳನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡು ಬಂದಿಲ್ಲ ಎನ್ನುವುದನ್ನು ಅಷ್ಟು ಮಾತ್ರ ಹೇಳುತ್ತೇನೆ. ನಾನು ಹೆಚ್ಚು ವಿವರ ಹೇಳುವುದಕ್ಕೆ ಹೋಗುವುದಿಲ್ಲ. ಅವರು ನನ್ನ ಹಳೇ ಸ್ನೇಹಿತರು ರಾಜಕೀಯ ಯಾವ್ಯಾವ ರೀತಿ ಇರುತ್ತದೆ ಈವೊತ್ತು ಅನ್ನೂವುದೂ ಗೊತ್ತು, ಸಂತೋಷ ಅಡ್ಡಿ ಇಲ್ಲ. ನನ್ನನ್ನು ಅವರು ರೈತರ ವಿರೋಧಿ ರೈತ ಸಂಘಟನೆಯನ್ನು ಒಡೆಯುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಈ ಒಂದು ಧಾಟಿಯಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅಧ್ಯಕ್ಷರೇ, ನಾನು ಹೇಳಬೇಕೆದರೆ ನಾನು ಆ ರೀತಿ ಎಂದಿಗೂ ಪ್ರಯತ್ನ ಮಾಡಿಲ್ಲಾ. ಹಾಗೆ ಅವರ ಒಗ್ಗಟ್ಟನ್ನು ಒಡೆಯುವವನೂ ಅಲ್ಲ. ಹಾಗೆ ಒಗ್ಗಟನ್ನು ಒಡೆಯುವುದಕ್ಕೆ ಕಾರಣವೂ ಇಲ್ಲ. ಮಾನ್ಯ ಸದಸ್ಯರಿಗೆ ರೈತರ ಸಮಸ್ಯೆ ಬಗ್ಗೆ ಎಷ್ಟರಮಟ್ಟಿಗೆ ಕಳಕಳಿ ಇವೆಯೋ ನನಗೂ ಅಷ್ಟೇ ಇದೆ ಎಂದು ಹೇಳುತ್ತೇನೆ. ನಾನೂ ಕೂಡ ನನ್ನ ವಯಸ್ಸಿನಲ್ಲಿ ರೈತರ ಸಂಘಟನೆ ಬಗ್ಗೆ ಚಳುವಳಿ ಮಾಡಿದ್ದೇನೆ. ಇದರಲ್ಲಿ ಏನು ಇದೆಯೋ ನನಗೆ ಗೊತ್ತಿಲ್ಲ. ನನಗೆ ಕಂಡ ಹಾಗೆ ಇವರು ಹೇಳತಕ್ಕಂಥಾ ಮಾತು ನನಗೆ ಸಲ್ಲತಕ್ಕಂಥಾ ಮಾತಲ್ಲ ಅಂತ ಹೇಳಬೇಕಾಗಿದೆ. ಅವರಿಗೆ ರೈತರ ಬಗ್ಗೆ ಎಷ್ಟರಮಟ್ಟಿಗೆ ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೆ ಇದೆ. ಮಾನ್ಯ ಜೆ ಹೆಚ್. ಪಟೇಲರು ಇಂಥಾ ಸನ್ನಿವೇಶದಲ್ಲಿ ಇದರ ಬಗ್ಗೆ ಬಿಚ್ಚು ಮನಸ್ಸಿನ ಮಾತು ಹೇಳಬೇಕಾಗಿತ್ತು. ಅದನ್ನು ಹೇಳಲಿಲ್ಲಾ, ಎನ್ನುವುದು ನನಗೆ ವೇದನೆಯಾಗುತ್ತದೆ. ಮಾನ್ಯ ಅಧ್ಯಕ್ಷರೇ, ರೈತ ಸಂಘದ ಅಧ್ಯಕ್ಷರಾದ ಶ್ರೀಮಾನ್ ರುದ್ರಪ್ಪನವರ ಜೊತೆಯಲ್ಲಿ ನಾನು ನಾಲ್ಕಾರು ಬಾರಿ ಮಾತನಾಡಿದ್ದೇನೆ. ಸರ್ಕಾರದ ನಿಲುವನ್ನೂ ಮತ್ತು ಮಾನ್ಯ ಮುಖ್ಯಮಂತ್ರಿಗಳ ನಿಲುವನ್ನೂ ಸಹ ಅವರಲ್ಲಿ ಸ್ಪಷ್ಟಪಡಿಸಿದ್ದೇನೆ. ಅವರೂ ಸಹ ರೈತರ ಬಗ್ಗೆ ತಮ್ಮ ಕಳಕಳಿಯನ್ನು ಹೇಳಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಮಧ್ಯವಾಗಿ ಹೋಗಿ ನನ್ನ ವಿರುದ್ಧವಾಗಿ ಚಳುವಳಿ ಮಾಡಿದರು ನನ್ನ ಕೈ ಮೀರಿತು, ನನ್ನ ಮೇಲೆ ಏನೇನೋ ಮಾತನಾಡಿದ್ದಾರೆ. ಈ ಒಂದು ಘಟನೆಯನ್ನು ಯಾವಾಗ ಮಾಡಿದರು ಎಂದರೆ ನಾನು ಇದರ ಬಗ್ಗೆ ರೇಡಿಯೋ ಭಾಷಣ ಮಾಡಿದೆ. ಆ ರೇಡಿಯೋ ಭಾಷಣದ ಒಂದೆರಡು ಸಾಲುಗಳನ್ನು ಹಿಡಿದು ನಾನು ಪೂರ್ವಾಗ್ರಹ ಪೀಡಿತ

ವೆಂದು ಅವರು ಭಾವಿಸಿ ನನ್ನೊಡನೆ ಚರ್ಚಿಸಲು ರೈತ ಮುಖಂಡರು ಬರುವುದಿಲ್ಲ ಎಂದರು ನಾನು ಹಿಂದಿನ ದಿವಸ ಅವರ ಜೊತೆಯಲ್ಲಿ ಮಾತನಾಡಿದಾಗ ಅದರ ಬಗ್ಗೆ ಅವರು ಪ್ರಶಂಸೆ ಮಾಡಿದ್ದಾರೆ. ಮೆಚ್ಚಿದ್ದಾರೆ ನಂತರ ರೇಡಿಯೋ ಪ್ರಸಾರ ಭಾಷಣ ಕೇಳಿ ನನ್ನನ್ನು ಪೂರ್ವಾಗ್ರಹ ಪೀಡಿತನೆಂದು ಭಾವಿಸಿ ಮಾತನಾಡುವುದಕ್ಕೆ ಬರುವುದಿಲ್ಲ ಎಂದರೆ ನಾನು ಹೇಳಬೇಕಾಗುತ್ತದೆ ! ಅದು ನನ್ನ ಸ್ವಂತ ಭಾಷಣವಲ್ಲ. ನಾನು ಮಾತನಾಡಿದ್ದು ಸರ್ಕಾರದ ವಕ್ತಾರನಾಗಿ ಮಾತನಾಡಿದ್ದೇನೆ. ಸರ್ಕಾರದ ವರದಿ ಏನು ಇದೆ ಅದನ್ನು ಹೇಳಿದ್ದೇನೆ ನಾನು ಸರ್ಕಾರದ ಮಂತ್ರಿಯಾಗಿ ಹೇಳಿರುವುದರಿಂದ ನನ್ನನ್ನು ಪೂರ್ವಾಗ್ರಹ ಪೀಡಿತನೆಂದು ಅವರು ಭಾವಿಸಿದರೆ ಸರ್ಕಾರವೇ ಪೂರ್ವಾಗ್ರಹ ಪೀಡಿತ ಎಂದಂತೆ ಆಗುವುದಿಲ್ಲವೇ ? ಮಾನ್ಯ ಜೆ. ಹೆಚ್. ಪಟೇಲರು ಕೂಡ ಮಾತನಾಡಿದ್ದಾರೆ. ನಾನು ರೇಡಿಯೋದಲ್ಲಿ ಏನು ಪ್ರಸಾರ ಮಾಡಿದ್ದೇನೆ ಅನ್ನುವುದನ್ನು ತಮಗೆ ಗೊತ್ತು. ಅದರ ಜೊತೆಗೆ ಒಂದು ಪತ್ರವನ್ನೂ ಸಹ ಪ್ರಕಟಣೆ ಮಾಡಿದ್ದೇನೆ ಆ ಪತ್ರದಲ್ಲಿ ಹೆಡ್‌ಲೈನ್ ಈ ರೀತಿ ಇದೆ.—ಪರಸ್ಪರ ಪ್ರಶಂಸೆಗೆ ಆಧಾರ ಎಂದು ಇದೆ. ಇದು ಒಂದು ಬಿಟ್ಟು ಬೇರೆ ಯಾವ ಒಂದು ಅಂಶವನ್ನೂ ಅದರಲ್ಲಿ ಸೇರಿಸಿಲ್ಲ. ನಾನು ರೈತರ ಬಗ್ಗೆ ಪೂರ್ವಾಗ್ರಹ ಪೀಡಿತ ಅಂತ ಭಾವಿಸುವುದಾದರೆ ಇಡೀ ಸರ್ಕಾರವೇ ಪೂರ್ವಾಗ್ರಹ ಪೀಡಿತವಾಗಿದೆ ಬೇರೆ ಹೇಳಬೇಕಾಗಿಲ್ಲ. ಮುಖ್ಯಮಂತ್ರಿಗಳಿಗೂ ಮತ್ತು ರೈತರಿಗೂ ಇರತಕ್ಕಂಥಾ ಸಂಬಂಧವನ್ನು ಮುಂದುವರೆಸುವುದಕ್ಕೆ ಕಾಗೋಡು ತಿಮ್ಮಪ್ಪನವರು ಪ್ರಯತ್ನಪಟ್ಟಿದ್ದರೆ ಅದು ಸರಿಯಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ ಏಕೆಂದರೆ ಸರ್ಕಾರದ ಕೆಲಸ ಮಾಡಬೇಕಾದರೆ ಸರ್ಕಾರ ಒಂದು ಸಂಯುಕ್ತ ಸ್ವರೂಪದಲ್ಲಿ ಸೇರಿ ಕೆಲಸ ಮಾಡಬೇಕಾಗುತ್ತದೆ; ಸರ್ಕಾರದ ಧೋರಣೆಯನ್ನು ಅನುಸರಿಸಿ ಮಾತನಾಡಬೇಕಾಗುತ್ತದೆ. ಅದನ್ನು ನಾನು ಜೆ. ಹೆಚ್. ಪಟೇಲರಿಗೆ ಬೇರೆ ಹೇಳಬೇಕಾಗಿಲ್ಲ. ಅವರು ವಿಶೇಷವಾಗಿ ಒಂದು ಪದವನ್ನು ಹೇಳುತ್ತಿದ್ದರು, ಅದರಲ್ಲಿ ಒಂದು ಪ್ಯಾರಾ ಇದೆ. ಬಾಕಿ ಮರುಪಾವತಿಯ ವಿಚಾರದಲ್ಲಿ ಸಣ್ಣ ರೈತರಿಗೆ ಉತ್ಸುಕರಾಗಿದ್ದಾರೆ. ದೊಡ್ಡ ರೈತರು ಕೆಲವರು ಅದನ್ನು ಹಿಂತಿರುಗಿಸುವ ಮನೋಭಾವವುಳ್ಳವರಾಗಿದ್ದಾರೆ. ಈ ಸ್ವಯಂ ಇಚ್ಛೆಯಿಂದ ಕೊಡುವುದಕ್ಕೆ ಮುಂದೆ ಬರುವ ರೈತರನ್ನು ಪ್ರಚೋದಿಸಿ ಬಾಕಿ ಕೊಡದಂತೆ ತಡೆಗಟ್ಟುತ್ತಾ ಇರುವವರು ಕೆಲವು ಜನ ಸ್ವಹಿತಾಸಕ್ತಿಯ ದೊಡ್ಡ ಬಾಕಿದಾರ ರೈತರು—ಈ ವಾಕ್ಯದ ಬಗ್ಗೆ ನಾನು ವಿಶೇಷವಾಗಿ ಪ್ರಸ್ತಾಪ ಮಾಡಿದ್ದೇನೆ. ಸರ್ಕಾರದ ಪರವಾಗಿ ಪ್ರಕಟವಾಗಿರತಕ್ಕಂಥ ಅಂಶವನ್ನು ಕೂಡ ನಾನು ಹೇಳಿದ್ದೇನೆ. ಆದ್ದರಿಂದ ಇಂತಹ ಒಂದು ಮಾತಿನಿಂದ ಒಂದು ಸಿದ್ಧಾಂತವನ್ನು ತಯಾರು ಮಾಡಿ ಇವರು ರೈತರ ವಿರುದ್ಧವಾಗಿದ್ದಾರೆ. ಎಂದು ಹೇಳಿ—ಹೇಳಿ ಕತೆ ಕಟ್ಟುತ್ತಾ ಹೋದರೆ ನಾನು ಏನು ಮಾಡುವುದು ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅಲ್ಲಿ ಸತ್ಯಾಗ್ರಹ ಮಾಡುವವರೆಲ್ಲರೂ ಐಶ್ವರ್ಯವಂತರು ಎಂದು ಹೇಳಿದ ಮೇಲೆ ಇನ್ನು ನೀವು ಪೂರ್ವಾಗ್ರಹಪೀಡಿತರಲ್ಲ ಎಂದು ಹೇಗೆ ಬರುತ್ತದೆ ? ನೀವು ನಿಮ್ಮ ಭಾಷಣದಲ್ಲಿ ಅಲ್ಲಿ ಈ ಸತ್ಯಾಗ್ರಹ ಮಾಡತಕ್ಕಂಥವರೆಲ್ಲಾ ಐಶ್ವರ್ಯವಂತರು ರೈತರ ಚಳುವಳಿ ಮಾಡತಕ್ಕಂಥವರು ಅವರ ಪರವಾಗಿ ಮಾತತಕ್ಕಂಥವರು ಅವರ ಪರವಾಗಿ ಮಾಡತ್ತಿದ್ದಾರೆ ಎಂದು ಸೇರಿಸಿಬಿಟ್ಟ ಮೇಲೆ ನೀವು ಪೂರ್ವಾಗ್ರಹ ಪೀಡಿತರು ಎಂದು ಎಲ್ಲರಿಗೂ ಬರತಕ್ಕಂಥ ಅನುಮಾನ ಕರೆಕಪ್ಪಿಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಸ್ವಾಮಿ, ನಾನು ಈಗ ಬಿಚ್ಚು ಮನಸ್ಸಿನಿಂದ ಮಾತನಾಡಲಿಲ್ಲ ಎಂದು ಮಾನ್ಯ ಮಂತ್ರಿಯವರು ಆಗಲೇ ಹೇಳಿದರು. ನಾನು ಬಿಚ್ಚುಮನಸ್ಸಿನಿಂದ ಮಾತನಾಡಿ ಇದೇ ಅಂಶವನ್ನು ಹೇಳಿದ್ದೇನೆ. ಶ್ರೀ ಮಾನ್ ಗುಂಡೂರಾಯರಿಗೂ ನನಗೂ ಚೆನ್ನಾಗಿ ಇದೆ, ಈ ನಡುವೆ ಕಾಗೋಡು ತಿಮ್ಮಪ್ಪನವರು ಬಂದು ನಮ್ಮನ್ನು ಕೆಡಿಸುತ್ತಿದ್ದಾರೆ ಎನ್ನುವ ಅಭಿಪ್ರಾಯವನ್ನು ಮೂಡಿಸುವುದರಲ್ಲಿ ರಾಜಕೀಯ ಕುಚೋದ್ಯ ಇದೆ. ಅವರವರ ಪಾರ್ಟಿಗಳ ತಿಕ್ಕಾಟದಿಂದ ಇದನ್ನು ಮಾಡುತ್ತಿದ್ದಾರೆ ಎಂದು ಹೇಳಿದನೇ ಹೊರತು ಬೇರೇನೂ ಇಲ್ಲ ಶ್ರೀ ಕಾಗೋಡು ತಿಮ್ಮಪ್ಪನವರ ಬಗ್ಗೆ ಇರತಕ್ಕಂಥ ಮಾತುಗಳನ್ನು ಇಲ್ಲಿ ಹೇಳುವುದು ಅಪ್ರಕೃತ ಎಂದು ಹೇಳಿಲ್ಲ, ನನ್ನ ವೈಯಕ್ತಿಕ ಸಂಬಂಧವೇ ಏನೇ ಇದ್ದರೂ ನಾನು ಸರ್ಕಾರವನ್ನು ಟೀಕೆ ಮಾಡುವಾಗ ದಾಡಿನಲ್ಲಿ ಸೋದರ ಮಾವನೇ ಎನ್ನುವ ತರಹ ನಾನು ಯಾರನ್ನೂ ಸ್ಪೇರ್ ಮಾಡುವುದಕ್ಕೆ ಹೋಗುವುದಿಲ್ಲ. ಈ ರೀತಿ ನಾನು ಎಷ್ಟು ಬಿಚ್ಚು ಮನಸ್ಸಿನಿಂದ ಹೇಳಬೇಕೋ ಎಷ್ಟು ಆಬ್ಜೆಕ್ಟಿವ್ ಆಗಿ ಹೇಳಬೇಕೋ ಅದನ್ನು ಹೇಳಿದ್ದೇನೆ. ಅವರು ಈ ವಿಚಾರದಲ್ಲಿ ತಪ್ಪು ತಿಳಿದುಕೊಳ್ಳುವುದು ಬೇಡ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ನನ್ನನ್ನು, ಕಲ್ಪನೆಗಳನ್ನು ಊಹೆ ಮಾಡಿ ರೈತರ ವಿರೋಧಿ ಎಂಬ ಹೆಸರಿನಿಂದ ಕರೆಯುವುದು ಸೂಕ್ತವಾದ ಮಾತಲ್ಲ. ಮೇಲಾಗಿ ಪ್ರತಿ ಚಳುವಳಿ ಮಾಡಬೇಕೆಂಬ ಹಂಬಲ ನನಗೆ ಖಂಡಿತವಾಗಿ ಇರಲಿಲ್ಲ. ಪ್ರತಿ ಹಂತದಲ್ಲಿಯೂ ಕೂಡ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಇಚ್ಛೆ ಸದಾಕಾಲ ನನಗಿದೆ. ಇವತ್ತು ದೇವರ ಮುಂದೆ ಶ್ರೀ ರುದ್ರಪ್ಪನವರು ಮತ್ತು ನಾನು ನಿಂತು ಬೇಕಾದರೆ ಪ್ರಮಾಣ ಮಾಡುತ್ತೇನೆ. ನಾನು ರೈತರ ಚಳುವಳಿಯ ಬಗ್ಗೆ ಅವರ ಬೇಡಿಕೆಗಳ ಬಗ್ಗೆ ಏನು ಪ್ರಸ್ತಾಪ ಮಾಡಿದ್ದೇನೆ ಎಂಬುದನ್ನು ಹೇಳಲಿ, ಶ್ರೀ ರುದ್ರಪ್ಪನವರು ಒಂದು ಮಾತು ಹೇಳಿದರೆ ಒಂದು ನಿಮಿಷದಲ್ಲಿ ನಾನು ಯಾವ ಶಿಕ್ಷೆಗೆ ಬೇಕಾದರೂ ಗುರಿಯಾಗುವುದಕ್ಕೆ ತಯಾರಾಗಿದ್ದೇನೆ ಈ ಚಳುವಳಿಯ ಹಿಂದೆ ಯಾರ್ಯಾರು ಇದ್ದಾರೆ ಎಂಬುದು ಮಾನ್ಯ ಪಟೇಲ್‌ರವರಿಗೆ ಚೆನ್ನಾಗಿ ಗೊತ್ತು, ಒಂದು ಕಾಲದಲ್ಲಿ 'ಮಾನಸ' ಪತ್ರಿಕೆಯಲ್ಲಿ ಶ್ರೀ ಗೋಪಾಲಗೌಡರ ಬಗ್ಗೆ ಬರೆದಿದ್ದಾರೆ. ಈಗ ಅವರ ಬಗ್ಗೆ ವ್ಯಾಖ್ಯಾನ ಮಾಡುತ್ತಾರೆ ನೀವು ಒಂದೊಂದು ಸಲ ಅದನ್ನು ಹೇಳುವುದಿಲ್ಲ. ಏಕೆಂದರೆ ನಾವು ಹಾಸಿಗೆಗಳನ್ನು ಎತ್ತಿಕೊಂಡು ಓಡಾಡುತ್ತಾ ಇದ್ದೆವು. ನಾವು ಯಾವಾಗಲೂ ಅವರ ವಿರೋಧವಾಗಿ ಮುಖಂಡತ್ವ ಸಂಪಾದನೆ ಮಾಡುವುದಕ್ಕೆ ಹೋಗಲಿಲ್ಲ. ನೀವೇ ನಮ್ಮ ಲೀಡರ್ ಎಂದು ನಂಬಿದ್ದೆವು. ಆದರೆ ಯಾವುದೋ ಸನ್ನಿವೇಶದಲ್ಲಿ ನಾವು ಪ್ರತ್ಯೇಕವಾದೆವು ನಾವು ಒಂದೇ ಕುಟುಂಬದಂತೆ ಬೆಳೆದು ಬಂದಿದ್ದೇವೆ, ರಾಜಕೀಯವಾಗಿ ಆ ರೀತಿ ಬೆಳೆದು ಬಂದಿಲ್ಲ. ಹಮಾರ ಗಲ್ಲೀಮೆ ಹಮಾರ ಕುತ್ತಾ ಶೇರ್ ಹೈ ' ಎಂದು ಹೇಳಿದರು ಇವತ್ತು ಶ್ರೀ ಗೋಪಾಲಗೌಡರ ಚಳುವಳಿಯನ್ನು ಮುಂದುವರಿಸುತ್ತೇವೆ ಎಂದು ಹೇಳುತ್ತಾ ಇದ್ದಾರೆ ಹೀಗೆ ಇದೆಲ್ಲಾ ಹಳೆಯ ಕತೆಗಳು ಅನೇಕವಿವೆ. ಅವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ದಯವಿಟ್ಟು ನನ್ನನ್ನ ಆ ಸಂಶಯದಿಂದ ನೋಡಬೇಕಾದ ಅಗತ್ಯವಿಲ್ಲ. ನಾನ ೧೯೭೭ರಲ್ಲಿ ಚುನಾವಣೆಯಲ್ಲಿ ಸೋತ ಮೇಲೆ ಗೇಣಿದಾರರ ಬಗ್ಗೆ ಚಳುವಳಿ ಮಾಡಿದ್ದೇನೆ. ರೈತರ ಬೇಡಿಕೆಯಲ್ಲಿ ಒಂದು ಅಂಶ ಇದೆ. ಗೇಣಿದಾರರು ಕಟ್ಟಬೇಕಾದ ಹಣವನ್ನು ರದ್ದುಪಡಿಸಬೇಕು ಎಂದು. ನಾನು ಜನತಾ ಪಾರ್ಟಿಯಲ್ಲಿದ್ದಾಗ ಈ ಬಗ್ಗೆ ಚಳುವಳಿ ಮಾಡಿದ್ದೇನೆ. ನೀವು ಯಾರೂ ಬರಲಿಲ್ಲ. ನಾವೇ ಮಾಡಬೇಕಾಯಿತು. ಆಗ ಶ್ರೀ ನಂಜುಂಡಸ್ವಾಮಿ ಮತ್ತು ಇತರರು ಯಾರೂ ಇರಲಿಲ್ಲ. ಆದ್ದರಿಂದ ಆ ರೀತಿಯ ಸಂಶಯದಿಂದ ನನ್ನನ್ನು ಯಾರೂ ಖಂಡಿತವಾಗಿ ನೋಡಬಾರದು ರೈತರ ಬಗ್ಗೆ ನನ್ನ ಮನಸ್ಸಿನಲ್ಲಿ ಸ್ಪಷ್ಟವಾದ ಕಳಕಳಿ ಇರಬೇಕಾದರೆ ಆ ಕಳಕಳಿಯನ್ನು ಮತ್ತೆ ನನ್ನಲ್ಲಿ ಹುಡುಕಬೇಕಾದ ಅಗತ್ಯವಿಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಿಮ್ಮಲ್ಲಿ ಆ ಕಳಕಳಿ ಇರುವುದಾದರೆ ಮತ್ತೆ ಏತಕ್ಕೆ ನಿಮ್ಮ ಭಾಷಣದಲ್ಲಿ ಆ ರೀತಿ ಹೇಳಿದಿರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಬೇರೆ ರೀತಿಯಲ್ಲಿ ಮಾತನಾಡೋಣ. ಅದನ್ನು ಈಗ ಹೇಳುವುದು ಬೇಡ. ನಮ್ಮ ಗೆಳೆಯರಾದ ಶ್ರೀನಿವಾಸ್‌ರವರು ಹಾಗೂ ಶ್ರೀ ವೆಂಕಟೇಶ್‌ರವರು ಅಲ್ಲಿಗೆ ಹೋಗಿ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ ಮತ್ತು ನಾನೂ ಕೂಡ ಶ್ರೀ ರುದ್ರಪ್ಪನವರು ಮತ್ತು ಶ್ರೀ ಸುಂದರೇಶ್‌ರವರ ಜೊತೆಯಲ್ಲಿ ಕುಳಿತು ಕೆಲವು ಮಾತುಗಳನ್ನು ಆಡಿದಾಗ, ನಮ್ಮ ಅಧಿಕಾರಿಗಳು ಅಕ್ರಮವಾಗಿ ಜಪ್ತಿ ಮಾಡಿದಂತಹ ಸನ್ನಿವೇಶಗಳೇನಾದರೂ ಇದ್ದರೆ ಪಟ್ಟಿ ಮಾಡಿ ಕೊಡಿ, ನಾನು ಸ್ವತಃ ಎಲ್ಲಾ ದಾಖಲೆಗಳನ್ನು ತರಿಸಿ ನೋಡಿ ಅವರಿಗೆ ಅನ್ಯಾಯವಾಗಿದ್ದರೆ ಅಂತಹವನ್ನು ವಾಪಸ್ಸು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ. ಈ ಬಗ್ಗೆ ನಾನೇ ಸ್ವತಃ ಸುಂದರೇಶ್ ಮತ್ತು ರುದ್ರಪ್ಪನವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಅವರು ಆ ಸಂದರ್ಭದಲ್ಲಿ ಒಂದು ಪಟ್ಟಿಯನ್ನು ಕೊಡುತ್ತೇವೆ ಎಂದು ಹೇಳಿದರೂ ಕೂಡ ಅವರು ನನಗೆ ಇದುವರೆಗೆ ಆ ಪಟ್ಟಿಯನ್ನು ಕೊಡಲಿಲ್ಲ. ನಾನು ಜಿಲ್ಲಾಧಿಕಾರಿಯವರನ್ನು ಕರೆಸಿ. ನೀವು ಕಾನೂನು ಪ್ರಕಾರ ಹೋಗಬೇಕೇ ವಿನಃ ಕಾನೂನಿಗೆ ವಿರುದ್ಧವಾಗಿ ಹೋಗಬಾರದು ಎಂದು ಹೇಳಿದ್ದೇನೆ. ಶ್ರೀ ಲಕ್ಷ್ಮೀಸಾಗರ್‌ರವರು ಇಲ್ಲಿ ಈ ಬಗ್ಗೆ ಕೋರ್ಟಿನಲ್ಲಿ ಮಾಡಿದಹಾಗೆ ಬಹಳ ವಕಾಲತ್ತು ಮಾಡಿದ್ದಾರೆ. ಅಲ್ಲಿ ಆರ್ಗ್ಯುಮೆಂಟ್ ಮಾಡಬೇಕಾದರೆ ಉಪ್ಪು ಕಾರ ಎಲ್ಲಾ ಹಾಕಿ ವಾದ ಮಾಡಬೇಕಾಗುತ್ತದೆ, ಅದೇ ರೀತಿಯಲ್ಲಿ ಅವರು ಇಲ್ಲಿ ಆ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಶ್ರೀ ಲಕ್ಷ್ಮೀಸಾಗರ್‌ರವರು ಶಿವಮೊಗ್ಗಕ್ಕೆ ಹೋಗಿದ್ದಾರೆ ಎನ್ನತಕ್ಕಂಥ ವಿಚಾರ ನನಗೆ ತಿಳಿದು ಬಂದ ಮೇಲೆ ಈ ಬಗ್ಗೆ ಅವರು ಸರಿಯಾದ ವಿಷಯವನ್ನು ತಿಳಿದುಕೊಂಡು ಬರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರು ಅಲ್ಲಿಗೆ ಹೋಗಿ ಬಂದ ಮೇಲೆ ನನಗೆ ಅರ್ಥವಾಯಿತು. ಅವರಿಗೆ ಒಂದು ವಕಾಲತ್ತು ಸಿಕ್ಕಿತು ಎಂದು. ಅವರು ಅದನ್ನು ಹೇಳುವಾಗ

ಸತ್ಯಾಂಶಗಳನ್ನು ಸರಿಯಾದ ರೀತಿಯಲ್ಲಿ ಹೇಳಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೂ ಪರವಾಗಿಲ್ಲ. ನಾನೂ ಕೂಡ ಒಂದು ಕಾಲದಲ್ಲಿ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದವನೇ. ಹಾಗೆ ಕೆಲಸ ಮಾಡುವಂತಹ ಕಾಲದಲ್ಲಿ ನಾವು ನಮ್ಮ ವಾಕರಣೆಯನ್ನು ಮುಂದಿಡುವಂತಹ ಕಾಲದಲ್ಲಿ ಉಪ್ಪು ಖಾರವನ್ನು ಹಚ್ಚಿ ಹೇಳಲೇಬೇಕು. ಅದೇ ರೀತಿಯಲ್ಲಿ ಅವರು ಹೇಳಿದ್ದಾರೆ. ಆದರಿಂದ ನನಗೇನೂ ಬೇಸರವಿಲ್ಲ. ಆದರೆ ಶ್ರೀ ಲಕ್ಷ್ಮೀಸಾಗರ್‌ರವರು ಹೇಳಿದಂತಹ ರೀತಿಯಲ್ಲಿ ಇವರಲ್ಲಿ ನನ್ನ ಪಾತ್ರವಿಲ್ಲ. ಮಾನ್ಯ ಶ್ರೀನಿವಾಸನ್‌ರವರು ಕೂಡ ೨೪ನೇ ತಾರೀಖಿನ ದಿವಸ ಅಲ್ಲಿದ್ದಾಗ ಶಿವಮೊಗ್ಗದಲ್ಲಿ ಜಿಲ್ಲಾ ಕಾರ್ಯಕರ್ತರ ಸಭೆಯನ್ನು ಕರೆಯಬೇಕೆಂದು ತೀರ್ಮಾನವಾಗಿತ್ತು. ಅದನ್ನು ಅಲ್ಲಿ ಜಿಲ್ಲಾಧ್ಯಕ್ಷರ ಅನುಮತಿ ಇಲ್ಲದೇ ಕರೆದಿದ್ದಾರೆ ಎನ್ನತಕ್ಕಂಥ ವಿಚಾರ ನನಗೆ ತಿಳಿದು ಬಂದ ಮೇಲೆ 'ಅದನ್ನು ಕೂಡ ರದ್ದುಪಡಿಸಬೇಕು. ನಾವು ಬರುವುದಿಲ್ಲ ಇದೆಲ್ಲಾ ರಗಳೆಯಾಗುತ್ತದೆ.' ಎಂದು ನಮ್ಮ ಆಫೀಸಿನಲ್ಲಿ ಕುಳಿತುಕೊಂಡು ನಾನು ಹೇಳಿದ್ದೇನೆ. ಮಾನ್ಯ ಬಸವಣ್ಣಪ್ಪನವರು ಹೇಳಿದರು: ನನ್ನ ಕ್ಷೇತ್ರದಲ್ಲಿ ನನ್ನನ್ನು ಹೇಳದೇ-ಕೇಳದೆ ಮಂತ್ರಿಯವರು ಹೋಗಿಬಿಡುತ್ತಾರೆ ಎಂದು. ಹಿಂದೆ ಒಂದು ಸಾರಿ ಅವರು ಕರೆದರು. ನಾನು ಅವರ ಅನುಮತಿ ಇಲ್ಲದೇ ಬರುವುದಿಲ್ಲ, ಎಂದು ಹೇಳಿದ ಮೇಲೆ, ಅವರಿಬ್ಬರೂ ಬಂದು ಕರೆದರು. ಆಮೇಲೆ ನಾನು ಹೋಗಿದ್ದೇನೆ. ಮಾನ್ಯ ಬಸವಣ್ಣಪ್ಪನವರೇ, ನಾನು ನಿಮ್ಮ ಅನುಮತಿಯನ್ನು ಪಡೆದ ಮೇಲೆಯೇ ಹೋಗಿದ್ದೇನೆ. ನಿಮ್ಮನ್ನು ಬಿಟ್ಟು ಎಲ್ಲಿ ಹೋಗಿದ್ದೇನೆ? ನೀವು ಕರೆಯದೇ ನಾನು ಅಲ್ಲಿಗೆ ಬರುವ ಹಾಗೇ ಇಲ್ಲ. ಅವತ್ತು ಅಲ್ಲಿ ಸಭೆ ಕರೆಸುವುದಕ್ಕೆ ನಾನು ಖಂಡಿತವಾಗಿ ಹೇಳಿದ್ದಲ್ಲ. ಶ್ರೀ ರಾಘವ ಎನ್ನುವವರು ನನ್ನ ಹಳೆಯ ಸ್ನೇಹಿತ. ನನಗಿಂತ ನಿಮಗೇ ಅವರು ಆಪ್ತರು.

ಶ್ರೀ ಜಿ. ಹೆಚ್. ಪಟೇಲ್.— ಸ್ವಾಮಿ, ಮಾನ್ಯ ಕಾಗೋಡು ತಿಮ್ಮಪ್ಪನವರೇ ಈ ಕಾಂಗ್ರೆಸ್ ರಾಜಕಾರಣ ನಿಮಗೂ ಗೊತ್ತಿಲ್ಲ, ನಮಗೂ ಗೊತ್ತಿಲ್ಲ. ನನ್ನ ಕ್ಷೇತ್ರಕ್ಕೆ ನೀವು ಬಂದರೆ ನಾನೇನೂ ಮಿಸ್ಟೇಕ್ ಮಾಡಿಕೊಳ್ಳುವುದಿಲ್ಲ. ನೀವು ನಿಮ್ಮ ಪಾರ್ಟಿಯವರ ಹತ್ತಿರ ಹೋದರೆ ಮಾತ್ರ ಅವರು ನಿಮ್ಮನ್ನು ಮಿಸ್ಟೇಕ್ ಮಾಡಿಕೊಳ್ಳುತ್ತಾರೆ. ಇದನ್ನು ನೀವು ತಿಳಿದುಕೊಳ್ಳಿ. ಕಾಂಗ್ರೆಸ್‌ನವರ ಸ್ವಭಾವ ನಿಮಗಿನ್ನೂ ಅಭ್ಯಾಸವಾಗಿಲ್ಲ.

ಶ್ರೀ ಜಿ. ಬಸವಣ್ಣಪ್ಪ.— ಇದು ಕಾಂಗ್ರೆಸ್ ರಾಜಕಾರಣವಲ್ಲ, ಇದು ಸತ್ಯವಾದ ರಾಜಕಾರಣ. ೨೫ನೇ ಮೇ ೧೯೮೨ರಲ್ಲಿ ಮುಂಗೋಟೆಯಲ್ಲಿ ರೈತ ಸಮ್ಮೇಳನ ಕರೆಯುವುದಕ್ಕೆ ಯಾರು ಪ್ರೇರಣೆ ಮಾಡಿದರು? ೧೨ನೇ ಮೇ ೧೯೮೨ರಲ್ಲಿ ಭೀಮಣ್ಣ ಅವರ ಮಿಲ್‌ನಲ್ಲಿ ಕರೆದಂತ ಮೀಟಿಂಗ್‌ನಲ್ಲಿ ನೀವು ಭಾಗವಹಿಸಿರಲಿಲ್ಲವೇ? ಆ ಮೀಟಿಂಗ್‌ನಲ್ಲಿ ನೀವು ಏನೇನು ತೀರ್ಮಾನ ತಗೆದುಕೊಂಡಿರಿ? ನಿಮ್ಮ ಆದೇಶದ ಮೇಲೆ ಆ ಮೀಟಿಂಗ್ ಕರೆದಿರಲಿಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ.— ಅದನ್ನೇ ನಾನು ಹೇಳುತ್ತೇನೆ, ಅದು ೧೨ನೇ ತಾರೀಖು ಅಲ್ಲ. ೧೨ನೇ ತಾರೀಖಿನ ದಿವಸ ಭದ್ರಾವತಿಯಲ್ಲಿ ಶ್ರೀವಾಸನ್ ರಾಜಶೇಖರ್‌ರವರು, ರೂರಲ್ ಬ್ಲಾಕ್ ಕಾಂಗ್ರೆಸ್(ಐ) ಅಧ್ಯಕ್ಷರು ಮತ್ತು ಸಿಟಿ ಬ್ಲಾಕ್ ಕಾಂಗ್ರೆಸ್ (ಐ) ಅಧ್ಯಕ್ಷರು ಸೇರಿ ಒಂದು ಕಾರ್ಯಕರ್ತರ ಸಭೆಯನ್ನು ಕರೆದಿದ್ದರು. ಅಲ್ಲಿಗೆ ನಾನು ಬರಬೇಕು ಎಂದು ಹೇಳಿದರು. ಹೊಸದುರ್ಗಕ್ಕೆ ಹೋಗಿ ನಾನು ಬರುವುದಕ್ಕಾಗುವುದಿಲ್ಲವೆಂದು ಹೇಳಿದೆ. ಅವರು ೪ ಸಲ ಫೋನ್ ಮಾಡಿ ಹೇಳಿದಮೇಲೆ "ನಾನು ಬರುತ್ತೇನೆ" ಎಂದು ಹೇಳಿದೆ. ಆಮೇಲೆ ನಾನು ನಿಮಗೆ "ನೀವು ಬಂದೇ ಬರಬೇಕು" ಎಂದು ಹೇಳಿ ಕಳಿಸಿದ್ದೆ. 'ಈ ಕ್ಷೇತ್ರ ಅವರಿಗೆ ಸೇರಿದೆ. ಅವರು ಬರಬೇಕಾದ್ದು ಇದೆ. ಎಂ.ಪಿ. ಗಳು ಬರಬೇಕಾಗುತ್ತದೆ, ಎಲ್ಲರೂ ಸೇರಿ ಕುಳಿತುಕೊಂಡು ಪಕ್ಷದ ಬಗ್ಗೆ ಮಾತನಾಡಬೇಕು" ಎಂದು ಕರೆದಿದ್ದೆವು. ಅಲ್ಲಿ ನಾನು ಏನು ಭಾಷಣ ಮಾಡಿದ್ದೇನೆ ಎಂಬುದನ್ನೆಲ್ಲಾ ಅಧ್ಯಕ್ಷರು ರೆಕಾರ್ಡ್ ಮಾಡಿಕೊಂಡಿದ್ದಾರೆ. ದಯವಿಟ್ಟು ನೀವು ಅಲ್ಲಿಗೆ ಹೋಗಿ ಅದನ್ನು ನೋಡಿ.

ಶ್ರೀ ಎಂ. ಪಿ. ನಾಣಯ್ಯ.— ಸ್ವಾಮಿ, ನನಗೆ ಒಂದು ವಿಚಾರ ಗೊತ್ತಾಗಬೇಕು. ಇದು ಕಾಂಗ್ರೆಸ್ (ಐ) ಪಕ್ಷದ ಸಭೆಯೇ? ಇದು ಕಾಂಗ್ರೆಸ್-(ಐ) ಪಕ್ಷದ ಸಭೆಯಾದರೆ ಅದನ್ನು ದಯವಿಟ್ಟು ಇಲ್ಲಿ ಹೇಳಲಿ. ಇದು ಶಾಸನ ಸಭೆ. ಈ ಒಂದು ಶಾಸನಸಭೆಯಲ್ಲಿ ಅಲ್ಲಿ ಏನಾಯಿತು. ಏನ ಮಾಡಿದರು, ಬ್ಲಾಕ್ ಕಾಂಗ್ರೆಸ್ ಕಮಿಟಿಯಲ್ಲಿ ಏನು ಮಾಡಿದರು ಎಂಬುದನ್ನೆಲ್ಲಾ ಹೇಳಿ ಈ ಸಭೆಯ ಗೌರವಕ್ಕೆ ಚ್ಯುತಿ ತರುವುದು ಬೇಡ. ಇದು ವಿಧಾನಸಭೆ ಎಂಬುದನ್ನು ನಿಮ್ಮ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಖಂಡಿತವಾಗಿ ನಾನು ಆ ತರಹ ಹೋಗುವುದಿಲ್ಲ. ಮಾನ್ಯ ಸದಸ್ಯರು ೨೨ನೇ ತಾರೀಖು ನಡೆದ ಸಭೆಯ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರಿಂದ ನಾನು ವಿಚಾರ ಏನು ಎಂಬುದನ್ನು ಇಲ್ಲಿ ಹೇಳಿದೆ ಅಷ್ಟೆ.

ಶ್ರೀ ಎಂ.ಸಿ. ನಾಣಯ್ಯ.– ನೀವು ಆ ವಿಚಾರವನ್ನು ಇಲ್ಲಿ ಹೇಳುವುದರಿಂದ ನಮಗೆ ಖುಷಿಯಾಗುತ್ತದೆ ಆದರೆ ಹೊರಗಿನ ಜನಗಳು ನಮ್ಮನ್ನು ಎಲ್ಲಿ ತಪ್ಪು ತಿಳಿದುಕೊಳ್ಳುತ್ತಾರೆಯೊ ಎನ್ನುವ ಬೇಸರ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ.—ಆಯಿತು. ಆದ್ದರಿಂದ ೨೫ನೇ ತಾರೀಖಿನ ಸಭೆಗೆ ನಾನು ಬರುತ್ತೇನೆ ಎಂದು ಹೇಳಲಿಲ್ಲ ಮತ್ತು ನಾನು ಆ ಕಾರ್ಯಕ್ರಮವನ್ನು ಕೊಟ್ಟಿಲ್ಲ. ಅದಕ್ಕೆ ನಾನು ಒಪ್ಪಿಗೆಯನ್ನೂ ಕೊಟ್ಟಿಲ್ಲ. ೨೫ನೇ ತಾರೀಖಿನ ದಿವಸ ಜಿಲ್ಲಾ ಕಾರ್ಯಕರ್ತರ ಸಭೆ ನಡೆಯುವಾಗ ಅದೇ ಸನ್ನಿವೇಶದಲ್ಲಿ ನಮ್ಮದೂ ಒಂದು ಕಾರ್ಯಕ್ರಮ ಮಾಡೋಣ ಎಂದು ಅವರು ಅದನ್ನು ಹಾಕಿಕೊಂಡಿದ್ದರು.

೬-೦೦ ಪಿ.ಎಂ.

ದಿನಾಂಕ ೨೫ನೇ ತಾರೀಖು ನಾನು ಆ ಕಾರ್ಯಕ್ರಮಕ್ಕೆ ಬರುತ್ತೇನೆಂದು ಹೇಳಿರಲಿಲ್ಲ. ಆ ಕಾರ್ಯಕ್ರಮದ ಪಟ್ಟಿಯಲ್ಲಿ ನನ್ನ ಹೆಸರನ್ನು ಹಾಕುವುದಕ್ಕೆ ನಾನು ಅವರಿಗೆ ನನ್ನ ಒಪ್ಪಿಗೆಯನ್ನು ಕೂಡ ಕೊಟ್ಟಿಲ್ಲ. ಆದರೆ ದಿನಾಂಕ ೨೫ನೇ ತಾರೀಖು ನಡೆಯುವ ಕಾರ್ಯಕ್ರಮಕ್ಕೆ ತಾವು ಬರಬೇಕೆಂದು ಅಲ್ಲಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹಾಗೂ ತಾಲ್ಲೂಕು ಮಟ್ಟದ ಕಾಂಗ್ರೆಸ್ ಅಧ್ಯಕ್ಷರು ಬಂದು ನನ್ನನ್ನು ಕರೆದಾಗ ನಾನು ಆಗ ಅವರನ್ನು ನಿಮ್ಮ ಜಿಲ್ಲೆಯ ಎಲ್ಲಾ ಶಾಸಕರು ಬರುತ್ತಾರೆಯೇ ಎಂದು ಕೇಳಿದ್ದೇನೆ. ಶಾಸಕರೆಲ್ಲರೂ ಬರದಿದ್ದರೆ ನಾನು ಬರುವುದಿಲ್ಲವೆಂದು ಹೇಳಿ ಅವರನ್ನು ಬೈದು ಕಳುಹಿಸಿದ್ದೇನೆ. ಆ ನಂತರ ನಾನು ಬೆಂಗಳೂರಿಗೆ ಬಂದ ಮೇಲೆ ಏನಾಯಿತು ಎಂದು ನನಗೆ ಗೊತ್ತಾಗಲಿಲ್ಲ. ಶಿವಮೊಗ್ಗ ಜಿಲ್ಲಾ ಪೋಲೀಸ್ ಸೂಪರಿನ್ ಟೆಂಡೆಂಟ್‌ರವರು ನನಗೆ ಫೋನ್ ಮಾಡಿ ನೀವು ಈ ದಿನದ ಕಾರ್ಯಕ್ರಮಕ್ಕೆ ಬರುತ್ತೀರಾ ಎಂದು ಕೇಳಿದಾಗ ನಾನು ಕೂಡ ಅವರಿಗೆ ಹೇಳಿದೆ ಕಾರ್ಯಕ್ರಮ ರದ್ದಾಗಿದೆ ಎಂದು. ಅಲ್ಲಿ ಎಲ್ಲರಿಗೂ ಕೂಡ ಸ್ಪಷ್ಟವಾಗಿ ಹೇಳಿದ್ದೇನೆ. ಆದರೆ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಹಾಗೂ ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ವಿಶೇಷ ರೀತಿ ಅರ್ಥ ಬರುವ ಹಾಗೆ ಮಾತನಾಡಿದ್ದಾರೆ. ಮತ್ತು ಪೋಲೀಸ್ ಅಧಿಕಾರಿಗಳ ಶಕ್ತಿಯನ್ನು ಪಡೆದುಕೊಂಡು ಮಂತ್ರಿಗಳ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ ಆದರೆ ಅವರು ವಿರೋಧಪಕ್ಷದ ನಾಯಕರಾಗಿ ಏನನ್ನು ಹೇಳಬೇಕೋ ಅದನ್ನು ಹೇಳಿದ್ದಾರೆ. ನಾನೂ ಕೂಡ ವಿರೋಧಪಕ್ಷದಲ್ಲಿ ಇದ್ದಾಗ ಯಾವ ರೀತಿಯ ಪರಿಣಾಮಕಾರಿ ಅಸ್ತ್ರಗಳನ್ನು ಉಪಯೋಗಿಸಬೇಕಾಗಿತ್ತೋ ಅದನ್ನು ಉಪಯೋಗ ಮಾಡಿ ಭಾಷೆಯನ್ನು ಬಳಸಿದ್ದೇನೆ. ಆದರೆ ಈಗ ನನಗೆ ಅಧಿಕಾರವಿದೆ ಎಂದು ಹೇಳಿ ಆ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವಂತಹ ಹೇಯ ಕೃತ್ಯವನ್ನು ನಾನೇ ಇಂದೂ ಮಾಡುವುದಿಲ್ಲ. ಮುಂದೆ ಎಂದೂ ಮಾಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಈ ಅಧಿಕಾರವಿರಬಹುದು, ನಾಳೆ ಅಧಿಕಾರ ಹೋಗಬಹುದು. ಅಧಿಕಾರವಿದ್ದ ಮಾತ್ರಕ್ಕೆ ಇಲ್ಲದ ಸಲ್ಲದ ರಾಜಕೀಯವನ್ನು ಮಾಡಿ ಸಾರ್ವಜನಿಕರಿಗೆ ತೊಂದರೆಯನ್ನು ಕೊಡಬೇಕೆಂದು ಯಾವ ಮಂತ್ರಿಯೂ ಸಹ ಅಪೇಕ್ಷೆ ಪಡುವುದಿಲ್ಲ ಮತ್ತು ಇಂತಹ ಕೃತ್ಯವನ್ನು ಯಾರೂ ಸಹ ಖಂಡಿತವಾಗಿ ಮಾಡುವುದಿಲ್ಲ. ರೈತರ ಎಷ್ಟೋ ಬೇಡಿಕೆಗಳನ್ನು ನಮ್ಮ ಸರ್ಕಾರದವರು ಈಡೇರಿಸಿದ್ದಾರೆ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಹೆಚ್ಚಿನ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿದೆ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಏನು ಒಂದು ಆಪಾದನೆ ಮಾಡಿದ್ದಾರೆ ಅದು ನಿರಾಧಾರವಾದುದು. ಮತ್ತು ಆಧಾರ ರಹಿತವಾದುದು, ಇದು ಬರೀ ಅವರ ಒಂದು ಕಲ್ಪನೆಯಾಗಿದೆ, ಅವರು ಸೃಷ್ಟಿಸಿರುವ ಪಾಪವಾಗಿದೆ. ಇದರಲ್ಲಿ ಯಾವುದೇ ವಿಧವಾಗಿದೆ. ಇದರಲ್ಲಿ ಯಾವುದೇ ವಿಧವಾದ ತಿರುಳು ಇಲ್ಲ. ಆದ್ದರಿಂದ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ನಾನು ರೈತರ ವಿರೋಧಿ ಅಲ್ಲ. ನನಗೂ ರೈತರ ಬಗ್ಗೆ ಕಳಕಳಿ ಇದೆ. ಆದ್ದರಿಂದ ಈ ವಿಷಯವನ್ನು ಬರೀ ರಾಜಕೀಯ ದೃಷ್ಟಿಯಿಂದ ನೋಡಬಾರದು ಇದು ಎಲ್ಲರ ಸಮಸ್ಯೆ. ಆದ್ದರಿಂದ ತಮಗಿರುವಷ್ಟೇ ಕಳಕಳಿ ರೈತರ ಬಗ್ಗೆ ನಮಗೂ ಇದೆ. ರೈತರಿಗೆ ಅನುಕೂಲವಾಗುವಂತಹ ಬೆಟರ್‌ಮೆಂಟ್ ಲೆವಿಯನ್ನು ನಮ್ಮ ಸರ್ಕಾರದವರು ವಜಾ

ಮಾಡಿದ್ದೇವೆ. ಇನ್ನೂ ಕೆಲವು ಸವಲತ್ತುಗಳನ್ನು ನಾವು ರೈತರಿಗೆ ಕೊಟ್ಟಿದ್ದೇವೆ. ಇದು ನಮಗ್ಯಾರಿಗೂ ಲಾಭವಾಗಲಿಲ್ಲ. ಶ್ರೀಮಾನ್ ಪಟೇಲ್‌ರಂತಹವರಿಗೆ ಸಹಾಯವಾಗಿದೆ.

ಶ್ರೀ ಜೆ. ಹೆಚ್. ಪಟೇಲ್.— ನಾವೂ ಮಾತನಾಡುವಾಗ ಹೇಳಿದ್ದೇನೆ ನೀವು ನಮ್ಮ ಜೊತೆಯಲ್ಲಿದ್ದಾಗ ಚನ್ನಾಗಿ ಇದ್ದಿರಿ. ಈಗ ಬದಲಾವಣೆಯಾಗಿದ್ದೀರಿ ಎಂದು.

ಶ್ರೀ ಕಾಗೋಡು ತಿಮ್ಮಪ್ಪ.— ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ವಿರೋಧಪಕ್ಷದ ಸದಸ್ಯರು ಏನು ಒಂದು ಆಪಾದನೆ ಮಾಡಿದ್ದಾರೆ ಇದು ತಿರುಳು ಇಲ್ಲದ ವಿಷಯವಾಗಿದೆ. ಇದರಲ್ಲಿ ಯಾವ ತಿರುಳು ಸಹ ಇಲ್ಲ. ರಾಜಕೀಯ ಉದ್ದೇಶದಿಂದ ಮಾಡಿದ್ದಾರೆಯೋ ವಿನಹ ಬೇರೇನೂ ಇಲ್ಲವೆಂದು ಇದರಲ್ಲಿ ಅರ್ಥವಾಗುತ್ತದೆ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಏನು ಆಪಾದನೆ ಮಾಡಿದ್ದಾರೆ ಅದು ನಿರಾಧಾರವಾದುದು ಎಂದು ನಾನು ನಿವೇದನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಮಾನ್ಯ ಹಣಕಾಸಿನ ಹಾಗೂ ಪ್ರವಾಸೋದ್ಯಮ ಸಚಿವರು).— ಸನ್ಮಾನ್ಯ ಅಧ್ಯಕ್ಷರೇ, ಇದುವರಿವಿಗೂ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇನ್ನು ಅನೇಕ ಜನ ಸದಸ್ಯರು ಈ ದಿವಸ ಕಲಂ ೩೭೭ ರ ಕೆಳಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತು ಕೆಲವು ಸಮಸ್ಯೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವುಗಳಿಗೆ ಉತ್ತರವನ್ನು ಕೊಡುವ ಮುನ್ನ ನಾನು ಒಂದು ಹೇಳಿಕೆಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಮೇಲೆ ಮಾನ್ಯ ಸದಸ್ಯರು ಬೇಕಾದರೆ ಪ್ರಸ್ತಾಪ ಮಾಡಬಹುದು.

೬-೦೦ ಪಿ. ಎಂ.

ಭದ್ರಾವತಿಯಿಂದ ಸುಮಾರು ೨೦ ಕಿ. ಮೀ ದೂರದಲ್ಲಿರುವ ಮಂಗೋಟಿ ಗ್ರಾಮದ ಬಳಿ ರೈತರ ಮತ್ತು ಕೃಷಿ ಕಾರ್ಮಿಕರ ಸಮ್ಮೇಳನವೊಂದು ನಡೆಯಲ್ಲಿರುವುದಾಗಿ ತಿಳಿದು ಬಂದಿತು. ನಾಗಸಮುದ್ರ ಗ್ರಾಮದ ಅಕ್ಕಪಕ್ಕದ ಗ್ರಾಮಸ್ಥರು ಸಮ್ಮೇಳನವನ್ನು ವಿರೋಧಿಸಿದರು. ಈ ತಂಡದವರು, ನಾಗಸಮುದ್ರದ ಬಳಿ ಗ್ರಾಮಸ್ಥರು ಹಾಜರಿರಬೇಕೆಂದು ಮತ್ತು ಸಮ್ಮೇಳನಕ್ಕೆ ಮಂಗೋಟಿಗೆ ಬರಲಿರುವ ಮಂತ್ರಿಗಳನ್ನು ಮತ್ತು ವಿಧಾನಸಭಾ ಸದಸ್ಯರುಗಳನ್ನು ಘೇರಾವ್ ಮಾಡಬೇಕೆಂಬುದಾಗಿ ತಿಳಿಸಿದರು.

೨. ದಿನಾಂಕ ೨೪-೫-೧೯೮೦ ರಂದು ಸಂಜೆ ಸಮ್ಮೇಳನಕ್ಕೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಬರುವುದಿಲ್ಲವೆಂದು ಹಾಗೂ ವಿಧಾನಸಭಾ ಸದಸ್ಯರುಗಳು ಬರುವುದಿಲ್ಲವೆಂದು ಸ್ಥಳೀಯ ಅಧಿಕಾರಿಗಳಿಗೆ ತಿಳಿದು ಬಂದಿತು. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಬರದಿದ್ದರೂ ಸಮ್ಮೇಳನವು ನಡೆಯುವುದಾಗಿ ಸ್ಥಳೀಯ ಅಧಿಕಾರಿಗಳಿಗೆ ಗೊತ್ತಾಯಿತು. ಪ್ರತಿಭಟನಾ ಪ್ರದರ್ಶನವನ್ನು ಮಾತ್ರ ರೈತ ಸಂಘದವರು ನಡೆಸುವುದೇ ಹೊರತು ಮತ್ತೇನು ಅಲ್ಲ ಎಂದು ರೈತ ಸಂಘದವರು ತಿಳಿಸಿದ್ದರೂ ದಿನಾಂಕ ೨೫-೫-೮೦ ರಂದು ಮಂಗೋಟಿ ಗ್ರಾಮದಲ್ಲಿ ಸಾಕಷ್ಟು ಪೊಲೀಸ್ ಬಂದೋಬಸ್ತಿಗೆ ಏರ್ಪಾಡು ಮಾಡುವುದು ಅತ್ಯಗತ್ಯವಿತ್ತು.

೩. ಅತ್ಯಗತ್ಯ ವ್ಯವಸ್ಥೆಯನ್ನು ಏರ್ಪಾಡು ಮಾಡುವುದಕ್ಕೋಸ್ಕರ ದಿನಾಂಕ ೨೫-೫-೮೦ರ ಬೆಳಿಗ್ಗೆ ಮಂಗೋಟಿ ಗ್ರಾಮದತ್ತ ತೆರಳಿದ ಪೊಲೀಸ್ ದಳಕ್ಕೆ ಸನ್ಯಾಸಿ ಕೋಡಿಮಗ್ಗಿ ಗ್ರಾಮಕ್ಕೆ ಹತ್ತಿರದ ರಸ್ತೆಯಲ್ಲಿ ಗುಂಡಿ ತೋಡಿರುವುದು ಕಂಡು ಬಂತು. ಸುಮಾರು ೧೧-೧೫ರ ಹೊತ್ತಿಗೆ ಪೊಲೀಸ್ ದಳದವರು ಗ್ರಾಮದತ್ತ ಮತ್ತಷ್ಟು ತೆರಳಿದರು. ನಾಗಸಮುದ್ರ ಗ್ರಾಮದ ಹೊರವಲಯಕ್ಕೆ ಅವರು ಬಂದಾಗ ಎತ್ತಿನ ಗಾಡಿಗಳನ್ನು ರಸ್ತೆಗೆ ಅಡ್ಡಲಾಗಿ ಇಟ್ಟಿರುವುದು ಮತ್ತು ಎತ್ತಿನ ಗಾಡಿಗಳ ಚಕ್ರಗಳು ರಸ್ತೆಯಲ್ಲಿ ಬಿದ್ದಿರುವುದು ಕಂಡು ಬಂದಿತು. ಈ ರೀತಿ ರಸ್ತೆಗೆ ತಡೆ ಹಾಕಿರುವುದನ್ನು ತೆಗೆದು ಹಾಕಲು ಅಲ್ಲಿ ಸೇರಿದ ಗ್ರಾಮಸ್ಥರೆಲ್ಲರಿಗೂ ಪೊಲೀಸ್ ದಳದವರು ವಿನಂತಿ ಮಾಡಿಕೊಂಡರು ಎಂದು ವರದಿಯಾಗಿದೆ. ಆದರೂ ಗ್ರಾಮಸ್ಥರು ಪೊಲೀಸ್ ದಳದ ವಿನಂತಿಗೆ ಓಗೊಡದೆ ವಿರೋಧ ತೋರಿ ಕಲ್ಲು ತೂರಲು ಪ್ರಾರಂಭಿಸಿದರು ಎಂದು ವರದಿಯಾಗಿದೆ. ರಸ್ತೆ ತಡೆಯನ್ನು ತೆಗೆದು ಹಾಕಲು ಪೊಲೀಸ್ ದಳದವರು ಸುಮಾರು ೪-೩೦ ರ ವೇಳೆಗೆ ತಮ್ಮ ಎಲ್ಲಾ ಪ್ರಯತ್ನಗಳನ್ನು ಮಾಡಿದರು. ಈ ಹೊತ್ತಿಗೆ ಸುಮಾರು ೩೦೦೦ ಜನರ ತಂಡವೊಂದು ಅವರನ್ನು ಸುತ್ತುವರೆದರೆಂದು ವರದಿಯಾಗಿದೆ. ಜನರ ತಂಡ ಕೋಪೋದ್ರಿಕ್ತ ಸ್ಥಿತಿಯಲ್ಲಿ ಇದ್ದರೆಂದು ತಿಳಿದು ಬಂದಿತು. ಡಿ ಎ ಆರ್ ವ್ಯಾನಿನ ಚಾಲಕನನ್ನು ಹೊರಕ್ಕೆ ಎಳೆದು ಪ್ರಜ್ಞೆ ತಪ್ಪುವವರೆಗೂ ಹೊಡೆದರೆಂದು ವರದಿಯಾಗಿದೆ. ಚಾಲಕನನ್ನು

ರಕ್ಷಿಸಲು ಪ್ರಯತ್ನಿಸಿದ ಇನ್ಸ್‌ಪೆಕ್ಟರ್ ತೀವ್ರ ಘಾಸಿಗೊಳಗಾದರು ಎಂದು ವರದಿಯಾಗಿದೆ. ಜನರ ತಂಡವು ಪೋಲಿಸ್ ವಾಹನಗಳ ಚಕ್ರದ ಗಾಳಿಯನ್ನು ಬಿಟ್ಟರು. ಪೋಲೀಸ್ ಡೆಪ್ಯೂಟಿ ಸೂಪರಿಂಡೆಂಡೆಂಟ್ ಅವರ ಜೀಪನ್ನು ಉರುಳಿಸಿದರು. ಪೋಲೀಸರ ಬಂದೂಕಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ಅಶ್ರುವಾಯುವನ್ನು ಪ್ರಯೋಗಿಸಲಾಯಿತು. ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಗಲಭೇಕೋರರ ಗಲಭೆಯು ನಿಯಂತ್ರಣಕ್ಕೊಳಪಡಲಿಲ್ಲವಾದ್ದರಿಂದ ಪೋಲೀಸ್ ದಳದವರ ಪ್ರಾಣಕ್ಕೆ ತೀವ್ರ ಅಪಾಯ ಕಂಡು ಬಂದಿತು ಪ್ರಯುಕ್ತ. ಸುಮಾರು ೫-೦೦ ಹೊತ್ತಿಗೆ ಗೋಲಿಬಾರ್ ಮಾಡಲಾಯಿತು. ಪೋಲೀಸ್ ಗೋಲಿಬಾರ್‌ನಲ್ಲಿ ಸುಮಾರು ಮೂರು ಜನ ಸತ್ತರು. ೩೩ ಪೋಲೀಸರಿಗೆ ಮತ್ತು ೧೫ ಜನ ಗ್ರಾಮಸ್ಥರಿಗೆ ಗಾಯಗಳಾದವು.

೪. ಮತ್ತಷ್ಟು ಪೋಲೀಸ್ ದಳವನ್ನು ಸ್ಥಳಕ್ಕೆ ಕಳುಹಿಸಲಾಯಿತು ಮತ್ತು ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಐ. ಪಿ. ಸಿ. ಯ ೧೪೩, ೧೪೭, ೧೪೮, ೩೪೧, ೪೫೫, ೩೫೨, ೩೫, ೩೦೭, ೪೪೦, ೫೦೪ ಮತ್ತು ೫೦೬ ನೆಯ ಪ್ರಕರಣಗಳ ಮೇರೆಗೆ ಭದ್ರಾವತಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಯಿತು. ಇಪ್ಪತ್ತೊಂಬತ್ತು ಜನರನ್ನು ದಸ್ತಗಿರಿ ಮಾಡಲಾಯಿತು. ಭದ್ರಾವತಿಯ ಜೆ. ಎಂ. ಎಫ್. ಸಿ ನ್ಯಾಯಾಲಯದಲ್ಲಿ ದಿನಾಂಕ ೮-೬-೮೨ ರಂದು ಚಾರ್ಜ್‌ಷೀಟ್ ಸಲ್ಲಿಸಲಾಯಿತು. ಮೃತರಾದ ವ್ಯಕ್ತಿಗಳ ಪ್ರತಿಯೊಂದು ಕುಟುಂಬಗಳಿಗೆ ೫೦೦೦-೦೦ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಪೋಲೀಸ್ ಗೋಲಿಬಾರ್ ಕುರಿತು ವಿಚಾರಣೆ ನಡೆಸಲು ವಿಶೇಷ ಜಿಲ್ಲಾಧಿಕಾರಿಯವರನ್ನು ಮತ್ತು ಅಡಿಷನಲ್ ಜಿಲ್ಲಾ ಮಾಜಿಸ್ಟ್ರೇಟ್ ಅವರನ್ನು ನೇಮಕ ಮಾಡಲಾಗಿದೆ. ವರದಿಯನ್ನು ನಿರೀಕ್ಷಿಸಲಾಗಿದೆ.

೫. ಇದು ನ್ಯಾಯಾಲಯದ ಪರಿಶೀಲನಾ ವಿಷಯವಾದುದರಿಂದ ಮತ್ತು ಮ್ಯಾಜಿಸ್ಟೀರಿಯಲ್ ವಿಚಾರಣೆಗೆ ಆದೇಶ ನೀಡಿರುವುದರಿಂದ- ಗೋಲಿಬಾರಿನ ಕಾರಣವಾದ ಹಲವಾರು ಸಂದರ್ಭಗಳನ್ನು ಕುರಿತು ಆಳವಾಗಿ ಈಗ ಹೇಳುವುದು ಸೂಕ್ತವಲ್ಲ. ಗೋಲಿಬಾರ್ ಮಾಡಿರುವುದು ಸಮರ್ಥನೀಯವೇ ಅಥವಾ ಅಲ್ಲವೇ ಎನ್ನುವುದು ಮ್ಯಾಜಿಸ್ಟೀರಿಯಲ್ ವಿಚಾರಣೆಯಲ್ಲಿ ತೀರ್ಮಾನವಾಗಲಿದೆ. ಶಿವಮೊಗ್ಗದಿಂದ ಬಂದ ರೈತ ಮುಖಂಡರ ಜತೆ ಸರ್ಕಾರವು ಮಾತುಕತೆ ನಡೆಸಿದ ವಿಷಯ ಮತ್ತು ಕೃಷಿ ಸಮುದಾಯದವರಿಗೆ ಸಾಕಷ್ಟು ರಿಯಾಯಿತಿಗಳನ್ನು ನೀಡಿರುವ ವಿಷಯ ಮಾನ್ಯ ಸದಸ್ಯರೆಲ್ಲರಿಗೂ ತಿಳಿದೇ ಇದೆ. ಮತ್ತಷ್ಟು ಮಾತುಕತೆಗಳು ನಡೆಯುವ ವಿಷಯವೂ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ರೈತರ ನೈಜ ಬೇಡಿಕೆಗಳ ಬಗ್ಗೆ ಸರ್ಕಾರ ಪೂರ್ಣವಾಗಿ ಪರಿಶೀಲಿಸುತ್ತಿದೆ. ಆದುದರಿಂದ ರೈತರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಲು ಯಾವುದೇ ಪ್ರದರ್ಶನದ ಅಗತ್ಯವಿಲ್ಲ. ಅನಗತ್ಯ ಪ್ರವರ್ತನಗಳನ್ನು ನಡೆಸಬಾರದೆಂದು ಸಮಾಜದ ಎಲ್ಲಾ ವರ್ಗಗಳ ಜನರಿಗೆ ಸರ್ಕಾರದ ಕಳಕಳಿಯ ವಿನಂತಿ.

ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರ ವಿಚಾರ ಸರಣಿಯನ್ನು ನಾನು ಬಹಳ ಕೂಲಂಕಷವಾಗಿ ಪರಿಶೀಲಿಸಿದೆ. ಇದು ಶಿವಮೊಗ್ಗದ ನಾಗಸಮುದ್ರದ ಬಳಿ ನಡೆದಂಥ ಒಂದು ದುರ್ಘಟನೆ. ಅದು ನಡೆಯಬಾರದಿತ್ತು. ಆ ದುರ್ಘಟನೆಯಲ್ಲಿ ೩ ಜನ ಮರಣ ಹೊಂದಿದರು. ಇದು ನಮ್ಮ ಮುಂದಿರತಕ್ಕಂಥ ಒಂದು ಸಮಸ್ಯೆ. ಈ ಒಂದು ಸಮಸ್ಯೆಗೆ ಸೀಮಿತವಾಗಿ ನಾವು ಇವತ್ತು ಹೋಗಿಲ್ಲ. ಅನೇಕ ಸದಸ್ಯರು ಅದಕ್ಕೆ ಹೊರತಾದಂಥ ವಿಚಾರಗಳನ್ನೂ ಕೂಡ ಇಲ್ಲಿ ತಂದಿದ್ದಾರೆ. ಮಾನ್ಯ ಸದಸ್ಯರು ಅನೇಕ ಮಂದಿ ಏನು ಹೇಳಿದರು ಅಂದರೆ, ಇದು ಒಂದು ರಾಜಕೀಯ ಪ್ರಶ್ನೆ ಆಗುವುದಿಲ್ಲ. ಏಕೆಂದರೆ ಈ ಪ್ರಶ್ನೆಯನ್ನು ಮುಂದೂಡಿಕೊಂಡು ವಿರೋಧಪಕ್ಷದವರಾಗಲಿ ಅಥವಾ ನಮ್ಮ ಪಕ್ಷದವರಾಗಲಿ ಚುನಾವಣೆಗೆ ಹೋಗುತ್ತಾ ಇಲ್ಲ. ಇದು ಒಂದು ದುರ್ಘಟನೆ ಆಗಿದೆ, ಇದು ಕರ್ನಾಟಕದ ಎಲ್ಲರ ಗಮನವನ್ನು ಸೆಳೆದಿದೆ. ಇದರಿಂದ ರೈತ ಸಮುದಾಯದಲ್ಲಿ ಒಂದು ತರಹದ ಕಳವಳ ಎದ್ದಿದೆ. ಆದ್ದರಿಂದ ಈ ಸದನ ನ್ಯಾಯವಾಗಿ ಈ ವಿಚಾರವನ್ನು ತರ್ಕ ಮಾಡಬೇಕಾದ್ದೇ, ವಿಚಾರಮಾಡಬೇಕಾದ್ದೇ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಎಲ್ಲರೂ ಎಂದು ಹೇಳುವುದಿಲ್ಲ, ಹಲವು ಮಂದಿ ಈ ಬಗ್ಗೆ ವಿಚಾರಮಾಡುವಾಗ, ಮಂತ್ರಿ ಮಂಡಲದ ಸದಸ್ಯರಾದಂಥ ಮಾನ್ಯ ಕಾಗೋಡು ತಿಮ್ಮಪ್ಪನವರ ವಿಚಾರವನ್ನೂ ಕೂಡ ಸಭೆಯ ಮುಂದೆ ತಂದರು. ಆ ಬಗ್ಗೆ ಅವರೂ ಕೂಡ ಒಂದು ವಿವರಣೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಅದು ಎಷ್ಟರಮಟ್ಟಿಗೆ ತಮಗೆ ಉಪಯೋಗವಾಗಿದೆಯೋ ಆ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಾ ಇಲ್ಲ. ಆದರೆ ಇಲ್ಲಿ ಅವರು ಕೊಟ್ಟಂಥ ಹೇಳಿಕೆ ತಮ್ಮ ಮುಂದೆ ಇದೆ, ಎಲ್ಲರ ಹೇಳಿಕೆಯೂ ಕೂಡ ಸಭೆಯ ಮುಂದಿದೆ. ಇಲ್ಲಿ ಅವರು ಹೇಳಿದಂತೆ

ಮುಂಗೋಟಿಯಲ್ಲಿ ಒಂದು ರೈತರ ಸಭೆ ಜರುಗುತ್ತಾ ಇತ್ತು. ಅದು ಸಾಮಾನ್ಯವಾಗಿ ಶಿವಮೊಗ್ಗದಲ್ಲಿ ಚಳುವಳಿ ಮಾಡತಕ್ಕಂಥ ರೈತರ ಪರವಾಗಿರತಕ್ಕಂಥ ಒಂದು ರೈತರ ಸಭೆ ಆಗಿಲ್ಲದೇ ಹೋಗಿರಬಹುದು, ಆದರೂ ಕೂಡ ಅಲ್ಲಿ ಒಂದು ರೈತರ ಸಭೆ ಏರ್ಪಾಡು ಮಾಡಿದ್ದಾರೆ. ಅದಕ್ಕೆ ವಿಧಾನಸಭಾ ಸದಸ್ಯರನ್ನೂ ಮಂತ್ರಿಗಳನ್ನೂ ಆಹ್ವಾನ ಮಾಡಿದ್ದಾರೆ. ಆದರೂ ಸಭೆ ನಡೆಯಬಾರದು ಪ್ರತಿಭಟನಾರ್ಥವಾಗಿ ನೀವೆಲ್ಲಾ ಒಂದು ಕಡೆ ಸೇರಬೇಕು ಎಂದು, ಒಂದೆರಡು ವರ್ಷಗಳಿಂದ ಚಳುವಳಿಯನ್ನು ಮಾಡುತ್ತಾ ಬಂದಂಥ ರೈತರು ನಾಗಸಮುದ್ರದಲ್ಲಿ ಒಟ್ಟಿಗೆ ಅದನ್ನು ಪ್ರತಿಭಟನೆ ಮಾಡಬೇಕು ಎಂದು ಮಾಡಿದರು. ಏಕೆಂದರೆ, ನಾಗ ಸಮುದ್ರ ದಾಟಿ ಮುಂಗೋಟಿಗೆ ಹೋಗಬೇಕಾಗಿತ್ತು. ಅದು ಸುಮಾರು ಒಂದೂವರೆ ಮೈಲಿ ದೂರ ಇರತಕ್ಕ ಪ್ರದೇಶ. ಅದರಲ್ಲಿ ಒಂದು ವಿಚಾರ ಎರಡೂ ಕಡೆಯಲ್ಲೂ ಸ್ಪಷ್ಟವಾಗಿದೆ. ಏಕೆಂದರೆ ಈ ವಿಚಾರವನ್ನು ಎಲ್ಲರೂ ಹೇಳಿದ್ದಾರೆ, ಮಾನ್ಯ ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ. ಏನೆಂದರೆ, ಮಂತ್ರಿಮಂಡದಿಂದ ಸದಸ್ಯರಾದಂಥ ಮಾನ್ಯ ಕಾಗೋಡು ತಿಮ್ಮಪ್ಪನವರು ಶಿವಮೊಗ್ಗ ಜಿಲ್ಲೆಯಲ್ಲಂತೂ ಇದ್ದೇ ಇಲ್ಲ, ಇದ್ದರು ಎಂದು ಯಾರೂ ಹೇಳಲಿಲ್ಲ. ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಈ ಗೋಲೀಬಾರಿನ ವಿಚಾರದಲ್ಲಿ. ಈ ಗೋಲೀಬಾರಿಗೆ ಪ್ರಚೋದನೆ ಅಥವಾ ಯಾವುದೇ ರೀತಿಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಯಾರೂ ಹೇಳಲಿಲ್ಲ. ಆದರೆ ಅವರು ಈ ಜಿಲ್ಲೆಯಿಂದ ಬಂದಂಥ ಮಂತ್ರಿಗಳು, ಅದರಿಂದ ಇರಬಹುದು ಎಂಬ ಊಹೆ ಇದೆ. ಇಲ್ಲಿ ನಾವು ಊಹೆಗಳ ಮೇಲೆ ಆರೋಪಣೆ ಹೊರಿಸಲಿಕ್ಕೆ ಆಗುವುದಿಲ್ಲ. ಆರೋಪಣೆಯನ್ನು ನಾವು ಯಾವುದಾದರೂ ಘಟನೆಗಳ ಮೇಲೆ ಹೊರಿಸಬೇಕೇ ಹೊರತು ಊಹೆಗಳ ಮೇಲೆ ನಾವು ಆರೋಪಣೆಯನ್ನು ಹೊರಿಸಿದರೆ ಅಥವಾ ಮಾಡಿದರೆ ಅದು ಊರ್ಜಿತವಾಗುವಂಥ ಪ್ರಶ್ನೆ ಬಿಡಿ, ಜನ ಕೂಡ ಮೆಚ್ಚುವುದಿಲ್ಲ. ಈ ಗೋಲೀಬಾರನಲ್ಲಿ ಏನೋ ಒಂದು ರೀತಿಯಾದ ಕೈವಾಡ ಮಂತ್ರಿಮಂಡಲದ ಸದಸ್ಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರದು ಇದೆ ಎಂದು ಹೇಳಿದರೆ ಶಿವಮೊಗ್ಗದ ರೈತರೂ ಕೂಡ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಶಿವಮೊಗ್ಗ ರೈತ ಚಳುವಳಿ ನಾಯಕರಿಗೆ ಅವರು ರೇಡಿಯೋನಲ್ಲಿ ಮಾಡಿದಂಥ ಭಾಷಣದಲ್ಲಿ ವ್ಯತ್ಯಾಸ ಇರಬಹುದು ಅಥವಾ ಅವರು ಅದನ್ನು ಒಪ್ಪದೇ ಇರಬಹುದು, ಆದ್ದರಿಂದ ಅವರ ಮೇಲೆ ಸಿಟ್ಟು ಬಂದಿರಬಹುದು, ಅವರಿಗೆ ಬಂದಂಥ ಸಿಟ್ಟಿಗೂ ಅವರಿಗೆ ಬಂದಂಥ ಭಿನ್ನಾಭಿಪ್ರಾಯಕ್ಕೂ 29ನೇ ತಾರೀಖು ನಾಗಸಮುದ್ರದಲ್ಲಿ ನಡೆದಂಥ ಗೋಲೀಬಾರಿಗೂ ಯಾವ ಸಂಬಂಧವನ್ನೂ ಕೂಡ ಕಲ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ನಾನೂ ಕೂಡ ಸ್ಪಷ್ಟವಾಗಿ ಮತ್ತು ಸೂಕ್ಷ್ಮವಾಗಿ ಇಲ್ಲಿ ನಡೆದಂಥ ಚರ್ಚೆ ಮತ್ತು ವಾದವನ್ನು ನೋಡಿದ್ದೇನೆ. ಅದನ್ನು ಸಂಪೂರ್ಣವಾಗಿ ಗ್ರಹಣ ಮಾಡಿದ್ದೇನೆ. ಆದರೆ ಯಾವ ಮಟ್ಟಕ್ಕೂ ಕೂಡ ಆ ಆಪಾದನೆ ಪ್ರತ್ಯಕ್ಷವಾದರೂ ಅಥವಾ ಅಪ್ರತ್ಯಕ್ಷವಾದರೂ ಕೂಡ ಶಬ್ದಗಳಲ್ಲಿ ತಾವು ಮಾಡಿರಬಹುದು. ಆದರೆ ಆ ಸಿಟ್ಟಿನಲ್ಲಿ ಯಾವುದೇ ರೀತಿಯಾದಂಥ ಪ್ರತಿಪಾದನೆ ಮಾಡಿಲ್ಲ. ಇದು ಈಗ ನಡೆದಂಥ ಚರ್ಚೆಗಳ ಒಂದು ವರದಿಯನ್ನು ಮತ್ತು ಚರ್ಚೆಗಳ ವಿವರವನ್ನು ನೋಡಿದಾಗ ಬಹಳ ಸ್ಪಷ್ಟವಾಗಿ ಕಾಣುತ್ತದೆ.

ಶ್ರೀ ಜೆ. ಎಚ್. ಪಟೇಲ್.—ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಕೊಲೆಗೆ ಮೂಲ ಕಾರಣರು ಎನ್ನತಕ್ಕ ಅಭಿಪ್ರಾಯ ಅಲ್ಲಿ ಜನಜನಿತವಾಗಿರುವುದಕ್ಕೆ ಕೆಲವು ಶಕ್ತಿಗಳು ಕಾರಣ ಎಂದು ಹೇಳಿದ್ದು. ಅಲ್ಲಿ ಜನರ ಮನಸ್ಸಿನಲ್ಲಿ ಕಾಗೋಡು ತಿಮ್ಮಪ್ಪನವರು ರೈತರ ವಿರೋಧಿ, ಬೇರೆ ಒಂದು ಸಂಘಟನೆ ಮಾಡುವುದಕ್ಕೋಸ್ಕರ ಪ್ರಯತ್ನ ಪಡುತ್ತಾರೆ, ಅದಕ್ಕೋಸ್ಕರ ಸಭೆ ಮಾಡುವುದಕ್ಕೋಸ್ಕರ ಹೋಗುತ್ತಾರೆ, ಅದನ್ನು ತಡೆಯಬೇಕು ಎನ್ನತಕ್ಕ ಒಂದು ಕೆಟ್ಟ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಕೆಲವು ಶಕ್ತಿಗಳು ಮೂಲ ಎನ್ನುವುದನ್ನು ತಿಳಿದುಕೊಳ್ಳಬೇಕು ಎಂದು ಹೇಳಿದ್ದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ಒಂದು ಊಹೆ. ಅದನ್ನೇ ನಾನು ಹೇಳಿದೆ. ಈ ಊಹೆಗೆ ಆಧಾರ ಏನು ಎನ್ನುವುದು ಪ್ರಶ್ನೆ. ಅವರು ಆ ಜಿಲ್ಲಾ ಮಂತ್ರಿಗಳು. ರೈತರು ಚಳುವಳಿ ಮಾಡಿದಮೇಲೆ ಅವರ ಜಿಲ್ಲೆಗೆ ಹೋಗಲಿಲ್ಲ ಎನ್ನುವ ಪ್ರಶ್ನೆ ಇಲ್ಲ. ಅವರು ಹೋಗಿ ರೈತ ನಾಯಕರಾದಂಥ ರುದ್ರಪ್ಪನವರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಅವರ ಜಿಲ್ಲೆಗೆ ಅನೇಕ ಸಾರಿ ಹೋಗಿದ್ದಾರೆ. ಕಾರ್ಯವಾರಕ್ಕೆ ಹೋದಂತವರು ಅದೇ ದಾರಿಯಾಗಿ ಬೆಂಗಳೂರಿಗೆ ಬಂದಿದ್ದಾರೆ. ಅಲ್ಲದೆ ಆ ಸ್ಥಳಕ್ಕೆ ಕ್ಯಾಬಿನೆಟ್ ಮೀಟಿಂಗಿಗೆ ಹೋಗಿದ್ದೆವು. ಅಲ್ಲದೆ ಸಾರ್ವಜನಿಕ ಸಭೆಗಳಿಗೆ ಕೂಡ ಅವರು ಹೋಗಿ ಭಾಗವಹಿಸಿದ್ದಾರೆ. ಅವರಿಗೆ ನಿಜವಾಗಿಯೂ ಈ ಸಭೆಯನ್ನು ಕಟ್ಟಬೇಕು, ಕಟ್ಟಿ ರೈತ ಚಳುವಳಿಯನ್ನು ಮಾಡಬೇಕು ಎನ್ನುವ ಹಠ ಇದ್ದಿದ್ದರೆ, ಛಲ ಇದ್ದಿದ್ದರೆ ಖಂಡಿತವಾಗಿಯೂ ಮುಂಗೋಟಿಗೆ ಹೋಗತ್ತಾ

ಇದ್ದರು, ಭಾಷಣ ಮಾಡೇ ಮಾಡುತ್ತಿದ್ದರು, ಒಂದು ದೊಡ್ಡ ಚಳುವಳಿಯನ್ನು ಕಟ್ಟತಕ್ಕಂಥ ಹಿನ್ನೆಲೆ ಅವರಿಗೆ ಇದೆ, ಮಾಡುತ್ತಿದ್ದರೋ ಇಲ್ಲವೋ ಅದು ಪ್ರತ್ಯೇಕವಾದ ಪ್ರಶ್ನೆ. ಹಾಗೆ ಮಾಡಬೇಕು ಎಂದು ಇದ್ದಿದ್ದರೆ ಅವರು ಮಾಡೇ ಮಾಡುತ್ತಿದ್ದರು. ಆದರೆ ಅವರು ಅದಕ್ಕೆ ಹೋಗಲಿಲ್ಲ. ಘರ್ಷಣೆ, ಸಂಘರ್ಷಣೆಯಿಂದ ರೈತ ಚಳುವಳಿಯನ್ನು ಮುರಿಯಬೇಕು ಎನ್ನುವ ಉದ್ದೇಶ ಅವರಿಗೆ ಇಲ್ಲ. ನಾನು ಕಂಡಂತೆ ಮಾನ್ಯ ಕಾಗೋಡು ತಿಮ್ಮಪ್ಪನವರು ಯಾರಿಗೂ ಬಿಟ್ಟಿಲ್ಲ, ಆ ಛಲವನ್ನು ಅವರು ಕಳೆದು ಕೊಂಡಿಲ್ಲ. ಅವರಿಗೆ ಛಲ್ಲ ಇದೆ ಎಂದು ನಾನು ಅಂದುಕೊಂಡಿದ್ದೇನೆ, ಆ ಸಭೆಗೆ ಹೋಗಲಿಕ್ಕೆ ಅವರು ಪ್ರಚೋದನೆ ಕೊಟ್ಟು, ಸಭೆಯನ್ನು ಮುಂಗೋಟಿನಲ್ಲಿ ಮಾಡಲಿಕ್ಕೆ ಏರ್ಪಾಡು ಮಾಡಿದ್ದರೆ ಇವರು ನಡೆಸೇ ನಡೆಸುತ್ತಿದ್ದರು. ಇದು ಪ್ರಿಸ್ಟೀಜ್ ಪ್ರಶ್ನೆಯಾಗಿದೆ, ಮತ್ತು ಪ್ರತಿಷ್ಠೆಯ ಮಾತಾಗುತ್ತದೆ. ಅವರೇ ಹೇಳಿ, ಅವರೇ ಮಾಡಿಸಿದ್ದರೆ ಅವರು ಮಾಡಲೇಬೇಕಾಗಿತ್ತು ಮಾಡುತ್ತಿದ್ದರು. ಹಿಂದೆ ಅಂತಹ ಸಭೆಗಳನ್ನು ಅವರು ಮಾಡಿಸಿಲ್ಲ. ಅದರ ಹಿನ್ನೆಲೆ ಇದೆ. ಸರಾಗವಾಗಿ ಅಂತಹ ಸಭೆಗಳನ್ನು ಪತನಗೊಳಿಸಬೇಕು ಎನ್ನುವ ಛಲ ಇದ್ದಿದ್ದರೆ, ಹಿಂದೆ ಮಾಡಿರಬೇಕು ರೈತ ನಾಯಕರಾದ ಶ್ರೀ ವಹಾನ್ ರುದ್ರಪ್ಪನವರ ನೇತೃತ್ವದಲ್ಲಿರುವಂಥ ಒಂದು ಚಳುವಳಿಯನ್ನು ಮುಗಿಯಲಿಕ್ಕೆ, ಅದು ಇವತ್ತು ನಿನ್ನೆ ನಡೆದ ಚಳುವಳಿಯಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿಗಳಾಗುವುದಕ್ಕೆ ಹಿಂದಿನಿಂದಲೂ ಚಳುವಳಿ ಪ್ರಾರಂಭವಾಗಿದೆ. ಕಳೆದ ಬಾರಿ ಚಳುವಳಿಯಾದಾಗ ನಾನೂ ಕೂಡ ಸ್ವತಃ ಅವರ ಜೊತೆಯಲ್ಲಿ ಮಾತನಾಡಲಿಕ್ಕೆ ಹೋಗಿದ್ದೇನೆ. ಇದೆಲ್ಲಾ ನಡೆದಮೇಲೆ ಯಾವರೀತಿಯಿಂದ ಪ್ರಚೋದನೆಗೆ ಪ್ರೋತ್ಸಾಹವನ್ನು ಅವರು ಕೊಟ್ಟರು ? ಅದನ್ನು ಮುರಿಯಬೇಕೆಂಬ ಛಲದಿಂದ ಅಥವಾ ಉದ್ದೇಶದಿಂದ ಮಾಡಿಸಿದ್ದಾರೆ ಅವರು ಹೋಗಿದ್ದರೂ ಬೆಂಗಳೂರಿನಿಂದ ಈರೀತಿ ಪ್ರಚೋದನೆ ಕೊಟ್ಟಿದ್ದಾರೆಂದು ಆಪಾದನೆಯನ್ನು ತಾವು ಮಾಡಿಲ್ಲ. ಆ ರೀತಿ ತಮಗೆ ಮನಸ್ಸು ಇದ್ದರೂ ಕೂಡ ಅದನ್ನು ತಾವು ಹೇಳಿಲ್ಲ. ರಾಜಕೀಯವಾಗಿ ತಾವು ಹೀಗೆ ಹೇಳಿರಬಹುದೋ ಏನೋ ನಮಗೆ ಗೊತ್ತಿಲ್ಲ. ಆದರೆ ತಮಗೆ ನಾನು ಹೇಳಿದಂಥ ಉದ್ದೇಶ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಈ ಒಂದು ವಿಚಾರವನ್ನು ಈ ಸಭೆಯಲ್ಲಿ ಚರ್ಚೆಮಾಡಿದಾಗ ನಮ್ಮ ಅನೇಕ ಜನ ರೈತರ ಹಿತದೃಷ್ಟಿಯಿಂದ ಮತ್ತು ಅಂಥ ವಿಚಾರಗಳು ಬಂದಾಗ ನಿಷ್ಪಕ್ಷಪಾತವಾಗಿ ಚಿಂತನೆ ಮಾಡತಕ್ಕ ಹಿರಿಯ ಮುಖಂಡರು ತಾವು ಆಗಿದ್ದೀರಿ ಅದಕ್ಕೆ ನಾನು ತಲೆಬಾಗಬೇಕಾಗುತ್ತದೆ. ಆದರೆ ಈ ವಿಚಾರವನ್ನು ಏತಕ್ಕೆ ತರಬೇಕು ? ಇದರಲ್ಲಿ ಅಂಥಾದ್ದು ನನಗೆ ಏನೂ ಕಾಣುತ್ತಿಲ್ಲ. ಸರ್ಕಾರವಾಗಲಿ ಅಥವಾ ಮಂತ್ರಿಮಂಡಲದಲ್ಲಿರತಕ್ಕ ಮಾನ್ಯ ಕಾಗೋಡು ತಿಮ್ಮಪ್ಪನವರಾಗಲಿ ಕಳೆದ ೨-೨½ ವರ್ಷಗಳಿಂದ ತಾಳ್ಮೆಯಿಂದ ಈ ರೈತರ ಚಳುವಳಿಯನ್ನು ಸಹಿಸಿಕೊಂಡು ಅದರ ಜೊತೆ ಸಂಧಾನವನ್ನು ಮಾಡಿಕೊಂಡು ಬರುತ್ತಿದೆ. ಇಂಥ ಸರ್ಕಾರ ಬೇರೊಂದಿಲ್ಲ.

ಶ್ರೀ ಎಂ. ಸಿ. ನಾಣಯ್ಯ.—ಸರ್ಕಾರದ ತಾಳ್ಮೆ ಕೆಟ್ಟಿದ್ದಿದ್ದರೆ ಏನಾಗುತ್ತಿತ್ತು ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾಳ್ಮೆ ಏತಕ್ಕೆ ಕೆಡುತ್ತದೆ ? ತಾಳ್ಮೆ ಕೆಡುವಂಥಾದ್ದು ಏನೂ ಇಲ್ಲ. ರೈತರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ನಮಗೆ ಶಕ್ತಿ ಇಲ್ಲದೇ ಇದ್ದಿದ್ದರೆ...

ಶ್ರೀ ಎಂ. ಸಿ. ನಾಣಯ್ಯ.—ರೈತರ ಚಳುವಳಿಯನ್ನು ಸಹನೆಯಿಂದ, ತಾಳ್ಮೆಯಿಂದ, ಸಂಧಾನದ ಮೂಲಕ ಸಹಕರಿಸಿಕೊಂಡು ಬಂದಿರುವುದು ನಮ್ಮದು ಒಂದೇ ಒಂದು ಸರ್ಕಾರ. ಬೇರೆ ಯಾವ ಸರ್ಕಾರಗಳೂ ಈ ರೀತಿ ಮಾಡಿಲ್ಲವೆಂದು ತಾವು ಹೇಳುತ್ತಿದ್ದೀರಿ. ತಾಳ್ಮೆ ಕೆಟ್ಟಿದ್ದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ? ಎಂಬುದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾಳ್ಮೆ ಕೆಡತಕ್ಕ ಪರಿಸ್ಥಿತಿಯೇ ಬರುವುದಿಲ್ಲ. ನಾನು ಪ್ರತ್ಯೇಕವಾಗಿ ನೋಡಿದ್ದೇನೆ. ಏಕೆಂದರೆ, ಹಿಂದೆ ನಾನು ಬೆಂಗಳೂರಿನಿಂದ ಕಾರ್‌ನಲ್ಲಿ ಹೋಗುವಾಗ ನಮ್ಮ ಕಾರನ್ನು ರೈತರು ತಡೆದು ನಿಲ್ಲಿಸುತ್ತಿದ್ದರು, ಅಡ್ಡ ಹಾಕುತ್ತಿದ್ದರು. ನಾನು ಕಾರ್‌ನಿಂದ ಕೆಳಗೆ ಇಳಿದು ತಾಳ್ಮೆಯಿಂದ ಅವರ ಜೊತೆ ಮಾತುಕತೆ ಮಾಡಿ ಆ ಮೇಲೆ ಮುಂದೆ ಹೋಗಿದ್ದೇನೆ. ಸರ್ಕ್ಯೂಟ್ ಹೌಸ್‌ಗೆ ನಾನು ಹೋದಾಗ ಅಲ್ಲಿ ಸಾವಿರಾರು ಜನರು ಬಂದು ಸುತ್ತುಗಟ್ಟಿದರು. ನನಗೆ ಅಲ್ಲಿ ಇಬ್ಬರು ಅಧಿಕಾರಿಗಳನ್ನು ಬಿಟ್ಟರೆ ಇನ್ನು ಒಬ್ಬ ಪೋಲೀಸ್ ಕಾನ್ಸ್‌ಸ್ಟೇಬಲ್ ಕೂಡ ಇರಲಿಲ್ಲ. ಆಗ ಆ ರೈತರ ಮಧ್ಯೆ ಕೂತುಕೊಂಡು ರಾತ್ರಿಯಿಂದ ಬೆಳಗ್ಗೆ ೫ ಗಂಟೆಯವರೆಗೂ ಚರ್ಚೆಮಾಡಿ ಸಂಧಾನಕ್ಕೆ ಅವರನ್ನು

ಬೆಂಗಳೂರಿಗೆ ಕರೆದಿದ್ದೇನೆ. ನಮಗೆ ಅಧಿಕಾರ ಇದ್ದರೂ ಕೂಡ ಆ ರೈತರ ಮೇಲೆ ಅಧಿಕಾರವನ್ನು ಪ್ರಯೋಗ ಮಾಡಿಲ್ಲ. ತಾವು ಹೇಳಿದಂತೆ ರೈತರು ಯಾರು ? ನಮಗೆ ಅನ್ನ ಕೊಡುವವರು, ತಮಗೆ ಅನ್ನ ಕೊಡುವ ರೈತ ಬಾಂಧವರಮೇಲೆ ಸವಾರಿ ಮಾಡತಕ್ಕ ಜನರು ನಾವಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಾವು ತಾಳ್ಮೆಯಿಂದ ಇದ್ದುದಕ್ಕೇ ಅಷ್ಟೊಂದು ಕೊಲೆಗಳು ಆಯಿತೆ ? ಈ ಕೊಲೆಗೆ ಕಾರಣರು ಯಾರು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಹೇಳುತ್ತೇನೆ, ತಾವು ಸ್ವಲ್ಪ ಸಮಾಧಾನದಿಂದ ಇರಿ. ನಾವು ಮಾತನಾಡುವಾಗ ಯಾರಾದರೂ ಮಧ್ಯೆ ಎದ್ದರೆ ಆಗ ನಮಗೆ ತಾಳ್ಮೆ ಕೆಲವು ಸಂದರ್ಭಗಳಲ್ಲಿ ಕೆಡುತ್ತದೆ. ಆದ್ದರಿಂದ ತಾವು ತಾಳ್ಮೆಯಿಂದ ತಮ್ಮ ವಿಚಾರ ಸರಣಿಯನ್ನು ಮುಂದುವರಿಸಿಕೊಂಡು ಹೋಗಿ. ತಮ್ಮ ವಿಚಾರ ಸರಣಿಗೆ ತಡೆ ಹಾಕಬಾರದೆಂದು ತಮ್ಮ ಉದ್ದೇಶ ಇದೆ. ಆದ್ದರಿಂದಲೇ ತಾವು ಹೇಳುವಾಗ ನಾವು ಯಾವುದೇ ಮಾತನ್ನು ಆಡಲಿಲ್ಲ. ತಾವು ಅನೇಕರು ಹಿರಿಯ ಸದಸ್ಯರಿದ್ದೀರಿ. ತಮ್ಮ ಅನುಭವ ವಿಚಾರಧಾರೆಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ನಮಗೆ ಎಷ್ಟು ಶಕ್ತಿ ಇದೆ ಅಷ್ಟು ಪ್ರಯತ್ನ ಮಾಡಿ ರೈತರಿಗೆ ನಮ್ಮ ಸೇವೆಯನ್ನು ಮಾಡಬೇಕೆಂದಿದ್ದೇವೆ. ನಮಗೆ ಅಧಿಕಾರ ಇದೆ. ಹೌದು. ಆದರೆ ಅದು ರೈತರ ಸೇವೆಗಾಗಿಯೇ ವಿನಿಯೋಗ ಆಗಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ಇವತ್ತು ರೈತರ ಚಳುವಳಿಯನ್ನು ಮುರಿಯುವುದಕ್ಕೆ ಅನೇಕ ರೀತಿಯ ಪ್ರಚೋದನೆಗಳು ಆದುವು. ಶಿವಮೊಗ್ಗದಲ್ಲಿರತಕ್ಕ ರೈತ ಸಂಘದವರು ಏನೋ ದುರುದ್ದೇಶದಿಂದ ಪ್ರಚೋದನೆ ಮಾಡುತ್ತಿದ್ದಾರೆಂದು ನಾವು ತಿಳಿದುಕೊಂಡಿಲ್ಲ. ಅವರ ಬಗ್ಗೆ ನಮಗೆ ಚಿಂತನೆ ಇದೆ. ತಾಳ್ಮೆ ಕೆಡತಕ್ಕ ಅನೇಕ ಪ್ರಸಂಗಗಳು ಅನೇಕ ವರ್ಷಗಳಿಂದ ಇದ್ದರೂ ಕೂಡ ಇಂಥ ಅಹಿತಕರ ಘಟನೆಗಳು ಯಾವುವೂ ನಡೆಯಲಿಲ್ಲ. ಅವರಮೇಲೆ ಅಧಿಕಾರ ಅಥವಾ ಬಲ ಪ್ರಯೋಗವನ್ನು ನಾವು ಮಾಡಲಿಲ್ಲ. ತಾಳ್ಮೆಯಿಂದ ವರ್ತಿಸಿಕೊಂಡು ಬಂದಿದ್ದೇವೆ ಅಂಥ ಒಂದು ದಿವ್ಯ ಪರಂಪರೆ ನಮ್ಮ ಸರ್ಕಾರಕ್ಕಿದೆ. ರೈತ ಚಳುವಳಿಯನ್ನು ಮುರಿಯಬೇಕೆಂಬ ಇಚ್ಛೆ ನಮಗಿಲ್ಲ. ಕಾರಣ ಅದರಲ್ಲಿ ಯಾವ ರಾಜಕೀಯ ಉದ್ದೇಶವೂ ಇಲ್ಲವೆಂದು ನಾವು ತಿಳಿದುಕೊಂಡಿದ್ದೇವೆ. ಒಂದು ವೇಳೆ ರಾಜಕೀಯ ಉದ್ದೇಶದಿಂದ ಅದು ಕೂಡಿದ್ದರೆ ಅದನ್ನು ಎದುರಿಸುವುದಕ್ಕೆ ನಮಗೆ ಶಕ್ತಿ ಇದೆ, ಅದನ್ನು ಎದುರಿಸುತ್ತೇವೆ. ಈ ಮಾನ್ಯ ರುದ್ರಪ್ಪನವರ ನಾಯಕತ್ವದಲ್ಲಿ ರೈತರ ಚಳುವಳಿ ಏನು ನಡೆಯುತ್ತಿದೆ ಅದೊಂದು ರಾಜಕೀಯ ಚಳುವಳಿ ಅದು ಬೇಡ. ರೈತ ಸಮುದಾಯದ ಅಭಿವೃದ್ಧಿಗೆ ಅವರದೇ ಆದ ರೀತಿಯಲ್ಲಿ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಅದನ್ನು ನಾವು ಪ್ರತ್ಯೇಕವಾಗಿ ಮಾತನಾಡೋಣ. ಆದರೆ ಈ ಒಂದು ಸದುದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಅವರು ಹೋಗತಕ್ಕ ದಾರಿ ಅಹಿತವೋ ವಿಹಿತವೋ ಅದನ್ನು ಪ್ರತ್ಯೇಕವಾಗಿ ಅವರ ಜೊತೆಯಲ್ಲೇ ಮಾತನಾಡೋಣ. ಅದಕ್ಕೋಸ್ಕರವಾಗಿಯೇ ನಾವು ಅಡಿಷನಲ್ ಚೀಫ್ ಸೆಕ್ರೆಟರಿಯವರನ್ನು ಅಲ್ಲಿಗೆ ಕಳುಹಿಸಿದ್ದೇವು. ಶ್ವೇತ ಪತ್ರದಲ್ಲಿ ನಾವು ಏನು ಕಾಣಿಸಿದ್ದೇವೆ ಅದರಲ್ಲಿ ಎಷ್ಟು ಅನುಷ್ಠಾನಕ್ಕೆ ಬಂದಿದೆ ಎಂಬುದನ್ನು ನೋಡಬೇಕು. ಆದರೆ ಏನೇನೂ ಅನುಷ್ಠಾನವೇ ಆಗಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ಶ್ವೇತಪತ್ರದಲ್ಲಿ ಏನು ಹೇಳಿದ್ದೇವೆ ಅದನ್ನು ಚಾಚೂ ತಪ್ಪದೆ ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಿದ್ದೇನೆ. ಅದು ಎಲ್ಲಾದರೂ ಆಗದೇ ಹೋದರೆ ಆಗ ನಮ್ಮ ಜೊತೆ ತಾವು ಬಂದು ಮಾತನಾಡಬಹುದು. ಅವರಿಗೆ ಬೇಕಾಗಿರುವುದು ಅವರ ಸಮಸ್ಯೆಗಳ ಪರಿಹಾರ. ಮಾನ್ಯ ರುದ್ರಪ್ಪನವರ ಸಂಗಡಿಗರು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ ಮೇಲೆ ಮುಖ್ಯ ಮಂತ್ರಿಗಳೂ ಕೂಡ ಅದನ್ನೇ ಹೇಳಿದ್ದಾರೆ. ಅವರ ಜೊತೆಯಲ್ಲಿ ಏನು ಹೇಳಿದ್ದೇವೆ ಅದನ್ನು ಮತ್ತೊಮ್ಮೆ ಚರ್ಚೆಮಾಡುವುದಕ್ಕೆ ನಮಗೆ ತೆರೆದ ಮನಸ್ಸಿದೆ. ಸರ್ಕಾರದ ಪರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಯಾವ ಕೆಲಸ ಆಗಿಲ್ಲ ಎಂಬುದನ್ನು ಒಂದು ಪಟ್ಟಿ ಮಾಡಿ ನಾವೆಲ್ಲರೂ ಪರಸ್ಪರ ಒಟ್ಟಿಗೇ ಕೂತು ಚರ್ಚೆ ಮಾಡೋಣ. ಏಕೆಂದರೆ ರೈತರ ಸಮಸ್ಯೆಗಳನ್ನು ಪರಿಹರಿಸುವುದು ಬಹಳ ಮುಖ್ಯ. ಕೇವಲ ಸರ್ಕಾರವನ್ನು ರಚನೆ ಮಾಡಿದಂಥ ಪಕ್ಷಕ್ಕೆ ಇದು ಸೀಮಿತವಾದಂಥ ಪ್ರಶ್ನೆ ಅಲ್ಲ. ಇದು ನಮ್ಮೆಲ್ಲರ ಸಮಸ್ಯೆ ಎಂದು ತಿಳಿದುಕೊಳ್ಳಬೇಕೇ ಹೊರತು ರೈತರ ನೆಮ್ಮದಿಯನ್ನು ಕದಡುವ ಪ್ರಯತ್ನ ಮಾಡುವುದಾದರೆ ಅದು ಯಾವ ಸರ್ಕಾರಕ್ಕೇ ಆದರೂ ತೊಂದರೆಯಾಗುತ್ತದೆ. ಇಡೀ ದೇಶವನ್ನೇ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ದಾರಿಯಲ್ಲಿ ಒಂದು ವಿಷ ಬೀಜವನ್ನು ಹಾಕಿದಂತಾಗುತ್ತದೆ. ಅದು ಬೇಡ. ರೈತರನ್ನು ನಾವು ಸಂಘಟಿಸಬೇಕು. ನಾವೂ ನೀವೂ ಸೌಹಾರ್ದಯುತವಾಗಿ ಹೋಗದೇ ಬೇರೆಬೇರೆ ದಾರಿಯಲ್ಲಿ ಹೋಗುವುದಾದರೆ ಇನ್ನು ಕೇವಲ ೨ ತಿಂಗಳೊಳಗೆ ಸಹಕಾರ ಸಂಘಗಳಲ್ಲಾಗಲಿ ಅಥವಾ ಜಿಲ್ಲಾ ಬ್ಯಾಂಕ್‌ಗಳಲ್ಲಾಗಲಿ ಯಾವ ರೈತರಿಗೂ ಒಂದೇ ಒಂದು ನಯಾಪೈಸೆ ಸಾಲ ಸಿಕ್ಕುವುದಿಲ್ಲ......

SRI M. C. NANAIAH.—They are your creations. The Government should squarely own it. I agree with you that they are your creations.

SRI M. VEERAPPA MOILY.—But you don't contribute to it.

SRI M. C. NANAIAH.—You have already contributed. You have already reached the saturation point and you cannot go beyond that.

ಶ್ರೀ ಎಂ. ವೀರಪ್ಪ ಮೊಯ್ಲಿ.— ರೈತರ ಬಗ್ಗೆ ನಾವು ಏನು ಮಾಡಿದ್ದೇವೆ, ಮಾಡುತ್ತಿದ್ದೇವೆ ಎಂದರೆ ಅವರ ಸಮಸ್ಯೆಗಳನ್ನು ಪರಿಹಾರ ಮಾಡುವ ಸಲುವಾಗಿ ಈ ವಿಧಾನ ಸಭೆ ಮುಗಿಯುವುದಕ್ಕೆ ಮುಂಚಿತವಾಗಿ ಒಂದು ಶ್ವೇತಪತ್ರವನ್ನು ತಯಾರು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಬಗ್ಗೆ ಚರ್ಚೆ ಮಾಡೋಣ. ಹಿಂದೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ವಿಚಾರದಲ್ಲಿ ಚರ್ಚೆಯಾದಾಗ ಈ ಸದನ ಮುಗಿಯುವುದಕ್ಕೆ ಮುಂಚಿತವಾಗಿ ಇದು ಚರ್ಚೆಯಾಗಬೇಕೆಂದು ಹೇಳಿದ್ದೇವೆ.

6-30 P.M.

ನಾವು ಏನೋ ಮಾಡುತ್ತಾ ಇದ್ದೇವೆ ಎಂದು, ಇದರ ಹಿಂದೆ ಪಾಲಿಟಿಕಲ್ ಬ್ಯಾಕಿಂಗ್ ಏನೂ ಇಲ್ಲ. ಇದು ರೈತನಿಗೆ ಕೊಡತಕ್ಕಂಥ ರಿಯಾಯತಿ. I feel it is available. The information about what we have done and what we have not done is available. The Government is prepared to issue a white paper.

SRI M. C. NANAIAH.—It is under preparation?

SRI M. VEERAPPA MOILY.—The demands are coming and there will be discussion on them. We are prepared to bring a white paper. ಈ ಘಟನೆ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. ಜುಡಿಶಿಯಲ್ ಮ್ಯಾಜಿಸ್ಟ್ರೇಟ್ ಮುಂದೆ ಕೂಡ ಚಾರ್ಜ್ ಶೀಟ್ ಹಾಕಿದೆ. ಅದರಿಂದ It will be sub-judice if I talk about incident in more details. ಇನ್ನು ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೂಡ ಆ ಬಗ್ಗೆ ವಿಚಾರಣೆಯಲ್ಲಿದ್ದಾರೆ. ಈಗ ಒಂದು ಪ್ರಶ್ನೆ ಉಳಿದದ್ದು ಏನೆಂದರೆ ಇದು ನ್ಯಾಯಾಂಗ ವಿಚಾರಣೆಯಾಗಬೇಕು ಎಂತಕ್ಕಂಥವಾದ ಇದೆ. ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ಯಿಂದ ಬೇಡ, ಉನ್ನತ ಮಟ್ಟದ ಅಧಿಕಾರಿಯಿಂದು ಇರಲಿ ಎಂದು ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ಯಿಂದ ವಿಚಾರಣೆಯಾಗಲಿ ಎಂದು ನೇಮಕವಾಗಿದೆ. ಇದರಲ್ಲಿರುವ ಪ್ರಶ್ನೆ ಏನೆಂದರೆ. ನ್ಯಾಯಾಂಗ ವಿಚಾರಣೆ ಡಿಸ್ಟ್ರಿಕ್ಟ್ ಜಡ್ಜ್‌ಯಿಂದ ಆಗಬೇಕು ಅಥವಾ ಆ ಮಟ್ಟದಲ್ಲಿ ಯಾರಾದರೂ ಮಾಡಬೇಕು ಎಂದು ತಾವು ಹೇಳಿದ್ದೀರಿ, ನ್ಯಾಯಾಂಗ ವಿಚಾರಣೆ ಆಗಬೇಕು ಎಂಬ ವಿಚಾರವನ್ನು ಮುಂದಿಟ್ಟಿದ್ದೀರಿ. ಇದಕ್ಕೆಲ್ಲಾ ಯಾರು ಪ್ರಚೋದನೆ ಕೊಟ್ಟರು, ಶ್ರೀಮಾನ್ ನಾಗೋಡು ತಿಮ್ಮಪ್ಪನವರು ಇದರ ಹಿನ್ನೆಲೆಯಲ್ಲಿದ್ದಾರೆ ಎಂದು ಏನೇನೋ ವಿಚಾರಗಳು ಇದರಲ್ಲಿ ಬಂದಿವೆ. Everything got mixed up. ನಾನು ಹಿಂದೆ ಹೇಳಿದಂತೆ there is absolutely no prima facie case for such a demand. ಆದರೆ ನೀವು ನ್ಯಾಯಾಂಗ ವಿಚಾರಣೆ ಆಗಬೇಕು ಎಂದು ಹೇಳಿದರೆ, I do not understand one thing...

SRI M. C. NANAIAH.—The Hon. Minister has said that there is no prima facie case for such a demand.

SRI M. VEERAPPA MOILY.—I am on my legs, why should the hon. Member lose patience?

MR DEPUTY SPEAKER.—The Hon. Minister has not yielded. Let Let him complete.

SRI M. C. NANAIAH.—He has made a very serious statement.

MR. DEPUTY SPEAKER.—As you have got right, he too has got a right.

SRI M. VEERAPPA MOILY.—I have not made any such statement.

SRI M. C. NANAIAH.—He has made a statement. He stated that there is no prima facie case for such a demand. In that case I ask whether there is a prima facie case for instituting an enquiry by a Sub Divisional Magistrate.

MR. DEPUTY SPEAKER.—When you were speaking, he was simply listening.

SRI M. C. NANAIAH.—I am trying to take only a clue.

SRI M. VEERAPPA MOILY.—Fortunately you have not become Judge.

SRI M. C. NANAIAH.—If I become a Judge, you would have been elsewhere.

SRI M. VEERAPPA MOILY.—I know where you should be.

SRI M. C. NANAIAH.—I know it.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಜಡ್ಜ್ ಆಗಿದ್ದರೆ ಒನ್ಮೆಲೇ ಜಡ್ಜ್‌ಮೆಂಟ್‌ಗೆ ಬರುತ್ತಾ ಇದ್ದರು Better take it in totality. Do not come to a sudd n conclusion. ಅದನ್ನು ಬೇರೆ ಕಡೆ ಮಾಡಿ. ಸದನದಲ್ಲಿ ಬಂದು ತಿಪ್ಪೆ ಸಾರಿಸುವ ಕೆಲಸ ನೀವೇಕೆ ಮಾಡುತ್ತೀರಿ, ಒಳ್ಳೆಯ ಕೆಲಸಮಾಡಿ.

ಶ್ರೀ ಪಿ. ರಾಮದೇವ್.—ನಾವು ಹೇಳಿದ್ದನ್ನು ನೀವು ಮರೆತು ಬಿಟ್ಟಿದ್ದೀರಿ. ಗೌರವವಾಗಿ ತಿಪ್ಪೆ ಸಾರಿಸುತ್ತೀರಿ.

ಶ್ರೀ ಎಂ ವೀರಪ್ಪ ಮೊಯ್ಲಿ.—ಗೌರವವಾಗಿ ಸದನದಲ್ಲಿ ನಡೆದುಕೊಳ್ಳಬೇಕು ಎನ್ನುವುದನ್ನು ಕಲಿಯಬೇಕು. ತಿಪ್ಪೆ ಸಾರಿಸಲಿಕ್ಕೆ ಬೇರೆ ಜನ ಇದ್ದಾರೆ. ನೀವೇಕೆ ಮಾಡುತ್ತೀರಿ.

ಶ್ರೀ ಪಿ. ರಾಮದೇವ್.—ನೀವು ಮಾಡತಕ್ಕಂಥ ಭಾಷಣ ಹೇಗಿದೆಯೆಂದರೆ....

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಲ್ಪ ತಾಳ್ಮೆ ಇರಲಿ, ನೀವು ಗಂಟೆಗಟ್ಟಲೆ ಮಾತನಾಡಿದಿರಿ, ನಮಗೆ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ರಾಮದೇವ್ ಅವರಿಗೆ ಮನೆ ಸಾರಿಸಲಿಕ್ಕೆ ಬೇರೆ ಯಾರೂ ಇಲ್ಲ, ಅವರೇ ಸಾರಿಸಿಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದಕ್ಕೆ ಮಾನ್ಯ ಕಾಗೋಡು ತಿಮ್ಮಪ್ಪನವರ ಪ್ರಚೋದನ ಇದೆ, ಅವರು ಮಾಡಿಸಿದ್ದಾರೆ ಎಂದು ಕೆಲವರು ಹೇಳಿದರು, ಮತ್ತೆ ಕೆಲವರು ಇನ್ನೂ ಮುಂದೆ ಹೋಗಿ ಅವರೆ ಕೊಲೆಗಡುಕರು ಎಂದು ಹೇಳಿದರು You connect him with the incident. I said there is no prima facie case for that.

ಶ್ರೀ ಎಂ. ಸಿ. ನಾಣಯ್ಯ.—ಮೊದಲೇ ಹೇಳಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಾ ಇರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನನಗೆ ವಿಚಾರ ಹೇಳಲಿಕ್ಕೆ ಬಿಡಲಿಲ್ಲ.

SRI M. C. NANAIAH.—You have given proper explanation now

SRI M. VEERAPPA MOILY.—You stopped me. You have interrupted I know you have been a Prosecutor. You have done that here.

SRI M. C. NANAIAH.—Kindly prosecute the case of Sri Kagodu Thimmappa effectively.

SRI M. VEERAPPA MOILY.—You have failed in that job. I would have believed it at least for academic interest if you had prosecuted a case well. That is good. But you have failed.

SRI M. C. NANAIAH.—Your defence is not necessary then.

SRI M. VEERAPPA MOILY.—No defence, ಮತ್ತೊಂದು ನನಗೆ ಆಶ್ಚರ್ಯವಾಗಿದ್ದು ಏನೆಂದರೆ, ನಾವು ಕೆಲವು ಮೌಲ್ಯಗಳನ್ನು ಮರೆಯುತ್ತಾ ಇದ್ದೇವೆ. We just forget When the Britishers were there in this country we used to accept even the I C.S. Officers becoming Judges. They used to be Judges. Can you forget it? These things have changed now. ಆದರೆ ನ್ಯಾಯಂ ಬದಲಾವಣೆಯಾಗುವುದಿಲ್ಲ I will go one step forward. ಏಕೆಂದರೆ, ಇದು ಒಂದು ಆಡಳಿತಾತ್ಮಕವಾದ ವಿಚಾರ ಕೂಡ ಇದೆ. ಅನೇಕ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರು ವಿಚಾರಮಾಡಿದಂಥ ವಿಚಾರಣೆಗಳಿವೆ, ಗೋಲೀಬಾರ್ ಪ್ರಸಂಗದಲ್ಲಿ. ನನ್ನ ಸೀಮಿತವಾದಂಥ ಅನುಭವದಲ್ಲಿ ಅಂತಹ ಅಪಾದನೆಗಳು ಬಂದಿದ್ದನ್ನು ನಾನು ಕೇಳಲಿಲ್ಲ. ಅದರು ನ್ಯಾಯ ಮಾಡುವುದಿಲ್ಲ, ಅವರಿಗ ನ್ಯಾಯ ಮಾಡಲಿಕ್ಕೆ ಗೊತ್ತಿಲ್ಲ, ಅನನುಭವಿಗಳು ಎಂದು ಆಪಾದನೆಯನ್ನು ಮಾಡಿವಂಥ ಪ್ರಸಂಗಗಳು ನನ್ನ ಸೀಮಿತವಾದ ಅನುಭವದಲ್ಲಿ ಎಂದೂ ಕೇಳಲಿಲ್ಲ. You may correct me if something is wrong. ಅದು ಸರಿಯಾಗಿ ವಿಚಾರಣೆ ಆಗಲಿಲ್ಲ. There are incidents where it has been done.

ಶ್ರೀ ಹೆಚ್. ಡಿ. ದೇವೆಗೌಡ.—ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ಯಿಂದ ಎನ್‌ಕ್ವೈರಿ ಆಗಿರುವುದನ್ನು ಹೇಳುತ್ತೀರಾ?

SRI M. VEERAPPA MOILY.—I can furnish the details.

SRI H. D. DEVE GOWDA.—Enquiry by a sub-divisional Magistrate is an automatic enquiry after the police firing. ಎಷ್ಟು ಪ್ರಕಣಗಳಲ್ಲಿ ಈ ರಾಜ್ಯದಲ್ಲಿ ಕಳೆದ ೩೦ ವರ್ಷಗಳಲ್ಲಿ ಸ್ಪೆಷಲ್ ಡೆಪ್ಯುಟಿ ಕಮಿಷನರಿಂದ ಗೋಲೀಬಾರ್ ಬಗ್ಗೆ ತನಿಖೆಯಾಗಿದೆ ಎಂಬುದನ್ನು ನಿಮ್ಮ ಅಧಿಕಾರಿಗಳಿಂದ ವರದಿಯನ್ನು ತರಿಸಿ ಹೇಳುತ್ತೀರಾ?

SRI M. VEERAPPA MOILY.—I will get it ವರದಿಯನ್ನು ತರಿಸಿಕೊಡುತ್ತೇನೆ. ಇದರಲ್ಲಿ ಎರಡು ಮುಖ ಇದೆ, ಈಗ ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಬೇಕು ಎಂಬ ತಮ್ಮ ವಾದವನ್ನು ಮುಂದಿಟ್ಟಿದ್ದೀರಿ. ಇದರಲ್ಲಿ ಎರಡು ಮುಖ ಇದೆ. ನಿಮ್ಮ ದೃಷ್ಟಿಯಲ್ಲಿ ರಚನಾತ್ಮಕವಾದಂಥ ರೈತರ ಚಳುವಳಿ ಶಿವಮೊಗ್ಗದಲ್ಲಿ ನಡೆಯುತ್ತಾ ಇತ್ತು, ಅದೇ ರೀತಿಯಲ್ಲಿ ಸರ್ಕಾರ ಕೂಡ ಎರಡು ವರ್ಷಗಳಿಂದ ತಾಳ್ಮೆಯಿಂದ ಆ ಚುಳುವಳಿಯನ್ನು ವಿಚಾರಿಸಿಕೊಂಡು ಸರ್ಕಾರ ಸಂಧಾನ ಮಾಡುತ್ತಾ ಇದೆ ಕೆಲವು ವಿಚಾರಗಳಲ್ಲಿ ಒಮ್ಮತ ಕೂಡ ಆಗಿದೆ.

ಈ ಮಧ್ಯೆ ಈ ದುರ್ಘಟನೆ ನಡೆಯಬಾರದಾಗಿತ್ತು. ಆದರೂ ನಡೆದಿದೆ. ಸರ್ಕಾರ ಅಡಿಷನಲ್ ಮ್ಯಾಜಿಸ್ಟ್ರೇಟ್ ಮೂಲಕ ಈ ಬಗ್ಗೆ ವಿಚಾರಣೆಯನ್ನು ಮಾಡಬೇಕೆಂದು ಮಾಡಿದೆ. ವಿರೋಧಪಕ್ಷದ ಮಾನ್ಯ ಸದಸ್ಯರು ನ್ಯಾಯಾಂಗ ವಿಚಾರಣೆಯನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ನ್ಯಾಯಾಂಗ ವಿಚಾರಣೆಯನ್ನೇ ಮಾಡಿದರೆ ವಿಶೇಷವಾಗಿ ಏನು ಸಮಸ್ಯೆ ಪರಿಹಾರವಾಗುತ್ತದೆ? Even in an instance like Nippani we have instituted Judicial Enquiry. It is just a recent occurrence. We feel that justice will be done by Magesterial inquiry. On both the sides there will not be any demoralisation. ರೈತ ಸಮುದಾಯಕ್ಕಾಗಲೀ, ಅಧಿಕಾರಿಗಳಿಗಾಗಲೀ ವಿಶ್ವಾಸ ಬರುವ ರೀತಿ

ಯಲ್ಲಿ ನ್ಯಾಯಯುತವಾದ ವಿಚಾರಣೆ ಆಗಬೇಕಾದುದು ಮುಖ್ಯ. ಮಾನ್ಯ ಕೆ. ಹೆಚ್. ಶ್ರೀನಿವಾಸ್ ಅವರು ರೈತರಿಗೆ ವಿಶ್ವಾಸ ಮೂಡುವಂಥ ವಿಚಾರಣೆಯಾಗಬೇಕು ಎಂದು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರ ಮತ್ತು ಇತರ ಸದಸ್ಯರ ಅನಿಸಿಕೆ ಕೂಡ ಅದೇ ಆಗಿದೆ. ಗೋಲೀಬಾರ್ ನಡೆದಿದೆ ರೈತರ ಮನಸ್ಸಿನಲ್ಲಿ ಅಲ್ಲೋಲಕಲ್ಲೋಲ ಆಗಿದೆ, ಅದನ್ನು ಸ್ಥಿರತೆಗೆ ತರಬೇಕು, ಅವರ ಮನಸ್ಸಿನಲ್ಲಿ ನೆಮ್ಮದಿ ತರಬೇಕು, ಆ ದೃಷ್ಟಿಯಿಂದ ವಿಚಾರಣೆ ಮಾಡಬೇಕೆಂದು ಹೇಳಿದರು. ರೈತ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಅಡಿಷನಲ್ ಮ್ಯಾಜಿಸ್ಟ್ರೇಟರನ್ನು ವಿಚಾರಣೆಗೆ ನೇಮಕ ಮಾಡಿದ್ದೇವೆ. ರೈತರ ಮನಸ್ಸಿನಲ್ಲಿರತಕ್ಕ ಸಂಶಯವನ್ನು ನಿವಾರಣೆ ಮಾಡಬೇಕೆಂಬುದೇ ನಮ್ಮ ಉದ್ದೇಶ. ಈ ಘಟನೆಯು ಯಾವುದೋ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಬಹುಶಃ ನ್ಯಾಯಾಂಗ ವಿಚಾರಣೆಯಾಗಬೇಕೆಂದು ವಿರೋಧಪಕ್ಷದವರು ಹೇಳುತ್ತಿದ್ದಾರೆ. ಆ ಹಿನ್ನೆಲೆ ಸರಿಯಾಗಿ ನಿಮ್ಮ ವಾದದಲ್ಲಿ ಸಾಬೀತಾಗಿಲ್ಲ. ಹಿನ್ನೆಲೆಯ ಸ್ಪಷ್ಟ ನಿರೂಪಣೆ ವಿರೋಧಪಕ್ಷದವರಲ್ಲಿದ್ದಿದ್ದರೆ ನ್ಯಾಯಾಂಗ ವಿಚಾರಣೆಗೆ ಒತ್ತಾಯ ಮಾಡುತ್ತಲೇ ಇರಲಿಲ್ಲ. ಮಂತ್ರಿ ಮಂಡಲದಲ್ಲಿರುವ ಮಾನ್ಯ ಸದಸ್ಯರು ವಿಚಾರವನ್ನು ತಮ್ಮ ಮುಂದಿಟ್ಟಿದ್ದಾರೆ. ಅದನ್ನು ಪುನರ್ ವಿಮರ್ಶೆ ಮಾಡಿ ನೋಡಿದಾಗ ತಮ್ಮ ಹಿನ್ನೆಲೆ ಸರಿಯಿಲ್ಲ ಎಂದು ಗೊತ್ತಾಗುತ್ತದೆ. ದುರ್ಘಟನೆ ನಡೆದಿದೆ. ಗೋಲಿ ಬಾರ್ ಆಗಿದೆ. ಅದಕ್ಕೆ ಸೀಮಿತವಾಗಿ ವಿಚಾರಣೆಗೆ ನೇಮಕ ಮಾಡಿದೆ. ಈಗ ಇರುವ ವಾತಾವರಣವನ್ನು ಕದಡದೇ ಸರಿಯಾದ ವಿಚಾರಣೆ ಆಗುವ ರೀತಿಯಲ್ಲಿ ಸಹಕಾರವನ್ನು ರೈತ ಸಮುದಾಯದವರು ಕೊಟ್ಟರೆ ಸರಿಯಾದ ತೀರ್ಪು ಖಂಡಿತವಾಗಿ ಬರುತ್ತದೆ ಎಂಬ ವಿಶ್ವಾಸವನ್ನು ನಾವು ಇಟ್ಟುಕೊಳ್ಳೋಣ. ವಿಚಾರಣೆ ಮಾಡಲು ಯಾವ ಅಧಿಕಾರಿ ನೇಮಕವಾಗಿದ್ದಾರೆ ಅವರ ಮೇಲೆ ಯಾವ ರೀತಿಯ ಆರೋಪಣೆಯನ್ನೂ ಮಾಡಬಾರದು. After all he is also a District Magistrate. You know, that such judicial powers have been impartially exercised by such authorities. ಆದ್ದರಿಂದ ಈ ಬಗ್ಗೆ ಹೆಚ್ಚು ಮುಂದುವರಿಸಿಕೊಂಡು ಹೋಗದೇ ಸರ್ಕಾರ ಯಾವ ನಿರ್ಣಯವನ್ನು ತೆಗೆದುಕೊಂಡಿದೆ ಅದಕ್ಕೆ ಒಪ್ಪಿಗೆ ಕೊಡಬೇಕು. ತಪ್ಪಿತಸ್ಥರನ್ನು ಯಾವುದೇ ರೀತಿಯಲ್ಲಿ ರಕ್ಷಣೆ ಮಾಡತಕ್ಕ ನೀತಿ ಅಥವಾ ರೀತಿ ಸರ್ಕಾರದ್ದಲ್ಲ. ತಪ್ಪಿತಸ್ಥರು ಯಾರೇ ಆಗಿರಲಿ ಅವರನ್ನು ಅಡಿಷನಲ್ ಮ್ಯಾಜಿಸ್ಟ್ರೇಟರಿಂದ ವರದಿ ಬಂದಕೂಡಲೇ ಶಿಕ್ಷೆ ಮಾಡತಕ್ಕ ವ್ಯಾಪಕ ನೀತಿಗೆ ಸರ್ಕಾರ ಬದ್ಧವಾಗಿದೆ. ಆದ್ದರಿಂದ ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸಬೇಕೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇನ್ನೂ ಏತಕ್ಕೆ?

ಶ್ರೀ ಎಂ. ಸಿ. ನಾಣಯ್ಯ.—ನೀವು ಹೇಳುವುದನ್ನೇ ಒಪ್ಪಿಕೊಳ್ಳುವ ಹಾಗಿದ್ದರೆ ನಾವು ಏತಕ್ಕಿಲ್ಲಿರಬೇಕು? ನಾವು ಈ ವಿಚಾರದಲ್ಲಿ ನ್ಯಾಯಾಂಗ ತನಿಖೆಯಾಗಬೇಕೆಂಬ ವಾದವನ್ನು ಮಂಡಿಸುವುದಕ್ಕೆ ಪ್ರಬಲವಾದ ಕಾರಣಗಳಿವೆ. ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ತನಿಖೆ ಮಾಡಿಸಲು ಆಜ್ಞೆ ಮಾಡಿದ್ದೀರಿ. Let me make it very frank to all the members on the opposite side. We know that our Officers have got highest integrity. That I am not going to deny. But the manner in which the administrative interferences have taken place in the past in respect of certain instances particularly when the Government itself referred a matter to the C.O.D. when those C.O.D. Officers after holding a thorough investigation filed a charge sheet. What has happened to those top officers of the Police Department is still green in the memory of all of us. We never suspect the integrity of our Officers. They have integrity. If they are allowed to function without any interference the truth will certainly come out. But unfortunately we are in a system today where executives are not being allowed to function independently and they are being demoralised

today. They have got the apprehension that by giving a report they may incur the wrath of the Government as has happened in respect of some top Officers of the Karnataka State. ಕಾರ್ಯಾಂಗದ ಒಳಗಿರತಕ್ಕ ಅಧಿಕಾರಿಗಳು ಸಿವಿಲ್ ಪ್ರೊಸೀಜರ್ ಕೋಡಿನಲ್ಲಿರತಕ್ಕ ಅಧಿಕಾರವನ್ನು ಅವರೇ ಸ್ವತಂತ್ರವಾಗಿ ನಿರ್ವಹಿಸಿದರೆ. ಸರ್ಕಾರದವರು ಹಸ್ತಕ್ಷೇಪ ಮಾಡದೇ ಹೋದರೆ ನಿಜ ಹೊರಗೆ ಬರುತ್ತದೆ ಆದರೆ ಈ ಸರ್ಕಾರ ಕೆಲವು ದಿವಸಗಳಿಂದ ನಡೆದುಕೊಂಡಿರುವ ರೀತಿಯನ್ನು ನೋಡಿದರೆ ನಿಷ್ಪಕ್ಷಪಾತವಾಗಿ, ನಿರ್ಭೀತವಾಗಿ ವಿಚಾರಣೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡತಕ್ಕ ನೈತಿಕ ಧೈರ್ಯ ಅಧಿಕಾರಿಗಳಿಗಿಲ್ಲ.

SRI M. VEERAPPA MOILY.—At the outset you said that you have got full faith in the integrity of our Officers and at the next moment you are denying it.

SRI M. C. NANAIAH.—I have qualified my statement. You please try to understand me.

SRI M. VEERAPPA MOILY.—If a particular Officer had an integrity you will never budge an inch. If you say that by interference he could be pressurised, that means he is not an officer of integrity.

SRI M. C. NANAIAH.—Sir, I can give you umpteen number of instances. I have seen what has happened. Government had demoralised the Officers. That is the reason for demanding a judicial enquiry. Instead of demoralising the Officers and putting your wrath on them I say that there is an independent body which is completely free from the executive. You had just told us...ಮಾನ್ಯ ಅರ್ಥ ಮಂತ್ರಿಗಳು ಒಂದು ಮಾತನ್ನು ಹೇಳಿದರು. ನ್ಯಾಯಾಂಗ ತನಿಖೆ ಮಾಡಿದರೆ ಹೆಚ್ಚಾಗಿ ಏನು ಅನುಕೂಲವಾಗುತ್ತದೆ ಎಂದು ಹೇಳಿದರು. ನ್ಯಾಯಾಂಗ ತನಿಖೆ ಮಾಡುವುದರಿಂದ ಏನು ಅನುಕೂಲವಾಗುತ್ತದೆ ಎಂದು ತಾವು ಕೇಳುವುದಾದರೆ ನ್ಯಾಯಾಂಗ ತನಿಖೆ ಮಾಡುವುದರಿಂದ ಸರ್ಕಾರಕ್ಕೆ ಏನು ತೊಂದರೆಯಾಗುತ್ತದೆ ಎಂದು ನಾವು ಕೇಳುತ್ತೇವೆ. ನ್ಯಾಯಾಂಗ ಎಂದರೆ it is independent of the executive. Whereas Executive Magistrate is part of the executive Magistrate is part of the executive itself ಈ ಭಾಗದಿಂದ ನಾನು ಹೇಳುತ್ತಿದ್ದೇನೆ, ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕು ಎಂದು ಸರ್ಕಾರದ ಮನಸ್ಸಿನಲ್ಲಿದ್ದರೆ. ನಾನು ಮಾನ್ಯ ಕಾಗೋಡು ತಿಮ್ಮಪ್ಪನವರ ಬಗ್ಗೆ ಯಾವ ಹಿನ್ನೆಲೆಯನ್ನೂ ಇಟ್ಟುಕೊಂಡು ಹೇಳುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಪ್ಪಾಣಿ ಘಟನೆ ಬಗ್ಗೆ ಅಡಿಷನಲ್ ಮುಖ್ಯ ಕಾರ್ಯದರ್ಶಿಯವರು ವಿಚಾರಣೆ ಮಾಡಿ ವರದಿ ಕೊಟ್ಟಿರು. ಅವರು ಪ್ರಭಾವದಿಂದ ವರದಿಯನ್ನು ಕೊಟ್ಟಿದ್ದಾರೆಂಬ ಆಪಾದನೆಯನ್ನೇನೂ ಯಾರೂ ಮಾಡಿಲ್ಲ. I can demonstrate number of instances where we have not interference. There is not a single allegation of interference In the absence of that how can you allege today when such an enquiry has been instituted?

SRI M. C. NANAIAH.—Well sir, if you brush up your memory ever since you occupied you post as a member of the Cabinet you must be knowing much more than what I know Well. I know what happened to many of the reports which have come from the C.O.D. How it lies where it lies and what administrative circular has been issued now,

we know. Even the C.O.D. Officers who have been asked to investigate into a matter are prevented from filing the charge sheet unless they have the approval of the cabinet. These are the things which are inside the circle of your Cabinet. Let me not look into that. ಮಾನ್ಯ ಅಧ್ಯಕ್ಷರೆ ನಡೆದಿರತಕ್ಕದ್ದರ ಬಗ್ಗೆ ತನಿಖೆಯಾಗಲಿ...... ನ್ಯಾಯಾಂಗ ತನಿಖೆ ಮಾಡಿದರೆ ಆಗಿರತಕ್ಕ ತಪ್ಪು ಏನು, ತಪ್ಪು ಎಲ್ಲಿ ನಡೆದಿದೆ, ಏತಕ್ಕೆ ಆಯಿತು ಎನ್ನುವುದು ಗೊತ್ತಾಗುತ್ತದೆ. ಅವರು ಕೊಟ್ಟಿರತಕ್ಕ ವರದಿಯಲ್ಲಿ ಒಂದನ್ನು ವ್ಯಾಖ್ಯಾನ ಮಾಡುವುದಕ್ಕೆ ಇಚ್ಛೆಪಡುತ್ತೇನೆ. "ಆ ಹೊತ್ತಿಗೆ ಸುಮಾರು 2,000 ಜನತ ತಂಡವೊಂದು ಅವರನ್ನು ಸುತ್ತುವರೆದರೆಂದು ವರದಿಯಾಗಿದೆ" This is a statement which the Hon. Minister makes the floor of the House ವರದಿಯಾಗಿದೆಯೆಂದರೆ, It is reported. That means this is not a fact. This type of statement he makes on the floor of he House. He further says. "ಜನರ ತಂಡ ಕೋಪೋದ್ರಿಕ್ತ ಸ್ಥಿತಿಯಲ್ಲಿದ್ದರೆಂದು ತಿಳಿದುಬಂದಿದೆ" ಇದು......

SRI M. VEERAPPA MOILY.—You must appreciate the trend of my report. As a Government I am giving a report and it is subject to the scrutiny of the Additional Magistrate. I can't say that this is a fact. This is what had happened and you can very well dispute it. ಬೀದರ್ ನಾರಾಯಣಪುರದಲ್ಲಿ ಮೆಜಿಸ್ಟೀರಿಯಲ್ ಎನ್‌ಕ್ವಯರಿ ಆಗಿದೆ. No-body has complained against that. If there is any interference or allegation, they could complain against it.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಗೋಲೀಬಾರ್‌ನಲ್ಲಿ, ಗೋಲೀಬಾರ್ ಆದಮೇಲೆ ಮೆಜಿಸ್ಟೀರಿಯಲ್ ಎನ್‌ಕ್ವಯರಿ ಆಗಿಲ್ಲವೆಂದು ಸ್ವಲ್ಪ ಹೇಳುತ್ತೀರಾ? ಎಲ್ಲಾ ಪ್ರಕರಣದಲ್ಲೂ ಎನ್‌ಕ್ವಯರಿ ಆಗಿದೆ. ಸ್ವಾಮಿ, ಮಂತ್ರಿಗಳು ಸಭೆಗೆ ವರದಿಯನ್ನು ಕೊಟ್ಟಿದ್ದಾರೆ. ಮಾನ್ಯ ಮಿತ್ರರಾದ ಶ್ರೀನಿವಾಸ್ ಅವರು ಹೇಳಿದ್ದಾರೆ, ಇವರೂ ಕೂಡಾ ಹೇಳಿದರು, ಮಾನ್ಯ ಶ್ರೀನಿವಾಸ್ ಅವರು ಹೇಳಿದರು "ಎಲ್ಲಾ ಮಧುರ ಬಾಂಧವ್ಯವಾಯಿತು, ಕಾಫಿ ತಿಂಡಿ ಎಲ್ಲಾ ತಿಂದು ಪೋಲೀಸರು ಎಲ್ಲಾ ಹಸ್ತಲಾಘ ಮಾಡಿ ಗಾಡಿ ತಿರುಗಿಸುವುದಕ್ಕೆ ಹೋದಾಗ, ಹಿಡಿದುಕೊಂಡುಬಿಡ್ತು ಗಾಡಿ, ಆಮೇಲೆ ಈ ಘಟನೆ ಆಯಿತು" ಎಂದು ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಸ್ಥಳಕ್ಕೆ ಹೋಗಿ ಪ್ರತಿಯೊಂದು ವಿಷಯವನ್ನು ಸಂಗ್ರಹ ಮಾಡಿಕೊಂಡು ಬಂದು ಪ್ರಾಮಾಣಿಕವಾಗಿ ಹೇಳಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಲ್ಲಿ ಏನು ಹೇಳಿದ್ದಾರೆ ಅದನ್ನು ಅನಲೈಸ್ ಮಾಡಿ ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಮೇಲೆ ನನಗೆ ಅಪಾರ ಗೌರವ ಇದೆ. ಮಾನ್ಯ ಸದಸ್ಯರು ನಿಷ್ಪಕ್ಷಪಾತವಾಗಿ ಸ್ಥಳದಲ್ಲಿ ನಡೆದ ವಿಷಯಗಳನ್ನು ಸಂಗ್ರಹಣೆ ಮಾಡಿ ಈ ಸಭೆಗೆ ವರದಿಯನ್ನು ಕೊಟ್ಟಿದ್ದಾರೆ ಒಂದು ವೇಳೆ ನಾವು ಇತ್ತಕಡೆಯಿಂದ ಸರ್ಕಾರಕ್ಕೆ ವರದಿ ಕೊಟ್ಟಿದ್ದರೆ ಸರ್ಕಾರಕ್ಕೆ ಕಪ್ಪು ಚುಕ್ಕಿಯನ್ನು ಇಡುವ ಸಾಧ್ಯತೆ ಇದೆಯೆನ್ನುವ ಅಭಿಪ್ರಾಯವನ್ನು ಪಡಬಹುದಾಗಿತ್ತು. ಆದರೆ ಮಾನ್ಯ ಶ್ರೀನಿವಾಸ್ ಅವರೇ ಸ್ಥಳದಲ್ಲಿ ನಡೆದಿರತಕ್ಕ ವಿದ್ಯಮಾನಗಳ ಬಗ್ಗೆ ಸಭೆಯ ಮುಂದೆ ಚಿತ್ರಿಸಿದ್ದಾರೆ. ಮಾನ್ಯ ಶ್ರೀನಿವಾಸ್ ಅವರು ಹೇಳಿರತಕ್ಕದ್ದಕ್ಕೂ, ಸರ್ಕಾರ ಕೊಟ್ಟಿರತಕ್ಕ ಉತ್ತರಕ್ಕೂ ಏನಾದರೂ ಹೋಲಿಕೆ ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ಯಾವುದಾದರೂ ಒಂದು ಅಂಶ ಹೋಲಿಕೆ ಆಗುತ್ತದೆಯೇ? ಶ್ರೀ ತಿಮ್ಮಪ್ಪನವರಿಗೆ ಪ್ರಾಸಿಕ್ಯೂಟ್ ಮಾಡತಕ್ಕಂತಹ ದೃಷ್ಟಿಯಿಂದ ಈ ಒಂದು ಪ್ರಸ್ತಾಪ ಮಾಡಿದ್ದಾರೆಂದು......

SRI M. VEERAPPA MOILY.—I have not said that.

ಶ್ರೀ ಎಚ್. ಡಿ. ದೇವೇಗೌಡ.—ಇರಲಿ, ತಾವು ತಿಮ್ಮಪ್ಪನವರನ್ನು ಪ್ರಾಸಿಕ್ಯೂಟ್ ಮಾಡುವ ವಿಚಾರ ನಮ್ಮ ಮುಂದೆ ಇಲ್ಲ. ಆದರೆ ಪೋಲೀಸ್ ಅಧಿಕಾರಿಗಳ ವರ್ತನೆ ಈ ಸಮಯದಲ್ಲಿ ಸಮಂಜಸವಾಗಿದೆಯೇ? ಅವರು ಹೇಳಿದರು 2 ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ರೈತರ ಚಳುವಳಿ, ಒಂದು

ಹೋರಾಟ ಶಾಂತಿ ಮತ್ತು ಸಮಾಧಾನದಿಂದ ನಡೆಯುತ್ತಿರತಕ್ಕದ್ದನ್ನು ಅವರು ನೋಡಿಕೊಂಡು ಬರುತ್ತಿದ್ದಾರೆ ಎಂದು. ಇಲ್ಲೇ ಉದ್ಭವ ಆಗುವುದು. ಒಂದು ಕಡೆ ಸರ್ಕಾರದ ನಿಲುವು, ರೈತರ ಹೋರಾಟವನ್ನು ಹತ್ತಿಕ್ಕಬಾರದು ಎನ್ನುವ ಮನೋಭಾವದಿಂದ ಇರುವುದು, ಅದನ್ನು ದೃಢೀಕರಿಸುವ ಸನ್ನಿವೇಶದಲ್ಲಿ ಏನು ಮಾಡಿದ್ದೀರಿ ? ಇಲ್ಲೇ ಸಮಸ್ಯೆ ಉದ್ಭವವಾಗಿದೆ. ಮಂತ್ರಿಗಳು ಆ ಸಭೆಗೆ ಹೋಗುವುದಿಲ್ಲವೆಂದು ಗೊತ್ತಾದ ಮೇಲೆ ೭೦ ಜನರ ಪೋಲೀಸ್ ಅಧಿಕಾರಿಗಳ ತಂಡ ಏಕೆ ಅಲ್ಲಿಗೆ ಹೋಗಬೇಕಾಗಿತ್ತು ? ತಾವು "೨೫–೫–೮೨ರಲ್ಲಿ ಸಾಕಷ್ಟು ಪೋಲೀಸರ ಬಂದೋಬಸ್ತು ಮಾಡುವುದು ಅಗತ್ಯ ಇತ್ತು. ಕಾರಣ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಬಾರದಿದ್ದರೂ ಕೂಡಾ ಸಮ್ಮೇಳನ ನಡೆಯುವುದಾಗಿ ಸ್ಥಳೀಯ ಅಧಿಕಾರಿಗಳಿಗೆ ಗೊತ್ತಾಯಿತು'' ಎಂದಿದ್ದೀರಿ. ಯಾರು ಸ್ವಾಮಿ ಹೇಳಿದರು ? ನಾಳೆ ಮಂತ್ರಿಗಳು ಬಾರದೇ ಇದ್ದರೂ ನಾವು ರೈತರ ಸಭೆಯನ್ನು ನಡೆಸುತ್ತೇವೆಂದು ಯಾರು ಹೇಳಿದರು ? ವಿಚಾರಣೆಯಾಗಬೇಕು. ಅಲ್ಲಿ ರೈತ ಕಾರ್ಮಿಕರ ಸಂಘಟನೆಯನ್ನು ಮುರಿಯುವುದಕ್ಕೆ ನಾಗಸಮುದ್ರ ಗ್ರಾಮದವರು ಹೋಗುತ್ತಿದ್ದಾರೆಂದು ಹೇಳಿ ಈ ಒಂದು ಬಂದೋಬಸ್ತು ಮಾಡಬೇಕಾಗಿ ಬಂತೆನ್ನುವ ಅಭಿಪ್ರಾಯವನ್ನು ಹೇಳಿದ್ದೀರಿ. ನಾನು ಸಭೆಗೆ ಹೋಗುವುದಿಲ್ಲವೆಂದು ಮಾನ್ಯ ಮಂತ್ರಿಗಳೇ ಹೇಳಿದಮೇಲೆ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ೧೧.೧೫ಕ್ಕೆ ಪೋಲೀಸರನ್ನು ಯಾರು ಕಳುಹಿಸಿದ್ದು ? ಪೋಲೀಸರು ಗ್ರಾಮದತ್ತ ಮತ್ತಷ್ಟು ತೆರಳಿದರು. ಅಲ್ಲಿ ಗುಂಡಿಯನ್ನು ತೆಗೆಯಲಾಗಿತ್ತು ಮತ್ತಷ್ಟು ತೆರಳಿದರು. ಹಾಗೂ ೫ ಗಂಟೆಗೆ ಫೈರಿಂಗ್ ಆಗಿದೆ'' ಎಂದು ಹೇಳುತ್ತಿದ್ದೀರಿ. ೧೧.೧೫ ರಿಂದ ೫ ಗಂಟೆಯವರೆಗೆ ಪೋಲೀಸರಿಗೂ ಅವರಿಗೂ ಸರಸಸಲ್ಲಾಪ ನಡೆಯುತ್ತಿತ್ತೇ ? ಘರ್ಷಣೆ ಯಾಗುತ್ತಿತ್ತೇ ೫ ಗಂಟೆಗೆ ಪೋಲೀಸ್ ಫೈರಿಂಗ್ ಆಗಿದೆಯೆಂಬುದು ವಿಭಿನ್ನ ಹೇಳಿಕೆ. ತಿಳಿಯಿತಲ್ಲಾ ? ಇದು ಅಧಿಕಾರಿಗಳು ಕೊಟ್ಟಿರತಕ್ಕ ವರದಿ. ಸ್ವಾಮಿ, ೨ ವರ್ಷದಿಂದ ಇವತ್ತಿನವರೆಗೆ ಪೋಲೀಸ್ ಅಧಿಕಾರಿಗಳು ಈ ರಾಜ್ಯದಲ್ಲಿ ರೈತರ ಹೋರಾಟಕ್ಕೆ ಸಂಬಂಧಪಟ್ಟಹಾಗೆ ಹಲವಾರು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ. ನರಗುಂದ. ನವಲಗುಂದ, ನಿಪ್ಪಾಣಿಗಳಲ್ಲಿ ನಡೆದ ಘಟನೆಗಳನ್ನು ಮಾನ್ಯ ಗುಂಡೂರಾಯರೇ ಹೇಳಿ ಮಾಡಿಸಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಅಧಿಕಾರಿಗಳು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಸಂಯಮ ಮೀರಿ ನಡೆದರೆ ಇಂತಹ ಸನ್ನಿವೇಶ ಬರಬಹುದು. ಇದರ ಬಗ್ಗೆ ವಿಚಾರಣೆಯಾಗಬೇಕು. ಮಾನ್ಯ ತಿಮ್ಮಪ್ಪನವರು ಹೇಳಿದರು, ನಾವು ರೈತ ವಿರೋಧಿ ಅವರು ಎಂದು ಭಾಷಣ ಮಾಡುವುದಕ್ಕೆ ಹೋಗಲಿಲ್ಲ. ತಾವೇ ಪತ್ರಿಕೆಯಲ್ಲಿ ವರದಿ ಕೊಟ್ಟಿದ್ದೀರಿ. "ನನ್ನ ಕೊಲೆಗೆ ಸಂಚು ಕೆಲವರಿಂದ ನಡೆಯತಕ್ಕದ್ದು......

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಹೇಳಿದ್ದು ಏನೆಂದರೆ, suspicion is lurking in the minds of......I have got a copy of it.

> "I received many calls from my friends that Nanjundaswamy and Sundaresh have planned to take away my life but I do not believe on that. Now, after the Nagasamudra incident and their patently false statement, suspicion is lurking in my mind that they might be having some such motive."

ಶ್ರೀ ಎಚ್. ಡಿ. ದೇವೇಗೌಡ.—ತಾವು ಸ್ಪಷ್ಟೀಕರಣ ಕೊಟ್ಟಿದ್ದೀರಿ. ತಾವು ಸಚಿವ ಸಂಪುಟದ ಸದಸ್ಯರಿದ್ದೀರಿ. ತಾವು ಕೊಡತಕ್ಕ ಪತ್ರಿಕಾ ಹೇಳಿಕೆಯನ್ನು ಯಾವುದೇ ಆಧಾರ ಇಲ್ಲದೆ ಕೊಡುವುದಕ್ಕೆ ಹೋಗುವುದಕ್ಕೆ ಹೋಗುವುದಿಲ್ಲ. ಆಡಳಿತ ಯಂತ್ರದ ಸೌಕರ್ಯ ನಿಮಗೆ ಇದೆ. ಬೇರೆ ಬೇರೆ ಕಡೆಯಿಂದ ವರ್ತಮಾನ ತೆಗೆದುಕೊಳ್ಳುವ ಶಕ್ತಿ ನಿಮ್ಮಲ್ಲಿ ಇದೆ. ಇದನ್ನೆಲ್ಲಾ ಸ್ಪೆಷಲ್ ಡೆಪ್ಯುಟಿ ಕಮಿಷನರ್ ಎನ್‌ಕ್ವೈರಿಯಲ್ಲಿ ಅಳವಡಿಸಿದ್ದೀರಾ ? ಇದನ್ನು ಮಾನ್ಯ ಅರ್ಥ ಸಚಿವರು ಹೇಳಬೇಕು. What are the terms of reference for Special Deputy Commissioner's enquiry ? ಏನು ತಿಮ್ಮಪ್ಪನವರ ಕೊಲೆಗೆ ಸಂಚು ನಡೆದಿತ್ತೇ ? ಅಷ್ಟು ಜನ ಪೋಲೀಸಿನವರು ಅಲ್ಲಿಗೆ ಹೋಗುವ ಅಗತ್ಯ ಇತ್ತೇ ?

SRI KOGODU THIMMAPPA.—I have not alleged that they made an attempt. I said that they might be having some such motive.

ಶ್ರೀ ಎಚ್. ಡಿ. ದೇವೇಗೌಡ.—ಆ ಸಂಚಿಗೆ ಪ್ರೇರಕ ಶಕ್ತಿ ನಿಮ್ಮಲ್ಲೇ ಇರಬಹುದು ಮತ್ತೊಂದು ಇರಬಹುದು ಆ ಪ್ರಶ್ನೆ ಇಲ್ಲಿ ಬೇಡ. ಎಲ್ಲಾ ವಿಚಾರಣೆಯಾಗಬೇಕಲ್ಲ ವಿಚಾರಣೆಯಲ್ಲಿ ಈ ಬಗ್ಗೆ ವರದಿ ಕೊಡಿ ಎಂದು ಹೇಳಿದ್ದೀರಾ ? ಯಾವ ಆಧಾರದ ಮೇಲೆ ವಿಚಾರಣೆಯಾಗಬೇಕು ? ತಮ್ಮನ್ನು ಕೊಲೆ ಮಾಡಿಸಬೇಕೆಂದು ತಿಮ್ಮಪ್ಪನವರು ಹೇಳಿದ್ದಾರೆಂದು ಮಾನ್ಯ ರುದ್ರಪ್ಪನವರು ಹೇಳಿದ್ದಾರೆ. ತಮ್ಮನ್ನೇ ಕೊಲೆ ಮಾಡಿಸುವ ಸಂಚು ನಡೆದಿತ್ತೆಂದು ತಿಮ್ಮಪ್ಪನವರು ಹೇಳಿದ್ದಾರೆ. ಯಾವ ವಿಷಯದಲ್ಲಿ ವಿಚಾರಣೆ ನಡೆಯುತ್ತದೆ? ಟರ್ಮ್ಸ್ ಆಫ್ ರೆಫರೆನ್ಸ್ ಏನು ?

SRI M. VEERAPPA MOILY — This is the term of reference. "The Enquiry Officer shall *inter alia* ascertain whether any excesses were committed by the Police during the incident." ತಾವು ಹೇಳಿದ ಪ್ರಕಾರ ಗೋಲಿಬಾರ್‌ಗೆ ಸೀಮಿತವಾಗಿ ಮಾಡುವಂತಹ ಒಂದು ವಿಚಾರಣೆ. ಮಾನ್ಯ ಕಾಗೋಡು ತಿಮ್ಮಪ್ಪನವರ, ಮಾನ್ಯ ರುದ್ರಪ್ಪನವರ, ಶ್ರೀ ನಂಜುಂಡಸ್ವಾಮಿಯವರ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಗೋಲೀಬಾರ್‌ಗೂ ರುದ್ರಪ್ಪನವರಿಗೂ ಸಂಬಂಧ ಇಲ್ಲ, ನಂಜುಂಡಪ್ಪನವರಿಗೂ ಸಂಬಂಧ ಇಲ್ಲ, ಕಾಗೋಡು ತಿಮ್ಮಪ್ಪನವರಿಗೂ ಸಂಬಂಧ ಇಲ್ಲ. ಸಂಬಂಧ ಇಲ್ಲದ್ದನ್ನು ಕಲ್ಪಿಸತಕ್ಕ ವಿವಾದನನ್ನು ನಾವು ಮಾಡುವುದಿಲ್ಲವೆಂದು ನಾವು ಹೇಳಿದ್ದೇವೆ. ಈ ಬಗ್ಗೆ ನ್ಯಾಯಾಂಗ ತನಿಖೆ ವಿಚಾರಣೆ ಉದ್ಭವವಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಸಂಬಂಧ ಇಲ್ಲ ಎಂದು ಹೇಳುತ್ತಿದ್ದಾರೆ. ಈ ಘಟನೆಗೆ ಸಂಬಂಧಪಟ್ಟಹಾಗೇ ಈ ವಿಷಯವೆಲ್ಲಾ ಹೊರಗೆ ಬಂದಿರತಕ್ಕದು. ಮಾನ್ಯ ಮಂತ್ರಿಗಳು ಹೋಗತಕ್ಕ ಸನ್ನಿವೇಶದಲ್ಲಿ ಪ್ರಾಣಕ್ಕೆ ಅಪಾಯವಿದೆಯೆಂದು ಪೋಲೀಸ್ ಅಧಿಕಾರಿಗಳು ಇದನ್ನು ಮಾಡಿದ್ದರೆ ?

SRI M. VEERAPPA MOILY.—Then Dr. Nanjundaswamy and Rudrappa will come into the picture. Why should you mix up things? ಇದರಲ್ಲಿ ಎರಡು ಮುಖ ಇದೆ. ಇದನ್ನೆಲ್ಲಾ ಸೇರಿಸಿಕೊಂಡು ವಿಚಾರಣೆ ಮಾಡುವುದಾದರೆ ಒಂದು ಕಡೆ ರೈತ ಸಂಘಕ್ಕೆ ಪೆಟ್ಟು ಬೀಳುತ್ತದೆ ಮತ್ತೊಂದು ಕಡೆ the officers will also be demoralised and we are unnecessarily dragging them who are not connected even according to you and the ryots. ಇಲ್ಲಿ ಸಂಘರ್ಷದ ಪ್ರಶ್ನೆ ಪ್ರತ್ಯೇಕ ಇದೆ. ಇಲ್ಲಿ ರೈತರ ಮತ್ತು ರೈತ ಮುಖಂಡರ ವಾದ ಇಲ್ಲ. ಅವರ ಮಾತುಕತೆ ಮುಖಾಂತರ. ಅಥವಾ ಮಾತುಕತೆಯಾದ್ದರಿಂದ ಈ ಹಿನ್ನೆಲೆಯಲ್ಲಿ ಒಂದು ಸಂಘರ್ಷ ಆಗಿದೆಯೆಂದು ಯಾರೂ ಹೇಳುತ್ತಾ ಇಲ್ಲ. ಆದುದರಿಂದ ಈ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನ್ಯಾಯಾಂಗ ವಿಚಾರಣೆ ಆದರೆ ಅಧಿಕಾರಿಗಳು ಡೀಮಾರಲೈಸ್ ಆಗುತ್ತಾರೆಂದರೆ ಜ್ಯುಡಿಷಿಯರಿ ಮೇಲೆ ಕಂಟೆಂಪ್ಟ್ ಆದಹಾಗೆ ಆಗುತ್ತದೆ.

SRI M. VEERAPPA MOILY.—No, I have not said that. There are two sides here. ಒಂದು ಕಡೆ ಅಧಿಕಾರಿಗಳು, ಮತ್ತೊಂದು ಕಡೆ ಮಂತ್ರಿಗಳಾಗಲಿ, ಮತ್ತೊಂದು ಕಡೆ ರೈತ ಮುಖಂಡರಾಗಲೀ, ಎಲ್ಲಾ ವರ್ತುಲದಲ್ಲಿ ಸೇರಿಸಿಕೊಂಡು ನಾವು ಮೂಲಭೂತವಾದ ಪ್ರಶ್ನೆಯನ್ನು ಚರ್ಚೆ ಮಾಡಿ ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಮೂಲ ವಿಷಯವೇ ಮಾಯವಾಗಿ ಬೇರೆ ವಿರಹಿತ ಪ್ರಶ್ನೆ ಉದ್ಭವವಾಗಿ ಅದರ ವಿಚಾರಣೆ ನಡೆದಾಗ ನ್ಯಾಯ ಯಾರಿಗೂ ಸಿಗುವುದಿಲ್ಲ ಎನ್ನುವ ಪ್ರಶ್ನೆ ನನ್ನ ಮುಂದೆ ಬಂದಿದೆ. ಮಂತ್ರಿಗಳ ಮತ್ತು ರೈತ ಮುಖಂಡರ ಘರ್ಷಣೆ ಮತ್ತು ಸಂಘರ್ಷಣೆಯ ಕಾರಣದಿಂದಾಗಿ ಈ ಗೋಲೀಬಾರ್ ಆಗಿದೆಯೆಂದು ಈ ಒಂದು ವಿಷಯವನ್ನು ತಂದಿಟ್ಟಾಗ it demoralises everyone including the officers. That is what I said. Such a judicial enquiry will distort and demoralise everything. ಯಾವ ವಿಚಾರಣೆಯಾದರೂ ನ್ಯಾಯ ಸಿಕ್ಕುತ್ತದೆ. ನ್ಯಾಯಾಂಗ ವಿಚಾರಣೆ ಆದರೆ ಏನು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎನ್‌ಕ್ವಯರಿಯಿಂದ ಏನು ತೊಂದರೆಯಾಗುತ್ತದೆ ಎನ್ನುವ ಪ್ರಶ್ನೆಯನ್ನು ನನ್ನ ಮುಂದೆ ಹಾಕುತ್ತಿದ್ದಾರಷ್ಟೆ.

ಶ್ರೀ ಎಚ್. ಡಿ. ದೇವೇಗೌಡ.— ೮-೬-೧೯೮೨ರಲ್ಲಿ ಚಾರ್ಜ್ ಶೀಟ್ ಫೈಲ್ ಮಾಡಿದ್ದೀರಿ. ಈ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು ನೋಟೀಸ್ ಕೊಟ್ಟಿದ್ದು ೭ನೇ ತಾರೀಖಿನಂದು ದುರಾದೃಷ್ಟವಶಾತ್ ಆವತ್ತು ಸಭೆ ಸೇರುವುದಕ್ಕಾಗಲಿಲ್ಲ. ಎಷ್ಟರಮಟ್ಟಿಗೆ you are scutting the discussion on the flour of the House under the guise of *sub judice* Why things are manipulated ? ೭ನೇ ತಾರೀಖು ಚರ್ಚೆ ಮಾಡಬೇಕೆಂದು ನೋಟೀಸ್ ಬಂದ ಮೇಲೆ ೮ನೇ ತಾರೀಖು ಬೆಳಿಗ್ಗೆ they have managed to file charge-sheet. ಆದರೆ ವಿಷಯವನ್ನು ಆರೋಪಗೋಳಿಸುವುದಕ್ಕೆ ಯಾವ ರೀತಿ ನಡೆಯುತ್ತೀರಿ ಎನ್ನುವುದು ಗೊತ್ತಾಗುತ್ತದೆ ಸ್ಪೆಷಲ್ ಡೆಪ್ಯುಟಿ ಕಮೀಷನರ್ ವಿಚಾರಣೆಯಾದರೆ ಆಮೌಲ್ಯಗಳನ್ನು ಎತ್ತಿಹಿಡಿಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದಿರಿ. ಡಿಸ್ಟ್ರಿಕ್ಟ್ ಜಡ್ ನಿಂದ ವಿಚಾರಣೆಯಾದರೆ ಮೌಲ್ಯಗಳು ಗಾಳಿಗೆ ತೂರಿ ಹೋಗುತ್ತವೆ ತಮ್ಮ ಅಭಿಪ್ರಾಯ ಏನು ಎಂದು ಸ್ಪಷ್ಟವಾಗಿ ಹೇಳುತ್ತೀರಾ ?

SRI M. VEERAPPA MOILY.— It is not to be compared. District Magistrate and District Judge ಪರಸ್ಪರ ಇವರು ಮೇಲೆ ಇವರು ಕೆಳಗೆ ಎಂದು ಯಾರೂ ಇಟ್ಟುಕೊಳ್ಳಬೇಕಾಗಿಲ್ಲ There were days when even the District Magistrate, Deputy Commissioner or the District Collector used to discharge as District Judges and we had the best of the judgements. ಹಿಂದೆ ಬ್ರಿಟಿಷರ ಕಾಲದಲ್ಲಿ ಕಲೆಕ್ಟರ್ಸ್ ಇದನ್ನು ಮಾಡುತ್ತಿದ್ದರು. By this. I do not mean ನ್ಯಾಯಾಂಗ ತನಿಖೆ ಕಡಿಮೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎನ್‌ಕ್ವಯರಿ ದೊಡ್ಡದು ಎಂದು ಕಂಪೇರ್ ಮಾಡುವುದಕ್ಕೆ ಹೇಳಿದ್ದಲ್ಲ. ಪರಂಪರೆಯ ವಿಚಾರವನ್ನು ಹೇಳಿದ್ದು.

ಶ್ರೀ ಎಚ್. ಡಿ. ದೇವೇಗೌಡ.— ಹಿಂದೆ ಜಿಲ್ಲಾಧಿಕಾರಿಗಳಿಗೆ ಇದ್ದ ಅಧಿಕಾರವನ್ನು ಬೇರ್ಪಡಿಸುವುದಕ್ಕೆ ಕಾರಣ, ಈ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಮಾಡಿದ್ದು, Ultimately, executive authority sitting in Vidhana soudha should not have control over the officers. ಜಿಲ್ಲಾಧಿಕಾರಿಗಳನ್ನು ಯಾಕೆ bifurcate ಮಾಡಿದ್ದು ?

ಶ್ರೀ ಎಂ. ವೀರಪ್ಪ ಮೊಯಿಲಿ.— ಅದು ಗೊತ್ತಿದ್ದೇ ಹೇಳಿದ್ದು.

ಶ್ರೀ ಎಚ್. ಡಿ. ದೇವೇಗೌಡ.— ಕೊನೇ ಪಕ್ಷ ಡಿಸ್ಟ್ರಿಕ್ಟ್ ಜಡ್ಜ್‌ನಿಂದಲಾದರೂ ನ್ಯಾಯಾಂಗ ವಿಚಾರಣೆ ನಡೆಸಿ ಎಂದು ರೈತ ಪ್ರತಿನಿಧಿಗಳು ಕೇಳಿದ್ದಾರೆ ಈ ಬಗ್ಗೆ ತಮ್ಮಲ್ಲಿ ಪ್ರಾಮಾಣಿಕವಾದ ಮನಸ್ಸು ಇದ್ದರೆ, ಯಾರಿಂದ ತಪ್ಪು ನಡೆದಿದೆಯೆಂದು ಪ್ರಾಮಾಣಿಕತೆಯಿಂದ ತಿಳಿದುಕೊಳ್ಳಬೇಕೆಂದಿದ್ದರೆ ತಾವು ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸುವುದಕ್ಕೆ ಏನು ತೊಂದರೆ ಇದೆ ? ತಮ್ಮ ರುಚಿ ಬೀಳುತ್ತದೆಯೇ ?

SRI M. VEERAPPA MOILY.— Where ase the cogent reasons to disturb our minds to lose faith in this enquiry ? ಆದುದರಿಂದ ಇವರ ಮೇಲೆ ನಿಮಗೆ ವಿಶ್ವಾಸ ಕಡಿಮೆ ಏಕೆ ಆಯಿತು ?

ಶ್ರೀ ಜೆ. ಎಚ್. ಪಟೇಲ್ — ಈಗ ಸುತ್ತಿ ಬಳಸಿದ ಮಾತು ಏಕೆ ? ಆಗಿನ ಕಾಲದಲ್ಲಿ ರೈಲ್ವೇ ದುರಂತವಾದರೆ ರೈಲ್ವೇ ಮಂತ್ರಿ ರಾಜೀನಾಮೆ ಕೊಡುತ್ತಿದ್ದರು. ಒಂದು ಗೋಲೀಬಾರ್ ಆದರೆ ಗೃಹ ಮಂತ್ರಿ ರಾಜೀನಾಮೆ ಕೊಡುತ್ತಿದ್ದರು. ಆಗಿನ ಕಾಲದಲ್ಲಿ ಅಧಿಕಾರಿಗಳು ನಿಷ್ಠೆಯಿಂದ ಇರುತ್ತಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.— ೧೯೭೭ರಲ್ಲಿ ತಮ್ಮ ಸರ್ಕಾರ ಇದ್ದಾಗ ಅವಗಡದಲ್ಲಿ ಆದ ಬಗ್ಗೆ ಎಷ್ಟು ಮಂತ್ರಿಗಳ ಹತ್ತಿರ ನೀವು ಕೇಳಿದಿರಿ ? ಆಗ ಏಕೆ ಪ್ರಶ್ನೆ ಕೇಳಲಿಲ್ಲ ? ಈಗ ಏಕೆ ನೆನಪು ಬರುತ್ತದೆ.

ಶ್ರೀ ಜೆ. ಎಚ್. ಪಟೇಲ್.— ಆ ಮೌಲ್ಯಗಳು ಹೋಗುವುದಕ್ಕೆ ನೀವೇ ಕಾರಣರೆಂದು ನಾನು ಹೇಳಲಿಲ್ಲ. ಬಹಳ ಮಟ್ಟಿಗೆ ಹೋಗುವುದಕ್ಕೆ ನಾವೂ ಕಾರಣರು. ಅದನ್ನು ತಡೆಹಿಡಿಯುವುದಕ್ಕೂ ಆಗದಿರುವಂತಹ ಅಸಹಾಯಕ ಸ್ಥಿತಿಯಲ್ಲಿ ಇರುವುದಕ್ಕೆ ನಾವು ಕಾರಣರು.

ಶ್ರೀ ಹೆಚ್. ಗಂಗಾಧರನ್.— ಗೋಲೀಬಾರ್‌ನಿಂದ ರೈತರು ಮಡಿದಿದ್ದಾರೆ. ಆ ಬಗ್ಗೆ ಸರ್ಕಾರ ರಾಜೀನಾಮೆ ಕೊಡಬೇಕೆಂದು ಕೇಳಿದ್ದೇವೆ. ರಾಜೀನಾಮೆ ಕೊಡಲಿಕ್ಕೆ ಆಗುವುದಿಲ್ಲ ಅಂದರೆ ನಾವು ವಾಕ್‌ಔಟ್ ಮಾಡತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಯು. ಪಿ.ಯಲ್ಲಿ ಟೀಚರ್ಸ್ ಅಜಿಟೇಟ್ ಮಾಡಿದ್ದರು. ಅಲ್ಲಿ ನಿಮ್ಮ ಬಿ.ಜೆ.ಪಿ. ಪಕ್ಷಕ್ಕೆ ಸೇರಿದ ಮಂತ್ರಿಗಳು ಇದ್ದರು ಆಗ ಏನು ಮಾಡಿದಿರಿ ?

ಶ್ರೀ ಹೆಚ್. ಗಂಗಾಧರನ್.— ಅವರು ರಾಜೀನಾಮೆ ಕೇಳಿರಲಿಲ್ಲ.

(ಶ್ರೀ ಹೆಚ್. ಗಂಗಾಧರನ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಸಿ. ನಾಣಯ್ಯ.— ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕೆಂದು ಸರ್ಕಾರವನ್ನು ಬಹಳ ಕಳಕಳಿಯಿಂದ ಕೇಳಿದ್ದೇವೆ. ಅವರು ಈ ಸದನಕ್ಕೆ ಕೊಟ್ಟಿರತಕ್ಕ ಹೇಳಿಕೆ ಸತ್ಯಕ್ಕೆ ದೂರವಾದಂಥ ಹೇಳಿಕೆ. ಸರ್ಕಾರ ನ್ಯಾಯಾಂಗ ತನಿಖೆಗೆ ಒಪ್ಪದೇ ಇರುವುದರಿಂದ, ಸರ್ಕಾರದ ಈ ಮೊಂಡುತನದ ವಾದವನ್ನು ನಾವು ಒಪ್ಪದೇ ವಾಕ್‌ಔಟ್ ಮಾಡುತ್ತೇವೆ.

(ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

MR. DEPUTY SPEAKER.—Discussion on the subject concluded. Now the House stands adjourned to meet tomorrow at 1 00 P.M.

The House adjourned at Thirteen minutes past Seven of the Clock to meet again on Friday 11th June 1982 at one of the Clock